Mr. SPEAKER.—So far as this Select Committee report is concerned, the House has had opportunity to offer its opinion on the Bill, and the debate has to be confined to matters referred to in the report as per rule 71. Therefore, it may not require a whole day and as per rule 130, the Speaker has power to fix the time for each Bill, particularly the Bills relating to Finance. So far as this Bill is concerned, yesterday from 4-30 to 7-15 P.M. ample time was granted to the House for discussion. There was a general debate on the Bill itself, and, with the consent of the House, it was referred to the Select Committee. The Select Committee's Report is before you today. We may take it up after lunch and if need be we may extend the sitting for half an hour or one hour and dispose of the work for the day.

Sri J. MOHAMED IMAM.—But there is one difficulty, Sir, regarding the Appropriation Bill. The Speaker has to apply the guillotine at 5 of the clock. Suppose the discussion on the Select Committee Report goes on till four or four-thirty and then the Appropriation Bill is taken up, then we will hardly have half an hour or one hour for the Appropriation Bill.

Mr. SPEAKER.—Please read the rule.

Sri J. MOHAMED IMAM.—We have met at the scheduled time. The rule reads :

> "At any time after the introduction in the Assembly of an Appropriation Bill, the Speaker may allot a day or days."

The spirit of this rule is that the Speaker is subject to allot a day at least;

> "Jointly or severally for the completion of all or any of the stages involved in the passage of the Bill by the Assembly, and when such allotment has been made, the Speaker shall at five o'clock on the allotted day or, as the case may be, the last of the allotted days, forthwith put every question necessary to dispose of all the outstanding matters in connection with the stage or stages for which the day or days have been allotted."

Mr. SPEAKER.—In accordance with that rule, we may adopt another procedure. Till Five we can go on with these two Appropriation Bills. The Bill received from the Select Committee may be taken up after Five o'clock.

Sri J. MOHAMED IMAM.—That may be done, Sir.

MYSORE APPROPRIATION BILL, 1953.

Sri A. G. RAMACHANDRA RAO (Minister for Law and Education).—Sir, I beg to move :

> "That the Mysore Appropriation Bill, 1953, be taken into consideration."

The subject matter of this Appropriation Bill has been discussed threadbare.. ....

Mr. SPEAKER.—I think copies have been distributed a few days back. This is only a formal Bill and this may not take much time. I have no objection, as the Leader of the Opposition said, to take up both these Bills and have them considered.

Sri J. MOHAMED IMAM.—There is one technical difficulty. If we take up the first Bill, according to the rules we have to go on till five o'clock and again for the second one, another day will have to be set apart.

Mr. SPEAKER.—With mutual consent and co-operation, this can be arranged and we can get on.

Sri A. G. RAMACHANDRA RAO.—Bill No. 1 may be taken into consideration now, Sir.

Mr. SPEAKER.—We may fix half an hour for this Bill, as this is only a formal Bill.

Motion moved :

"That the Mysore Appropriation Bill, 1953, be taken into consideration."

(No one rose).

Mr. SPEAKER.—So, no one is anxious to speak.

The question is :

"That the Mysore Appropriation Bill, 1953, be taken into consideration."

The motion was adopted.

Mr. SPEAKER.—The Bill will now be taken clause by clause. Clauses 2 and 3.

The question is :

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Schedule. The question is :

"That the Schedule stand part of the Bill."

The motion was adopted.

The Schedule was added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri A. G. RAMACHANDRA RAO.—Sir, I beg to move :

"That the Mysore Appropriation Bill, 1953, be passed."

Mr. SPEAKER.—The question is :

"That the Mysore Appropriation Bill, 1953, be passed."

The motion was adopted.

MYSORE APPROPRIATION BILL, 1953.

Sri A. G. RAMACHANDRA RAO (Minister for Law and Education).—

Sir, I beg to move :

"That the Mysore Appropriation (No. 2) Bill, 1953, be taken into consideration."

Mr. SPEAKER.—Motion moved :

"That the Mysore Appropriation (No. 2) Bill, 1953, be taken into consideration."

Till Five we shall go on with this Bill, if need be, and afterwards, we may take up the Select Committee Report, regarding the other Bill.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಮಸೂದೆಯನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ಮುಖ್ಯವಾಗಿ ನಮ್ಮ ಬೆಂಬಲ ಸರ್ಕಾರದವರಿಗೆ ಬೇಕಾಗಿಲ್ಲವೆಂದು ಕಾಣುತ್ತದೆ. ನಾವು ಬೆಂಬಲ ಕೊಡಲಿ, ಇಲ್ಲದೇಯಿರಲಿ ಅವರಿಗೆ ಧೈರ್ಯವಿದೆ.

Mr. SPEAKER.—I do not think you are speaking on the merits of the Bill.

ಶ್ರೀ ಬಿ. ಹುಚ್ಚೇಗೌಡ.—ಇದುವರೆಗಾಗಲೇ ಈ ಮಸೂದೆಯ ಮೇಲಿನ ಚರ್ಚೆಯಲ್ಲಿ ಅನೇಕ ವಿಷಯಗಳು ಬಂದಿವೆ. ಸಾಮಾನ್ಯವಾಗಿ ಕೆಲಮಟ್ಟಿಗಾದರೂ ಪ್ರತಿಪಕ್ಷದ ಸಲಹೆಗಳಿಗೆ ಸರ್ಕಾರದವರು ಮಾನ್ಯತೆಕೊಡಬಹುದೆಂದು ತಿಳಿದುಕೊಂಡಿದ್ದೆವು. ಆದರೆ ನಿನ್ನೆಯ ದಿವಸ ಮುಖ್ಯ ಮಂತ್ರಿಗಳು ಮಾತನಾಡುವಾಗ ಒಂದು ವಿಷಯ ಹೇಳಿದರು. ಅದೇನೆಂದರೆ, ಕೇಂದ್ರ ಸರ್ಕಾರಕ್ಕೆ ನಮ್ಮಿಂದ ಮುಖ್ಯವಾದ ಇಲಾಖೆಗಳು ಹೋದವು. ಹೆಚ್ಚು ತೆರಿಗೆ ಹಾಕುವುದಕ್ಕೆ ಅನುಕೂಲವಾಗಿದ್ದ ಇಲಾಖೆಗಳು ಕೇಂದ್ರ ಸರ್ಕಾರಕ್ಕೆ ಹೋದವು. ಆದ ಕಾರಣ ಮಿಕ್ಕದ್ದರಲ್ಲೇ ಆದಷ್ಟು ನೋಡಿಕೊಳ್ಳಬೇಕೆಂದ ಅವರ ಕೊರತೆಯನ್ನು ಹೇಳಿದರು.

1-30 P.M.

ಇದೊಂದು ಬಹಳ ದುಃಖಕರವಾದ ವಿಚಾರವೇನೋ ಹೌದು. ಇದಕ್ಕಾಗಿ ನಾವೂ ಕೂಡ ನಿಮಗೆ ಸಹಾನುಭೂತಿ ತೋರಿಸಬಹುದೆಂದು ಭಾವಿಸಿದ್ದೇನೆ. ನಾವು ಹಿಂದಿನಿಂದಲೂ ನಿಮಗೆ ಎಷ್ಟೋ ವಿಧವಾಗಿ ಸಲಹೆಗಳನ್ನು ಕೊಟ್ಟುಕೊಂಡು ಬಂದೆವು. ಆದರೆ ನೀವು

---

* Asterisk indicates that the speech has not been revised by the member concerned.

(ಶ್ರೀ ಬಿ. ಹುಚ್ಚೇಗೌಡ)

ಮೊದಲನಿಂದಲೂ ನಮ್ಮ ಮಾತಿಗೆ ಕಿವಿ ಕೊಡಲಿಲ್ಲ. ಹೀಗೆ ಮಾಡಿದ್ದರ ಫಲವಾಗಿಯೇ ನೀವು ಈ ದಿವಸ ಹೀಗೆ ಕಷ್ಟಗಳನ್ನು ಅನುಭವಿಸುತ್ತಿದ್ದೀರಿ ಎಂದು ನಾನು ತಮಗೆ ಹೊಸದಾಗಿ ಹೇಳಬೇಕಾಗಿಲ್ಲ. ನಮ್ಮಲ್ಲಿದ್ದಂಥ ಎಂತೆಂಥ income yielding ಬಾಬುಗಳನ್ನು ಎಂದರೆ, ರೈಲ್ವೆ, ಇನ್‌ಕಂಟ್ಯಾಕ್ಸ್, ಎಕ್ಸೈಜ್, ಮೈನಿಂಗ್ ಇಂಥಾ ದೊಡ್ಡ ದೊಡ್ಡ ಬಾಬುಗಳನ್ನೆಲ್ಲಾ ಅವರು ಹೊಡೆದುಕೊಂಡು ಹೋಗಿಬಿಟ್ಟರು. ಅದಕ್ಕೆಲ್ಲಾ ಅವಕಾಶ ಮಾಡಿಕೊಟ್ಟವರೂ ನೀವೇ. ಈ ದಿವಸ ಈ ಬಾಬುಗಳಿಂದ ಕೇಂದ್ರದವರಿಗೆ ಎಷ್ಟು ಅಪಾರವಾದ ವರಮಾನ ಬರುತ್ತದೆಯೆಂಬುದನ್ನು ಹೇಳಲಿಕ್ಕಾಗುವುದಿಲ್ಲ. ನಾವು ಮೊದಲು ಈ ಬಾಬುಗಳಿಂದ ಎಷ್ಟು ವರಮಾನವನ್ನು ಪಡೆಯುತ್ತಿದ್ದೇವೋ ಅದಕ್ಕೆ 2ರಷ್ಟು 3ರಷ್ಟು ಹೆಚ್ಚಾಗಿ ಅವರು ಈ ದಿವಸ ಪಡೆಯುತ್ತಿದ್ದಾರೆ.

Sri A. BHEEMAPPA NAIK (Molakalmuru).—This is asking for making a provision for expenses in connection with certain demands. How does the question about Central Government arise ?

Mr. SPEAKER.—There is some relevancy. The Hon'ble Member may go on.

ಶ್ರೀ ಬಿ. ಹುಚ್ಚೇಗೌಡ.—ಈ ಹಿಂದೆ ನಮ್ಮ ಮೈಸೂರು ದೇಶ ಎಷ್ಟು ಸುಖವಾಗಿತ್ತೋ ಈ ದಿವಸ ಅಷ್ಟೂ ತೊಂದರೆಗೀಡಾಗಿದೆ. ಇಂಥ ಪರಿಸ್ಥಿತಿ ನಮ್ಮ ದೇಶಕ್ಕೆ ಒದಗಿದ್ದು ತುಂಬ ವ್ಯಸನಕರ. ಗೋಲ್ಡ್ ಮೈನಿಂಗ್ ಕಂಪನಿಯವರಿಂದ ಎಷ್ಟು ವರಮಾನ ಬರುತ್ತಿತ್ತು! Sea borne trade ತೆರಿಗೆಯ ಮೂಲಕ ಸುಮಾರು 63 ಲಕ್ಷ ರೂಪಾಯಿ ಅವರಿಗೆ ಈ ದಿವಸ ಸಂದಾಯವಾಗುತ್ತಿದೆ. ಹಿಂದಿದ್ದ ಸರ್ಕಾರದವರಲ್ಲಿ ಈ ಬಾಬಿನಿಂದಲೂ ನಮಗೆ ಸ್ವಲ್ಪ ಭಾಗದ ಆದಾಯವನ್ನು ಕೊಡಬೇಕೆಂದು ಕೇಳಿಕೊಂಡಿದ್ದೆವು. ಅದಕ್ಕೆ ಅವರು ಕೊಡುತ್ತೇವೆಂದೂ ಹೇಳಿದ್ದರು. ಆದರೆ ಈ ದಿವಸ ಅದಕ್ಕೂ ವಿಪತ್ತು ಬಂತು. ಹೀಗೆಯೇ ನಾನು ಯಾವ ಒಂದು ಬಾಬನ್ನು ಜ್ಞಾಪಿಸಿಕೊಂಡರೂ ಈ ದಿವಸ ಮೈಸೂರು ದೇಶಕ್ಕೆ ಬಂದಿರತಕ್ಕ ಸ್ಥಿತಿಯನ್ನು ನೋಡಿದರೆ ಖಂಡಿತ ನನಗೆ ತುಂಬ ಸಂಕಟವಾಗುತ್ತಿದೆ. ಹಿಂದಿದ್ದ ಫೋರೆಸ್ಟ್ ಇಲಾಖೆಯವರು ನಮಗೆ ತೋರಿಸಿದ್ದ ಒಂದು ರಿಯಾಯಿತಿಯಿಂದ ಸುಮಾರು 21 ಲಕ್ಷ ರೂಪಾಯಿ ನಮ್ಮ ಸರ್ಕಾರಕ್ಕೆ ಉಳಿತಾಯವಾಗುತ್ತಿತ್ತು. ತಾವೂ ಸಹ ಇದನ್ನು ಒಪ್ಪಿಕೊಂಡಿದ್ದೀರಿ. ಆದರೆ ನ್ಯಾಯವಾಗಿ ನೋಡಿದರೆ, ನಮಗೆ ಈ ಬಾಬಿನಿಂದ ಉಳಿತಾಯವಾಗುತ್ತಿದ್ದುದು ಕೇವಲ 21 ಲಕ್ಷವೇ ಅಲ್ಲ. ನನ್ನ ಲೆಕ್ಕಾಚಾರದ ಪ್ರಕಾರ ಇದು ಒಂದು ಕೋಟಿಯಾಗುತ್ತಿತ್ತೆಂದು ತಿಳಿದು ಬರುತ್ತದೆ. ಗ್ರಾಮದಲ್ಲಿರುವ ಪಟೇಲ್ ಶ್ಯಾನುಭೋಗರೂ ಕೂಡ ತಾಲ್ಲೂಕು ಕಚೇರಿಗೆ ಒಂದು ಯಾದಿ ಬರೆಯಬೇಕಾಗಿದ್ದರೆ-ಈ ದಿವಸ 2 ಆಣೆಯ ಒಂದು ಸ್ಟಾಂಪನ್ನು ಅಂಟಿಸಬೇಕಾಗಿದೆ. ಅಂತೂ ಹಾಗೂ ಹೀಗೂ ಈ ಬಾಬಿನಲ್ಲಿ ನಮ್ಮಿಂದ ಕೇಂದ್ರಕ್ಕೆ ಸಂದಾಯವಾಗತಕ್ಕದ್ದು 21 ಲಕ್ಷವೇ ಅಲ್ಲ. ಅದು ಒಂದು ಕೋಟಿಗೆ ಹತ್ತಿರಕ್ಕೆ ಮುಟ್ಟುತ್ತದೆ. ಆದರೆ ನಾವು ನಿಮಗೆ ಈ ಮೊದಲೇ ಎಚ್ಚರಿಕೆಯನ್ನು ಕೊಟ್ಟೆವು. ಆಗ ನಮ್ಮ ಮಾತಿನಿಂದ ನಿಮಗೆ ಅಷ್ಟು ಬಿಸಿ ತಾಗಲಿಲ್ಲ. ಈಗ ಈ ಎಲ್ಲ ಕಷ್ಟಗಳೂ ಬಂದ ನಂತರ ನಿಮಗೆ ಬಿಸಿತಾಗಿರುತ್ತದೆ. ತಾವು ಇಂಥ ಲಾಭದಾಯಕವಾದ 10-15 ಬಾಬುಗಳನ್ನು ಅವರಿಗೆ ಬಿಟ್ಟುಕೊಟ್ಟಹಾಗೆಯೇ ಈ ಒಂದು ವಿದ್ಯಾಭ್ಯಾಸದ ಬಾಬನ್ನೂ ನೀವು ಅವರಿಗೇ ಏಕೆ ಆ ದಿವಸವೇ ಬಿಟ್ಟು ಕೊಡಬಾರದಾಗಿತ್ತು! ಒಂದಾವರ್ತಿ ತಾವು ಹೇಳುತ್ತೀರಿ, "ನಮಗೂ ಕೇಂದ್ರಕ್ಕೂ ಯಾವ ವ್ಯತ್ಯಾಸವೂ ಇಲ್ಲ. ನಾವೆಲ್ಲರೂ ಏಕರಾಜ್ಯದ ಪ್ರಜೆಗಳು" ಎಂದು ಆದರೆ ಅವರು ನಮ್ಮನ್ನು ಒಂದು ಕಡೆಯಿಂದ ಶೋಷಣೆ ಮಾಡುವುದನ್ನು ಮಾತ್ರ ತಪ್ಪಿಸಿಲ್ಲ. ಈ ಮೊದಲೇ ಕೇಂದ್ರದವರು ನಮಗೆ ಈ ಆಹಾರ ಬಾಬಿನಲ್ಲಿ ಹೊರದೇಶದಿಂದ ತರಿಸುವಂಥ ಆಹಾರ ಸಾಮಾಗ್ರಿಗಳ ಬಗ್ಗೆ ಶೇಕಡ 75ರಷ್ಟನ್ನು ಸಬ್‌ಸಿಡಿಯ ರೂಪವಾಗಿ 10 ವರ್ಷಗಳ ಕಾಲ ಕೊಡುತ್ತೇವೆಂದು ಹೇಳಿದ್ದರು. ಹೀಗೆ ಹೇಳಿದ್ದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಅವರು ಇತ್ತೀಚೆಗೆ ನಾವು ಕೊಡುತ್ತೇವೆಂದು ಹೇಳಿದ್ದುದು ಗೋಧಿ ಮತ್ತು ಮೈಲೋ ಈ ಎರಡಕ್ಕೇ ಎಂಬುದಾಗಿ ತಿಳಿಸಿದರು, ಕೊನೆಗೆ ಯಾವುದಕ್ಕೂ ಇಲ್ಲ ಎಂದು ಕೈಎತ್ತಿಬಿಟ್ಟರು. ಹೀಗೆ ಅವರು ಮೊದಲೊಂದು ಆಸೆಯನ್ನು ತೋರಿಸಿ ಈ ದಿವಸ ನಮ್ಮನ್ನು ನಿರಾಸೆಯಲ್ಲಿ ಮುಳುಗಿಸಿದ್ದಾರೆ. ವಾಸ್ತವವಾಗಿಯೂ ಇದು ನಮ್ಮ ದೇಶದ ದುರದೃಷ್ಟ. ನಾವು ಇಲ್ಲಿಯತನಕ ಎಷ್ಟು ಪ್ರಗತಿಮಾರ್ಗದಲ್ಲಿ ಮುಂದುವರಿದುಕೊಂಡು ಬಂದಿದ್ದೇವೋ, ಅಷ್ಟೂ ಈಗ ಹಿಂದೆ ಬೀಳಬೇಕಾಗಿರುತ್ತದೆ. ಆದರೆ ಇದನ್ನೆಲ್ಲಾ ಸರಿಪಡಿಸತಕ್ಕ ಜವಾಬ್ದಾರಿ ಈ ತಪ್ಪುಗಳನ್ನೆಲ್ಲಾ ಯಾರು ಮಾಡಿದ್ದಾರೋ ಅವರ ಕೈಯಲ್ಲೇ ಇದೆ. ಹಾಗೆ ಯಾರು ಈ ತಪ್ಪುಗಳಿಗೆಲ್ಲಾ ಕಾರಣ ಕರ್ತರಾಗಿದ್ದಾರೋ ಅವರು ಇದೆಲ್ಲವನ್ನೂ ಸರಿಪಡಿಸದೇಹೋದರೆ ಅವರು ದೇಶಕ್ಕೇ ಒಂದು ದೊಡ್ಡ ದ್ರೋಹವನ್ನು ಮಾಡಿದಂತಾಗುತ್ತದೆ.

Sri K. HANUMANTHAIYA (Chief Minister).—These are the words which do not make for what is called happy feeling. This ದ್ರೋಹ is such a strong word I suppose, that the Hon'ble Member himself will see whether it is admissible to use such words.

Mr. SPEAKER.—He simply means "disservice."

ಶ್ರೀ ಬಿ. ಹುಚ್ಚೇಗೌಡ.—"ಜೋಡು ಎಲ್ಲಿ ಕಚ್ಚುತ್ತದೆ ಎಂಬುದು ಜೋಡನ್ನು ಮೆಟ್ಟತಕ್ಕವನಿಗೇ ಗೊತ್ತು" ಎಂದು ಹೇಳುವ ಮಾತಿನ ಅರ್ಥವನ್ನು ತಿಳಿಸಲು ಹಾಗೆ ಹೇಳಿದ್ದೇನೆ. ಅದಕ್ಕಿಂತಲೂ ಸುಲಭವಾದ ಬೇರೆ ಪದಗಳನ್ನು ಉಪಯೋಗಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ.

ಇನ್ನೊಂದು ಮುಖ್ಯ ವಿಚಾರ ಹೇಳಿದರು... ..

Mr. SPEAKER.—The Hon'ble Member is commenting upon the reply furnished to Question No. 393 this morning.

ಶ್ರೀ ಬಿ. ಹುಚ್ಚೇಗೌಡ.—ನಮ್ಮ ಮುಖ್ಯ ಮಂತ್ರಿಗಳು ಇನ್ನೊಂದು ಮುಖ್ಯ ವಿಚಾರ ಹೇಳಿದರು. ಅದು ಏನೆಂದರೆ—ಈಗ ಸರ್ಕಾರದವರು ಡೆವಲಪ್‌ಮೆಂಟ್ ಬಾಬಿಗೆ 92 ಲಕ್ಷ ರೂಪಾಯಿಗಳನ್ನೊದಗಿಸಿದ್ದಾರೆ,

ಅದನ್ನು ತೆಗೆದುಹಾಕಿಬಿಟ್ಟರೆ ಸಾಕು, ಅಲ್ಲಿಗೆ ಬಡ್ಜೆಟ್ಟಿನಲ್ಲಿ ಡಿಫಿಸಿಟ್ ಆಗಿರುವುದು ಸರಿಹೋಗುತ್ತದೆ, ಆಗ ಯಾರೂ ಇದನ್ನು ಡಿಫಿಸಿಟ್ ಬಡ್ಜೆಟ್ ಎಂದು ಹೇಳುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದರು. ಇವರು ಎಷ್ಟರಮಟ್ಟಿಗೆ ದೇಶದಲ್ಲಿರತಕ್ಕ ಪ್ರಜೆಗಳ ಕ್ಷೇಮಲಾಭಗಳ ಜವಾಬ್ದಾರಿಯನ್ನು ಹೊತ್ತಿದ್ದಾರೆ ಎಂಬುದನ್ನು ಈ ಒಂದು ಮಾತಿನಿಂದಲೇ ಅರ್ಥಮಾಡಿಕೊಳ್ಳಬಹುದು. ಹಿಂದಿನಿಂದಲೂ ಜನರಿಗೆ ಯಾವ ಅನುಕೂಲವೂ ಇಲ್ಲದೆ ಇರತಕ್ಕಂಥ ಮತ್ತು ಕಿತ್ತುಹಾಕಲು ಯೋಗ್ಯವಾಗಿರತಕ್ಕಂಥ ಅನೇಕ ದೊಡ್ಡ ದೊಡ್ಡ ಬಾಬುಗಳು ಎಷ್ಟೋ ಇರುತ್ತವೆ. ಅವ್ಯವಸ್ಥೆಯಿಂದ ಕೂಡಿ ಲುಕ್ಸಾನಿನಲ್ಲಿ ನಡೆಯುತ್ತಿರುವ ಎಷ್ಟೋ ಕೈಗಾರಿಕೆಗಳಿವೆ. ಅವುಗಳನ್ನು ಇಲ್ಲಿಯವರೆಗೂ ಅಭಿವೃದ್ಧಿಪಡಿಸಲು ಇವರಿಗೆ ಸಾಧ್ಯವಾಗಿಲ್ಲ. ಅತ್ತಲಾಗಿ ಅಭಿವೃದ್ಧಿಗೂ ಅವುಗಳನ್ನು ತರಲಾರರು, ಇತ್ತಲಾಗಿ ಅವುಗಳನ್ನು ಕಿತ್ತುಹಾಕಿ ಅದರಿಂದಲಾದರೂ ಹಣ ಉಳಿತಾಯಮಾಡತಕ್ಕ ಮನೋಭಾವ ಇಲ್ಲ. ಪೋಲೀಸ್ ಬಾಬಿನಲ್ಲಿ ಖರ್ಚು ಜಾಸ್ತಿಯಾಗಿದೆ.

Mr. SPEAKER.—The other day the Hon'ble Home Minister was pleased to give you fullest information regarding the profits they are earning so far as industries are concerned. Figures were made available.

ಶ್ರೀ ಬಿ. ಹುಚ್ಚೇಗೌಡ.—They are not convincing to me. ಪೋಲೀಸ್ ಬಾಬಿಗೆ 78 ಲಕ್ಷ ಮಾತ್ರ ಈ ಹಿಂದೆ ಖರ್ಚಾಗುತ್ತಿತ್ತು. ಈಗ ಅದು 112 ಲಕ್ಷಕ್ಕೆ ಹೋಗಿದೆ, ಹಾಗೆ ಆ ಡೆವಲಪ್‌ಮೆಂಟ್ ಬಾಬುಗಳ ಕಡೆ ಹೋಗತಕ್ಕ ದೃಷ್ಟಿ ಏತಕ್ಕಾಗಿ ಇಂಥ ಬಾಬುಗಳ ಕಡೆಗೆ ಖರ್ಚನ್ನು ಕಡಮೆಮಾಡಲು ಹೋಗಲಿಲ್ಲವೆಂದು ನಾನು ಪ್ರಶ್ನೆಮಾಡಬೇಕಾಗಿದೆ. 92 ಲಕ್ಷ ರೂಪಾಯಿಗಳನ್ನು ತೆಗೆದು ಹಾಕುತ್ತೇವೆ, ನೀವೇನೂ ಸುಂಕಕೊಡಬೇಡಿ ಎಂದು ಹೇಳಿದರಲ್ಲ. ಆದರೆ ಹೀಗೇಕೆ ಇವರು ಈ ಪೋಲೀಸ್ ಬಾಬಿನಲ್ಲಿ ವರ್ಷ 1ಕ್ಕೆ 25-30 ಲಕ್ಷ ರೂಪಾಯಿಗಳನ್ನು ಜಾಸ್ತಿಯಾಗಿ ಖರ್ಚುಮಾಡುವುದಕ್ಕೆ ಹೋದರು! ಒಂದು ವೇಳೆ ಹಿಂದೆ ಹೇಗೆ ಪೋಲೀಸ್ ರಾಜ್ಯವಿತ್ತೋ/ ಹಾಗೆಯೇ ಈಗಲೂ ಪೋಲೀಸ್ ರಾಜ್ಯಸ್ಥಾಪನೆಮಾಡುತ್ತೇವೆಂದು ಇವರು ತಿಳಿಸಿದ್ದರೆ ಆಗ ನಾನು ಅದಕ್ಕೂ ಒಪ್ಪುತ್ತಿದ್ದೆ! ಇವರ ನಿಗಾ ಹೇಗೆ ಆ ಡೆವಲಪ್‌ಮೆಂಟ್ ಬಾಬುಗಳ ಮೇಲೆ ಏಕ್‌ದಂ ಬಿತ್ತೋ ಹಾಗೆಯೇ ಈ ಪೋಲೀಸ್ ಬಾಬಿನ ಮೇಲೂ ನಿಗಾ ಇಟ್ಟು ಅದೇ ರೀತಿಯಾಗಿ ಇದನ್ನು ಕಡಮೆಮಾಡಬೇಕಾಗುತ್ತದೆ. ಈ ರೀತಿ ಅವರೇನಾದರೂ ಎರಡನ್ನೂ ಬೆರಸಿ ಹೇಳಿದ್ದರೆ ನಾನು ಅವರ ಮಾತುಗಳನ್ನು ನ್ಯಾಯವೆಂದು ಒಪ್ಪುತ್ತಿದ್ದೆನು.

ಇನ್ನು ಮೂರನೆಯದಾಗಿ, ಹಿಂದಿನ ಮಂತ್ರಿಮಂಡಲವಾಗಲಿ, ಈಗಿನ ಮಂತ್ರಿಮಂಡಲವಾಗಲಿ, ಏನೇನು ಅನವಶ್ಯಕವಾದ ಖರ್ಚು ವೆಚ್ಚಗಳನ್ನು ಮಾಡಿಕೊಂಡು ಬಂದಿದೆಯೋ ಅದರಲ್ಲಿ ಲೋಪದೋಷಗಳೇನಿರುತ್ತವೆ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಈ ದಿವಸ ಒಂದು ಸಮಿತಿಯನ್ನು ನೇಮಕಮಾಡೋಣವೆಂದು ನಾವು ತಿಳಿಸಲಿಲ್ಲವೇ? ಆದರೆ ಅಂಥ ಒಂದು ಸಮಿತಿಯನ್ನು ನೇಮಕಮಾಡೋಣವೆಂದು ಹೇಳಿದ್ದು ಕೇವಲ ಇನ್ನು ಮುಂದಾದರೂ ನಮ್ಮ ಖರ್ಚುವೆಚ್ಚಗಳ ಬಗ್ಗೆ ನಾವು ಎಷ್ಟರಮಟ್ಟಿಗೆ ಮಿತವ್ಯಯದಿಂದ ವರ್ತಿಸಬೇಕು, ಇರತಕ್ಕ ಆದಾಯದಲ್ಲಿ ನಮ್ಮ ಖರ್ಚು ವೆಚ್ಚಗಳನ್ನೆಲ್ಲಾ ಹೇಗೆ ಸರಿತೂಗಿಸಿಕೊಂಡು ಹೋಗಬೇಕು. ಹೆಚ್ಚಿನ ಕಂದಾಯ ಹಾಕಲೇಬೇಕೆಂದು ಅಂಥ ಅನಿವಾರ್ಯ ಸಂದರ್ಭಗಳು ಕಂಡುಬಂದರೆ, ಆ ಕಂದಾಯವನ್ನು ಯಾವ ಬಾಬುಗಳ ಮೇಲೆ ಹಾಕತಕ್ಕದ್ದು ನ್ಯಾಯ, ಯಾವ ಬಾಬಿನ ಮೇಲೆ ಹಾಕಿದರೆ ಅನ್ಯಾಯವಾಗುತ್ತದೆ ಎಂಬುದನ್ನೆಲ್ಲಾ ವಿಮರ್ಶೆಮಾಡಿ ಒಂದು ಸುಲಲಿತವಾದ ವ್ಯವಸ್ಥಿತ ಮಾರ್ಗವನ್ನು ಈ ಆಡಳಿತದ ಬಗ್ಗೆ ಹಾಕೋಣವೆಂಬ ಉದ್ದೇಶದಿಂದ ನಾವು ಒಂದು ಸಮಿತಿಯನ್ನು ನೇಮಕಮಾಡಿ ಎಂದು ಕೇಳಿದೆವೇ ಹೊರತು ಮತ್ತೆ ಬೇರೆ ಇಲ್ಲ. ಯಾವ ಮಂತ್ರಿಮಂಡಲದ ಮೇಲಾಗಲಿ ಒಂದು ದೋಷಾರೋಪಣೆಯನ್ನು ಹೊರಿಸಬೇಕೆಂಬ ಉದ್ದೇಶ ನಮಗಿಲ್ಲ. ಆದರೆ ತಾವು ಅದಕ್ಕೂ 'ನ' ಕಾರ ಹೇಳಿದಿರಿ.

ಈಗ ನಮಗೆ ಬಂದಿರತಕ್ಕ ಹಣದ ಮುಗ್ಗಟ್ಟು ಏತಕ್ಕಾಗಿ ಬಂತು, ನಮ್ಮ ಖರ್ಚುವೆಚ್ಚಗಳೆಲ್ಲಾ ಏರುತ್ತಿವೆಯೋ ಅಥವಾ ಕಡಮೆಯಾಗುತ್ತಿವೆಯೋ ಎಂಬುದಕ್ಕೆ ಕಾರಣಗಳನ್ನು ಕಂಡುಹಿಡಿದು, ಹೆಚ್ಚಿನ ಖರ್ಚು ಬಾಬುಗಳನ್ನು ತಗ್ಗಿಸುವುದಕ್ಕೂ, ಆದಾಯ ಬಾಬುಗಳನ್ನು ಕಂಡುಹಿಡಿಯುವುದಕ್ಕೂ ಅಂಥ ಒಂದು ಸಮಿತಿಯ ನೇಮಕ ಅಗತ್ಯವಾಗಿತ್ತು. ನಮ್ಮಲ್ಲಿ ಈಗ 5-6 ಕೈಗಾರಿಕಾ ಕಾರ್ಖಾನೆಗಳಿವೆ. ಅವುಗಳಿಂದ ಮೂರು ಕಾಸು ಆದಾಯ ಬರುವುದಿಲ್ಲ, ಅಂಥವುಗಳನ್ನು ಅನಾವಶ್ಯಕವಾಗಿ ಇನ್ನೂ ಮುಂದುವರಿಸಿಕೊಂಡು ಬರುತ್ತಿದ್ದೀರಿ. ಉದಾಹರಣೆಗೆ ಹೇಳುವುದಾದರೆ—ಹಿಂದೂಸ್ತಾನ್ ಏರ್‌ಕ್ರಾಫ್ಟ್, ಇಂಡಿಯನ್ ಟೆಲಿಫೋನ್ ಕಾರ್ಖಾನೆ, ರೇಡಿಯೋ ಎಲೆಕ್ಟ್ರಿಕ್ ಫ್ಯಾಕ್ಟರಿ ಇತ್ಯಾದಿ ಅನೇಕ ಕಾರ್ಖಾನೆಗಳಿಗಾಗಿ 3 ಕೋಟಿ ಬಂಡವಾಳಕ್ಕೆ ಮೇಲ್ಪಟ್ಟು ಹಾಕಿದ್ದರೂ, ಅವುಗಳಿಂದ ಮೂರು ಕಾಸು ಕೂಡ ಆದಾಯ ಬರುತ್ತಿಲ್ಲ. ಇನ್ನು ಆ ಭದ್ರಾವತಿ ಕಾರ್ಖಾನೆಗೆ ಮೈಸೂರು ದೇಶದವರು ಎಷ್ಟು ಕೋಟಿ ರೂಪಾಯಿಗಳನ್ನು ದಂಡವಾಗಿ ತೆತ್ತಿದ್ದಾರೆ? ಸುಮಾರು ಶೇಕಡ $6\frac{1}{4}$ರಂತೆ ಬಡ್ಡಿಯನ್ನು ತೆತ್ತಿದ್ದೇವೆ. ಅದು ಸ್ಥಾಪಿತವಾದ 16 ವರ್ಷಗಳತನಕ ಅದರಿಂದ ಒಂದು ಕಾಸೂ ಕೂಡ ಫಾಯಿದೆ ಎಂಬುದನ್ನೇ ಕಾಣಲಿಲ್ಲ. ಎಷ್ಟೋ ಹಣವನ್ನು ರೈಟ್ ಆಫ್ ಮಾಡಲಾಯಿತು.

ಅಧ್ಯಕ್ಷರು.—89 ಲಕ್ಷ ರೂಪಾಯಿಗಳು.

ಶ್ರೀ ಬಿ. ಹುಚ್ಚೇಗೌಡರು.—ಮಾನ್ಯ ಅಧ್ಯಕ್ಷರು ಖಚಿತವಾದ ಅಂಕಿ ಅಂಶಗಳನ್ನು ತಿಳಿಸಿದ್ದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಆದರೆ ಈ ಯುದ್ಧ ಪ್ರಾರಂಭವಾದಿತ್ತೀಚಿನಿಂದ ಏನೋ ಕೊಂಚ ಲಾಭ ಬರಲು ಪ್ರಾರಂಭವಾಗಿದೆ. ಈಗಲೂ ಕೂಡ ನಾವು ಈ ಕಂಪೆನಿಗೋಸ್ಕರ ಹಿಂದೆ ರೈಟ್ ಆಫ್ ಮಾಡಿರತಕ್ಕ ಮೊಬಲಗನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಇದರಿಂದ ಇನ್ನೂ ಲಾಭ ಬರುತ್ತಿಲ್ಲವೆಂದೇ ಭಾವಿಸಬೇಕಾಗುತ್ತದೆ. ಸುಮಾರು 12-13 ಲಕ್ಷ ಬಡ್ಡಿಯನ್ನೇ ತೆತ್ತಿದ್ದೇವೆ. ಇದೆಲ್ಲವನ್ನೂ ಮರೆತು ತಾವೀ ದಿವಸ ಈ ಕಂಪೆನಿಯನ್ನು ಹೊಗಳಲು ಹೊರಟಿದ್ದೀರಿ. 1930ರಲ್ಲಿ ಸಂಸ್ಥಾನಕ್ಕೆ ಜಮೀನ್ ಕಂದಾಯದಿಂದ ಬರುತ್ತಿದ್ದ ಉತ್ಪತ್ತಿ ಇತರ ರಾಜಕೀಯ ಉತ್ಪತ್ತಿಗಳಲ್ಲಿ ಶೇಕಡ 50ರಷ್ಟಾಗುತ್ತಿತ್ತು. ಆಗ ಅಷ್ಟೇ ಉತ್ಪತ್ತಿಯಿದ್ದರೂ ಅದರಲ್ಲೇ ಅಷ್ಟೆಲ್ಲಾ ಕೆಲಸ ಕಾರ್ಯಗಳನ್ನು ಹಿಂದಿನ ಸರ್ಕಾರದವರು ನಡೆಸಿಕೊಂಡು ಬಂದಿದ್ದಾರೆ. ಆಗ ಅವರೇನೂ ಈ ರೀತಿಯಾಗಿ ರೈತರ ಮೇಲೆ ನಾನಾ ಮುಖವಾಗಿ ತೆರಿಗೆಗಳನ್ನು ಹಾಕಿ ಜನರಿಗೆ ಕಿರುಕುಳ ಕೊಡಲಿಲ್ಲ. ಅಷ್ಟೆಲ್ಲಾ ಖರ್ಚುಮಾಡಿದ್ದರೂ ಖಜಾನೆ

(ಶ್ರೀ ಬಿ. ಹುಚ್ಚೇಗೌಡ.)

ಯಲ್ಲಿ ಇನ್ನೂ ಹಣವನ್ನು ಉಳಿಸಿಕೊಂಡೇ ಬರುತ್ತಿದ್ದರು. ಆಗ ದೇಶದಲ್ಲಿ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸುವ ಸಲುವಾಗಿ 8-9 ಕೋಟಿ ರೂಪಾಯಿಗಳನ್ನು ಅವುಗಳ ಮೇಲೆ ಹಾಕಿದನಂತರವೂ 40 ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದರು.

ತಾವು ಈಗ ಕೇಂದ್ರಕ್ಕೆ ಬಿಟ್ಟುಕೊಟ್ಟಿರತಕ್ಕ ರೈಲ್ವೆ ಇಲಾಖೆಯನ್ನು ತೆಗೆದುಕೊಂಡರೆ ಅದನ್ನು 146 ಲಕ್ಷಕ್ಕೋ ಏನೋ ಬಿಟ್ಟುಕೊಟ್ಟಿದ್ದೀರಿ. ಈಗ ಅದು ಸುಮಾರು 6 ಕೋಟಿ ರೂಪಾಯಿಗಳ ಆಸ್ತಿ. ಈಗ ಅವರೇಕೆ ನಿಮಗೆ ಈ ಬಾಬಿನಲ್ಲಿ 4-5 ಲಕ್ಷ ರೂಪಾಯಿಗಳ ರಿಲೀಫ್ ಆಗಿ ಕೊಡಬಾರದು ! ಇಕಂಟ್ಯಾಕ್ಸ್ ಬಾಬಿನಲ್ಲಿ ನಮಗೆ ಸುಮಾರು 1½ ಕೋಟಿ ವರಮಾನ ವಿತ್ತು. ಆಗ ಅವರು ತೆರಿಗೆ ದರಗಳನ್ನೆಲ್ಲಾ ಏರಿಸಿ 3 ಕೋಟಿ ವರಮಾನ ಪಡೆಯುತ್ತಿದ್ದಾರೆ. ಹೀಗೆಯೇ ನಾವು ಎಷ್ಟೋ ಬಾಬುಗಳನ್ನು ಕೋಟ್ಯಾಂತರ ರೂಪಾಯಿಗಳ ವರಮಾನವಿರತಕ್ಕ ಬಾಬುಗಳನ್ನೆಲ್ಲಾ ಕೇಂದ್ರಕ್ಕೆ ಬಿಟ್ಟುಕೊಟ್ಟಿದ್ದೇವೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಮಾನ್ಯ ಸದಸ್ಯರು ಕೇಂದ್ರ ಸರ್ಕಾರವನ್ನು ಪರದೇಶಿ ಸರ್ಕಾರವೆಂದು ಭಾವಿಸಿದ್ದಂತೆ ತೋರುತ್ತದೆ.

ಶ್ರೀ ಬಿ. ಹುಚ್ಚೇಗೌಡ —ಹಾದೌದು. ನೀವೂ ಕೂಡ ನಿಮ್ಮ ಮನೆಯಲ್ಲಿರತಕ್ಕ ತಟ್ಟೆ, ಉಂಗುರ ಇತ್ಯಾದಿ ವಸ್ತುಗಳನ್ನೆಲ್ಲಾ ಅವರಿಗೆ ಕೊಟ್ಟುಬಿಡಿ, ಕಡೆಗೆ ನೀವೂ ಸ್ವಾವಲಂಬಿಗಳಾಗುತ್ತೀರಿ, ಆಗ ನಿಮ್ಮ ಸ್ವಾಭಿಮಾನವೂ ತಿಳಿಯುತ್ತದೆ. ತಮ್ಮ ವಾದಗಳೆಲ್ಲಾ One-way Traffic ಇದ್ದಂತೆ ಇವೆ. ಅವರೂ ನಾವೂ ಎಲ್ಲ ಒಂದೇ ಎಂದು ಹೇಳಬೇಕಾಗಿದ್ದರೆ, ಈ ನಾಟಕಗಳನ್ನೆಲ್ಲಾ ಸಂಪೂರ್ಣವಾಗಿ dissolve ಮಾಡಿಬಿಡಿ. ನೀವು ಸುಮ್ಮನೆ ಹಾಗೆ ಒಂದು ಕಥೆ ಹೇಳಿಕೊಂಡಿದ್ದರೆ ನಾವು ಕೇಳುವುದಿಲ್ಲ. ತಾವು ಹಾಗೆ ಎಲ್ಲವನ್ನೂ dissolve ಮಾಡಿಬಿಟ್ಟರೆ, ನಾವು ಈ ವಿಧವಾದ ಹೇಳಿಕೆಗಳನ್ನೇ ಕೊಡುವುದಕ್ಕೆ ಅವಕಾಶವಿರುವುದಿಲ್ಲ. ನಮಗೆ ಏನೇನು ಅನುಕೂಲಗಳು ಬೇಕಾಗಿವೆಯೋ ಅವುಗಳನ್ನೆಲ್ಲಾ ಕೇಂದ್ರ ಸರ್ಕಾರ ನಮಗೆ ಕಲ್ಪಿಸಿಕೊಟ್ಟರೆ ತಾನೆ ಆಗ ಅವರೂ, ನಾವೂ ಎಲ್ಲರೂ ಒಂದೇ ಎಂದು ಹೇಳುವುದಕ್ಕೆ ಸಾಧ್ಯವಿರುವುದು ? ಹೀಗೆ ಮಾಡದೆ ಸುಮ್ಮನೆ ಕೇಂದ್ರದವರು ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆ, ಅದು ನಮಗೂ ಅನ್ವಯಿಸತಕ್ಕದ್ದಾಗಿದೆ ಎಂದು, ಜನ ಇದ್ದಾರೆಂದು ನೀವು ಎಲ್ಲದಕ್ಕೂ ಕೈಎತ್ತಿದರೆ ನಾವೇನು ಮಾಡುವುದು ! ನಮ್ಮ ದುಡ್ಡು ಹೊರಗಡೆಗೆ ಎಷ್ಟು ಹೋಗಿದೆ, ಹೊರಗಡೆಯಿಂದ ಅವರ ದುಡ್ಡು ನಮಗೆ ಎಷ್ಟು ಬಂದಿದೆ ಎಂಬುದನ್ನಾದರೂ ನೀವು ಲೆಕ್ಕ ಹಾಕಿ ನೋಡಿದ್ದೀರಾ ? ಹಿಂದಿದ್ದ ಬ್ರಿಟಿಷ್ ಸರ್ಕಾರವನ್ನು ನಾವು ಕೀಳಾದ್ದೆಂದು ಹೇಳುತ್ತಿದ್ದೆವು ಆದರೆ ಈಗ, ಅವರು ಮಾಡುತ್ತಿದ್ದಷ್ಟು ಅನುಕೂಲ ಸಹ ಆಗುತ್ತಿಲ್ಲ. ಕೇಂದ್ರದವರು ದೊಡ್ಡದಾಗಿ ಒಂದು ಮಿಲಿಟರಿಯನ್ನು ಇಟ್ಟುಕೊಂಡು ಅದಕ್ಕಾಗಿ ದೇಶದ ಉತ್ಪನ್ನದಲ್ಲಿ ಶೇಕಡ 50ರಷ್ಟನ್ನು ಖರ್ಚುಮಾಡುತ್ತಿದ್ದಾರೆ. ನಮಗೂ ಕೂಡ ಇಲ್ಲಿಯತನಕ ಕೇಂದ್ರಕ್ಕೆ ನಡತೆಯನ್ನು ತೋರಿಸಿ ಸಾಕಾಯಿತು. ಇನ್ನು ತಾಳ್ಮೆ ತೋರಿಸತಕ್ಕ ಕಾಲ ಮುಗಿಯಿತು. ನಿಜವಾಗಿಯೂ ನಮಗಿದು ಎಷ್ಟರಮಟ್ಟಿಗೆ ತೊಂದರೆಯನ್ನುಂಟುಮಾಡುತ್ತದೆ ನೋಡಿ. ನಮ್ಮಿಂದ ಇವುಗಳನ್ನೆಲ್ಲಾ ತೆಗೆದುಕೊಳ್ಳುವಾಗ 1947ರಲ್ಲಿ 345 ಲಕ್ಷ ರೂಪಾಯಿಗಳಿಗೆ ನಿಗದಿಮಾಡಿಕೊಂಡರು. ಆದರೆ ಈಗ ಅವುಗಳಿಂದ ಒಂದಕ್ಕೆ ನಾಲ್ಕರಷ್ಟು ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಇಷ್ಟಾದರೂ ನಮಗದರಲ್ಲಿ ಒಂದು ಭಾಗವನ್ನಾದರೂ ಕೊಡಬೇಡವೇ ? ನಾವು ಮುಂದುವರಿಯುವುದಕ್ಕಿದ್ದ ಒಂದು ಮಾರ್ಗವನ್ನೂ ಅವರು ತೆಗೆದು ಹಾಕಿದರು ; ಅತ್ತ ನಮ್ಮ ಜನರಿಂದಲೇ ಹೆಚ್ಚು ಹೆಚ್ಚು ಹಣವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇದು ನಿಜವಾಗಿಯೂ ಶುದ್ಧ ಅನ್ಯಾಯ ! ಕೇಂದ್ರ ಸರ್ಕಾರವೆಂದಮಾತ್ರಕ್ಕೇ ನಾವು ಟೀಕೆಮಾಡಕೂಡದೆಂದಿದೆಯೇ ? ಆ ಸರ್ಕಾರದವರೂ ನಮ್ಮ ದುಡ್ಡನ್ನು ತೆಗೆದುಕೊಳ್ಳುವುದರ ಮೇಲೆ ಅದನ್ನೂ ಟೀಕೆ ಮಾಡಲಿಕ್ಕೆ ನನಗೆ ಸಂಪೂರ್ಣ ಅಧಿಕಾರವಿದೆ. ಆದ್ದರಿಂದ, ಈ ವಿಚಾರವನ್ನು ನಾವು ಇಲ್ಲಿಗೇ ಬಿಟ್ಟುಬಿಟ್ಟರೆ ಖಂಡಿತವಾಗಿಯೂ ಮುಂದೆ ನಮ್ಮ ದೇಶಕ್ಕೆ ಬಹಳ ಕಷ್ಟಸ್ಥಿತಿ ಬರುತ್ತದೆ. ಇದ್ದ ನಿಧಿಗಳೆಲ್ಲಾ ಹೋದ ಮೇಲೆ ನಮ್ಮ ಕಷ್ಟ ಕೇಳುವರಾರು ! ಅದರಲ್ಲೂ ಈ ಐದು ವರ್ಷಗಳು ಕಳೆದು ಹೋದ ಮೇಲೆ, ಬರುವ ಸಬ್ಸಿಡಿಯೂ ಹೋಗುತ್ತದೆ. ಆದ್ದರಿಂದ ಈಗಲೇ ಎಚ್ಚೆತ್ತು, ನಮ್ಮಿಂದ indirect ಆಗಿ ಎಷ್ಟು ಹಣ ಕೇಂದ್ರ ಸರ್ಕಾರಕ್ಕೆ ಹೋಗುತ್ತಿದೆ ಯೆಂಬುದನ್ನು ನೋಡಬೇಕು.

ಡೆವಲಪ್‌ಮೆಂಟ್ ಬಾಬುಗಳಿಗೆ ಹೆಚ್ಚಿಗೆ ಹಣವನ್ನು ಕೇಳತ್ತಿರಬೇಕಾಗುತ್ತದೆಂದು ನೀವೇ ಹೇಳಿದ್ದೀರಿ. Progressive taxation ಇದ್ದೇ ಇರಬೇಕೆಂದು ಒಬ್ಬ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಕೊಡುವುದಕ್ಕಾದರೂ ನಮಗೆ ಸಾಧ್ಯವಿರಬೇಕೇ ಬೇಡವೇ ? ಜನಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ನೀವು ಏನೇನು ಮಾಡಿದ್ದೀರಿ ! ಉತ್ತಮವಾದ ಮೇಲೆ ಬೇಕಾದರೆ ತೆರಿಗೆಗಳನ್ನು ಹಾಕಿ ; ಯಾರೂ ಅಡ್ಡಿ ಬರುವುದಿಲ್ಲ. ಅದಿಲ್ಲದೆ, ಈಗಲೇ ಏನೂ ಪ್ರಫಲ ಹೊಂದದೆ ಇರುವವರ ಮೇಲೆಯೇ ತೆರಿಗೆಗಳನ್ನು ಹಾಕುತ್ತಾ ಹೋಗುವುದು ತೀರ ಅನ್ಯಾಯ. ವಿದ್ಯಾಭ್ಯಾಸ ಸೌಕರ್ಯವನ್ನೇ ಮಾಡಿಕೊಡದಿರುವಾಗ, ಹತ್ತಿರದಲ್ಲಿ ಒಂದು ಪ್ರೈಮರಿ ಸ್ಕೂಲನ್ನು ಏರ್ಪಡಿಸದಿರುವಾಗ, ಸರಿಯಾದ ರಸ್ತೆಗಳೇ ಹಳ್ಳಿಗಾಡಿನ ಕಡೆಯಿಲ್ಲದಿರುವಾಗ, ಹಳ್ಳಿಗಾಡಿನವರ ಕೈಯಿಂದಲೇ ವಿದ್ಯಾಭ್ಯಾಸದ ಸೆಸ್ಸು, ರೋಡ್ ಟಾಕ್ಸುಗಳನ್ನು ತೆಗೆದುಕೊಳ್ಳುವುದು ನ್ಯಾಯವೇ? ಯಾರು ನಿಮ್ಮಿಂದ ಪ್ರಯೋಜನ ಪಡೆಯುತ್ತಾರೋ, ಯಾರು ಅದರಿಂದ ಉತ್ತಮ ಸ್ಥಿತಿಗೆ ಬರುತ್ತಾರೋ, ಯಾರು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುತ್ತಾರೋ ಅಂಥವರಿಂದ ತೆರಿಗೆ ವಸೂಲು ಮಾಡುವುದು ನ್ಯಾಯ. ಈ ದೃಷ್ಟಿಯಿಂದ ನೋಡುವುದಾದರೆ ನೀವೀಗ ಕೆಲವು ಡೆವಲಪ್‌ಮೆಂಟ್ ಬಾಬುಗಳಿಗೆ, ಪೋಲೀಸ್ ಬಾಬಿಗೆ ಮತ್ತು extra-ordinary charges ಎಂಬುದಕ್ಕೆ ಹೆಚ್ಚು ಹೆಚ್ಚಿಗೆ ಕೊಟ್ಟಿರುವ ಹಣ ಅನಾವಶ್ಯಕ. ಹೀಗೆಯೇ ಎಷ್ಟೋ ಅನಾವಶ್ಯಕ ಹುದ್ದೆಗಳನ್ನಿಟ್ಟುಕೊಂಡಿದ್ದೀರಿ. ಅವುಗಳನ್ನು ತೆಗೆದು ಹಾಕಬಹುದು. Guest Houseಗಳಿಗಾಗಿ, ಕಾರುಗಳನ್ನು ಕೊಂಡುಕೊಳ್ಳುವುದಕ್ಕಾಗಿ ಹಣ ಒದಗಿಸಿರುವುದನ್ನು ನಿಲ್ಲಿಸಬಹುದು. 'ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು' ಎಂದು ಹೇಳಿದಹಾಗೆ, ಇವರು ಮಾಡುತ್ತಿರುವ ಒಂದೊಂದು ಖರ್ಚು.........

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮುಜರಾಯಿ ಮತ್ತು ಶಾಖೆಗಳ ಮಂತ್ರಿಗಳು).—ಬಡ್ಜೆಟ್ಟಿನ ಹಾಳೆ ಮುಗುಚಿಹಾಕಿ ನೋಡಿ, ತಮಗೇ ಅರ್ಥವಾಗುತ್ತದೆ, ಯಾವ ಯಾವುದಕ್ಕೆ ಖರ್ಚಾಗುತ್ತಿದೆ ಎಂದು.

ಶ್ರೀ ಬಿ. ಹುಚ್ಚೇಗೌಡ.—ಹಾಗಲ್ಲ ಖರ್ಚು ಮಾಡುವುದು. ಪರಸ್ಪರ ಚರ್ಚೆ ಮಾಡಿ ಸೌಹಾರ್ದದಿಂದ ಒಂದು ಒಪ್ಪಂದಕ್ಕೆ ಬಂದು ಖರ್ಚು ಮಾಡಬೇಕೆಂದು ನಾವು ಹೇಳುತ್ತಿದ್ದೇವೆಯೇ ಹೊರತು, ಖರ್ಚು ಮಾಡಿಬಿಟ್ಟು 'ಬಡ್ಜೆಟ್ಟನ್ನು ತಿರುವಿಹಾಕಿ, ನೋಡಿದರೇ ಗೊತ್ತಾಗುತ್ತದೆ' ಎಂದು ಹೇಳುವುದು ಅರ್ಥವಿಲ್ಲದ ಮಾತು. ಈಗಲಾದರೂ ಕೂಡ, ಮುಖ್ಯವಾಗಿ ಇಂಥ ಒಂದು ಸಂಪ್ರದಾಯವನ್ನು ಏರ್ಪಡಿಸಬೇಕು. ಎಲ್ಲ ಮುಂದುವರಿದ ಪ್ರಜಾಪ್ರಭುತ್ವ ರಾಜ್ಯಗಳಲ್ಲೂ ಕೂಡ ಸಾಮಾನ್ಯವಾಗಿ ಈ ರೀತಿ ಒಂದು ಫೈನಾನ್ಷಿಯಲ್ ಬಿಲ್ ತರಬೇಕಾದರೆ ವಿರೋಧಪಕ್ಷದವರನ್ನೂ ಕೇಳಿ ಸಮಾಲೋಚನೆ ನಡೆಸಿ ಸಭೆಯ ಮುಂದೆ ತರುತ್ತಾರೆ. ಏಕೆಂದರೆ, ಇಡೀ ದೇಶಕ್ಕೆ ಇದು ಅನ್ವಯಿಸತಕ್ಕದ್ದು. ಆದ್ದರಿಂದ ಆದಷ್ಟುಮಟ್ಟಿಗೆ ನಮ್ಮ ಆರ್ಥಿಕ ನೀತಿಯನ್ನು ಪರಸ್ಪರ ಸಮಾಲೋಚನೆಯಿಂದ ಇಡೀ ದೇಶದ ದೃಷ್ಟಿಯಿಂದ ರಚಿಸಬೇಕಾದ್ದೂ ಮುಖ್ಯ ಕರ್ತವ್ಯವೆಂಬದನ್ನು ತಾವು ತಿಳಿದುಕೊಳ್ಳಬೇಕು.

ಅಧ್ಯಕ್ಷರು.—ಬಟ್ಜೆಟ್ ತಯಾರು ಮಾಡುವುದಕ್ಕೆ ಮುಂಚೆ ವಿರೋಧಪಕ್ಷದ ನಾಯಕರನ್ನೂ ಕೇಳಿ ಮಾಡಬೇಕೆಂದೇ ತಾವು ಹೇಳುವುದು?

ಶ್ರೀ ಬಿ. ಹುಚ್ಚೇಗೌಡ.—ಸಾಧ್ಯವಾದಷ್ಟುಮಟ್ಟಿಗೆ ವಿರೋಧ ಪಕ್ಷದವರ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕು ಎಂದು.

Sri K. HANUMANTHAIYA.—What he is aiming at is, coalition but not opposition.

ಶ್ರೀ ಬಿ. ಹುಚ್ಚೇಗೌಡ.—I am extremly sorry. ಆ ಅಂದಾಜಿಗೆ ನಾವೇನೂ ಹೇಳುತ್ತಿಲ್ಲ. ಇಂಥಾದ್ದು ಆಗಬೇಕೇ, ಆಗಬಾರದೆ, ಎಂಬ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ಮುಂಚೆಯೇ ಕೇಳಬೇಕು, ಅಷ್ಟೇ ಹೊರತು details ಎಲ್ಲವನ್ನೂ ಕೊಡಬೇಕೆಂದು ನಾನು ಕೇಳಲಿಲ್ಲ. ಇದನ್ನು ಅವರು coalition ಮಾಡಿ ಎಂದು ಕೇಳುತ್ತಿದ್ದಾರೆಂದು ಅರ್ಥಮಾಡಿಕೊಳ್ಳುವುದು ತಪ್ಪು. ನಾವು ಮಾತನಾಡುತ್ತಿರುವುದು ಇಡೀ ದೇಶದ ಹಿತದೃಷ್ಟಿಯಿಂದ. ಅವರು ಅಧಿಕಾರದ ದರ್ಪದ ಮೇಲೆ ತಮಾಷೆಯಾಗಿ ಏನನ್ನಾದರೂ ಹೇಳಬಹುದು. ಹೀಗೆಯೇ ಎಷ್ಟು ದಿವಸ ಮಾತನಾಡುತ್ತಾರೆಂಬುದು ಅನುಮಾನ.

ಮುಖ್ಯವಾಗಿ ನಾನು ಹೇಳುವುದಿಷ್ಟೆ. ಈಗಲಾದರೂ ಸ್ವಲ್ಪಮಟ್ಟಿಗೆ ಜನಾಭಿಪ್ರಾಯಕ್ಕೆ ಗೌರವಕೊಟ್ಟು ನಡೆಯದೆ ಹೋದರೆ ನಿಮ್ಮ ಆಡಳಿತ ಸರಿಯಾಗಿರುವುದಿಲ್ಲ, ಮುಂದೆ ಕಂಟಕ ಒದಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಅಧ್ಯಕ್ಷರೆ, ಹಣಕಾಸಿನ ವಿಷಯವಾಗಿ ಈಗ ಹದಿನೈದು ದಿವಸಗಳಿಂದ ನಾವು ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಚರ್ಚೆ ಮಾಡುತ್ತಿದ್ದೇವೆ. ನಮ್ಮ ವಿರೋಧಪಕ್ಷದವರು ಕೊಟ್ಟಿರತಕ್ಕ ಸೂಚನೆಗಳನ್ನೂ, ಅವರು ಮಾಡಿರತಕ್ಕ ಟೀಕೆಗಳನ್ನೂ ಕೂಡ ನಾನು ಬಹಳ ಆಳವಾಗಿ ಆಲೋಚನೆ ಮಾಡಿದ್ದೇನೆ. ನಮ್ಮ ಎದುರು ಪಕ್ಷದವರಲ್ಲಿ ಕೆಲವರು ಹಿಂದೆ ಮಂತ್ರಿಗಳಾಗಿದ್ದವರು, ಅನುಭವಶಾಲಿಗಳಾಗಿರುವವರು, ಮತ್ತು ಮುಂದೆ ಮಂತ್ರಿಗಳಾಗತಕ್ಕ ಅವಕಾಶವನ್ನೂ ಕೂಡ ಹೊಂದಿರತಕ್ಕವರು. ಹಾಗಿದ್ದರೂ ಕೂಡ, ಅವರು ಸರ್ಕಾರದ ಆಡಳಿತ ಮತ್ತು ಜವಾಬ್ದಾರಿ ಯಾವ ರೀತಿಯಾಗಿತ್ತು ಮತ್ತು ಈಚಿನ ಕಾಲದಲ್ಲಿ ಯಾವ ರೀತಿ ಪರಿಣಾಮ ಹೊಂದಿದೆಯೆಂಬುದನ್ನು ಚೆನ್ನಾಗಿ ಆಲೋಚನೆ ಮಾಡಲಿಲ್ಲವಲ್ಲ ಎಂದು ನಾನು ವ್ಯಸನಪೂರ್ವಕವಾಗಿ ಹೇಳಬೇಕಾಗುತ್ತದೆ. 1947ನೆಯ ಇಸವಿಗೆ ಪೂರ್ವದಲ್ಲಿ ಸರ್ಕಾರದ ಯಂತ್ರ, ವ್ಯಾಪ್ತಿ ಮತ್ತು ಅವರ ಜವಾಬ್ದಾರಿ ಏನಿತ್ತೋ, ಈಗ ಅದು ವಿಶೇಷವಾಗಿ ಮಾರ್ಪಾಟಾಗಿದೆ. ಆಗ ಸರ್ಕಾರವೇ ಬೇರೆ ಪ್ರಜೆಗಳೇ ಬೇರೆ ಎಂಬ ಒಂದು-ವ್ಯತ್ಯಾಸವಿತ್ತು. ಈಗ ಸರ್ಕಾರವೇ ಪ್ರಜೆಗಳು, ಪ್ರಜೆಗಳೇ ಸರ್ಕಾರ ಎಂಬ ಸ್ವರಾಜ್ಯಾತ್ಮಕ ಸರ್ಕಾರ ಬಂದಿರುವ ಕಾಲದಲ್ಲಿ ಪ್ರಜೆಗಳ ಇಂಗಿತ ಮತ್ತು ಪ್ರಜೆಗಳ ಅವಶ್ಯಕತೆಗಳು ಹಾಗೂ ಕೋರಿಕೆಗಳು ಏನಿವೆಯೋ ಅವುಗಳನ್ನು ಅನುಕರಿಸಿ ಸರ್ಕಾರ ತನ್ನ ಕಾರ್ಯಕ್ರಮವನ್ನು ಏರ್ಪಡಿಸಿಕೊಳ್ಳಬೇಕಾಗುತ್ತದೆ. ಪ್ರಜೆಗಳ ಕೋರಿಕೆಗಳನ್ನು ನಿರ್ಲಕ್ಷಿಸಿ, ಸರ್ಕಾರ ತನ್ನದೇ ಒಂದು ದಾರಿಯಲ್ಲಿ ನಡೆಯಲು ಸಾಧ್ಯವಿಲ್ಲ. ಕಳೆದ ಆರು ವರ್ಷಗಳಲ್ಲಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು, ಪ್ರಜಾಭ್ಯುದಯ ಕಾರ್ಯಗಳನ್ನು ಕೈಕೊಂಡಿದೆಯೆಂಬುದನ್ನು ಆಲೋಚನೆ ಮಾಡಿದರೆ ಅನೇಕ ಅಂಶಗಳಲ್ಲಿ ಮೊದಲಿಗಿಂತ ನಾಲ್ಕರಷ್ಟು, ಐದರಷ್ಟು ಪ್ರಗತಿಯನ್ನು ಸಾಧಿಸಿದೆ. ಆ ಅಂಕಿ ಅಂಶಗಳನ್ನು ಈ ಸಮಯದಲ್ಲಿ ವಿವರಿಸಿ ತಿಳಿಸಲು ನಾನು ಹೋಗುವುದಿಲ್ಲ. ಈಗಾಗಲೇ ಸಭೆಯ ಮುಂದೆ ಅಂಕಿ ಅಂಶಗಳೆಲ್ಲಾ ವಿವರವಾಗಿ ಕೊಡಲ್ಪಟ್ಟಿವೆ. ಅವುಗಳಿಂದ ಸರ್ಕಾರದವರು ಎಷ್ಟು ಧಾರಾಳವಾಗಿ ಪ್ರಜಾಭ್ಯುದಯ ಕಾರ್ಯಗಳಿಗೆ ಹಣವನ್ನೊದಗಿಸುತ್ತಿದ್ದಾರೆಂಬದನ್ನು ನಾವು ಗಮನಿಸಬಹುದು. ಈ ಪ್ರಜಾಭ್ಯುದಯ ಕಾರ್ಯಗಳಿಗೆ ಎಲ್ಲಿಯಾದರೂ ಒಂದು ವಿರಾಮ ಚಿಹ್ನೆ (full stop) ಇದೆಯೇ ಎಂದರೆ, ಇಲ್ಲವೇ ಇಲ್ಲ. ವರ್ಷ ವರ್ಷವೂ ಈ ಅವಶ್ಯಕತೆಗಳು ಹೆಚ್ಚಾಗುತ್ತಿವೆ! ಅದಕ್ಕೆ ತಕ್ಕಂತೆ ಖರ್ಚುಗಳೂ ಹೆಚ್ಚಾಗುತ್ತಿವೆ. ಇವೊತ್ತಿನ ದಿವಸ ಎಷ್ಟು ಅಂಕಿಅಂಶಗಳನ್ನೂ ಕೊಟ್ಟಿದ್ದೇವೋ ಎಷ್ಟು ಸ್ಕೂಲುಗಳನ್ನು ಸ್ಥಾಪಿಸಿದ್ದೇವೋ ಇನ್ನಷ್ಟು ಸ್ಕೂಲುಗಳನ್ನು ಸ್ಥಾಪನೆ ಮಾಡಬೇಕಾಗುತ್ತದ; ಎಷ್ಟು ಆಸ್ಪತ್ರೆಗಳನ್ನು ಏರ್ಪಡಿಸಿದ್ದೇವೋ ಇನ್ನಷ್ಟು ಆಸ್ಪತ್ರೆಗಳನ್ನು ಏರ್ಪಡಿಸಬೇಕಾಗುತ್ತದೆ; ಎಷ್ಟು ಪಶುವೈದ್ಯ ಶಾಲೆಗಳಾಗಿವೆಯೋ, ಇನ್ನಷ್ಟು ಪಶುವೈದ್ಯ ಶಾಲೆಗಳಾಗಬೇಕು: ಎಷ್ಟು ಕೆರೆಕಟ್ಟೆ ಬಾವಿಗಳ ವ್ಯವಸ್ಥೆಯಾಗಿದೆಯೋ ಇನ್ನೂ ಹೆಚ್ಚಿಗೆ ಆಗಬೇಕಾಗುತ್ತದೆ. ಬಹುಶಃ ನೂರಕ್ಕೆ 20 ರಷ್ಟು ಪ್ರಜೆಗಳ ಆಶೋತ್ತರಗಳು ಈಗ ಈಡೇರಿಲ್ಲ. ಆದರೆ ಇದಕ್ಕೆಲ್ಲಾ ಹಣ ಬೇಕಾಗುತ್ತದೆ. ಆದ್ದರಿಂದ ಇದನ್ನೆಲ್ಲ realistic ಆಗಿ, ಜವಾಬ್ದಾರಿಯಿಂದ ಆಲೋಚನೆ ಮಾಡಬೇಕಾಗುತ್ತದೆ. ಆಗ ನಮಗೆ ಗೊತ್ತಾಗುತ್ತದೆ, ಸರ್ಕಾರದವರು ತಮ್ಮ ಆದಾಯವನ್ನು ಸರ್ವ ರೀತಿಯಲ್ಲೂ ಹೆಚ್ಚಿಸಿಕೊಳ್ಳಬೇಕಾಗುತ್ತದೆ ಎಂದು. ಯಾವ ರೀತಿಯಲ್ಲಿ ಹೆಚ್ಚಿಸಿಕೊಳ್ಳಬೇಕೆಂಬುದನ್ನು ಪ್ರತಿ ಕ್ಷಣದಲ್ಲಿಯೂ ಯೋಚನೆ ಮಾಡಬೇಕಾಗುತ್ತದೆ. ಆದಾಯ ಹೆಚ್ಚಿಸಿಕೊಳ್ಳಬೇಕಾದರೆ ತೆರಿಗೆಯನ್ನು ಹಾಕಬೇಕು. ಇದರಲ್ಲಿ ಸ್ವಲ್ಪ ಯೋಚನೆ ಮಾಡಬೇಕು. ಯಾರ ಮೇಲೆ ಹಾಕಿದರೆ ತೆರಿಗೆಯ ಹೊರೆಯನ್ನು ತಡೆದುಕೊಳ್ಳಬಲ್ಲರು, ಯಾರಿಗೆ ಹಾಕಿದರೆ ಬಹಳ ಭಾರವಾಗುವುದಿಲ್ಲ ಎಂಬುದನ್ನು ತಿಳಿದು ಅಂಥವರ ಮೇಲೆ ಹಾಕಬೇಕಾಗುತ್ತದೆ. ಆದ್ದರಿಂದ ಈ ವಿಚಾರದಲ್ಲಿ ಸ್ವಲ್ಪ ಶೋಧನೆ ನಡೆಯಬೇಕಾಗುತ್ತದೆ. ಇದುವರೆಗೂ ನಮ್ಮ ದೇಶದಲ್ಲಿ ಅಂಥ ಶೋಧನೆ ನಡೆದಿಲ್ಲ. ಇದಕ್ಕಾಗಿಯೇ ಈಗ ಕೇಂದ್ರಸರ್ಕಾರದವರು Taxation Committee ಎಂದು ಒಂದು

(ಶ್ರೀ ಪಿ. ಆರ್. ರಾಮಯ್ಯ.)

ಹೊಸ ಕಮಿಟಿ ಮಾಡಿದ್ದಾರೆ. ಈ ಟಾಕ್ಸೇಷನ್ ಎಂಕ್ವೈರಿ ಕಮಿಷನ್ನಿನವರು ಜನರಲ್ಲಿ ಯಾವ ಯಾವ ಭಾಗದವರು ಎಷ್ಟೆಷ್ಟು ಭಾರವನ್ನು ಹೊರಬಹುದು ಎಂಬುದನ್ನು ವಿಮರ್ಶಿಸುತ್ತಲಿದ್ದಾರೆ. ಸಾಧಾರಣವಾಗಿ ಈ ವಿಮರ್ಶೆಯಿಂದ ಯಾರು ಯಾರು ಎಷ್ಟೆಷ್ಟು income ಹೊಂದುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಹೀಗೆ ಒಂದು ಸಾರಿಯಾದರೂ enquiry ಮಾಡಿ ಅಂಕಿ ಅಂಶಗಳನ್ನು ತೆಗೆಯಬೇಕಾದದ್ದು ಅವಶ್ಯಕ. ಈ ಕಮಿಟಿಯವರು ಆ ರೀತಿ ಶೋಧನೆ ನಡೆಸಿ incidence of tax ಎಷ್ಟಿರಬೇಕೆಂಬುದನ್ನು ನಿರ್ಣಯಿಸುವವರಾಗಿದ್ದಾರೆ. ಆದ್ದರಿಂದ ಈಗ ನಾವಿರುವುದು ಒಂದು transition ಸಮಯ. ಈ ಸಮಯದಲ್ಲಿ ಸರ್ಕಾರದವರು ಆದಷ್ಟುಮಟ್ಟಿಗೆ ಆಲೋಚನೆ ಮಾಡಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುವ ಮಾರ್ಗವನ್ನು ಕಂಡು ಹಿಡಿದುಕೊಳ್ಳಬೇಕು. ಈ ಸಮಯದಲ್ಲಿ ನಾವು ಇನ್ನೊಂದು ಅಂಶವನ್ನು ಗಮನಿಸಬೇಕು. ಯಾವ ಪ್ರಜೆಯೂ ಕಂದಾಯ ಕೊಡಲು ಸಂತೋಷದಿಂದ ಮುಂದೆ ಬರುತ್ತಾನೆಂದು ಹೇಳುವುದಕ್ಕಾಗುವುದಿಲ್ಲ. ಇಂಗ್ಲೆಂಡಾಗಲಿ, ಅಮೇರಿಕಾ ಆಗಲಿ, ಎಲ್ಲೇ ಆದರೂ ಹಾಗೆ ಸಂತೋಷದಿಂದ ತೆರಿಗೆ ಕೊಡಲು ಮುಂದೆ ಬಂದಿರುವವರಿಲ್ಲ. ಒಂದು ರೀತಿಯ ಬಲಾತ್ಕಾರದಿಂದ ಬಲೋದ್ಬಂಧನದಿಂದ ಕೊಡುತ್ತಾರೆಯೇ ಹೊರತು ಸಂತೋಷದಿಂದ ಕೊಡುವುದಿಲ್ಲ. ಆದರೂ, ಪ್ರಜೆಯ ದೃಷ್ಟಿಯು ಹೇಗೇ ಇರಲಿ, ಸರ್ಕಾರವೂ ಜವಾಬ್ದಾರಿಯ ದೃಷ್ಟಿಯಿಂದ realistic ಆಗಿ approach ಮಾಡಿ ಎಷ್ಟುಮಟ್ಟಿಗೆ ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆಂಬುದನ್ನು ನೋಡಿ ಮಾಡಬೇಕಾಗುತ್ತದೆ. ಈಗ ಸರ್ಕಾರದವರು ಕಂದಾಯವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಯಾವ ಯಾವ ರೀತಿ ಮಾಡಬೇಕೆಂದು ಆಲೋಚನೆ ಮಾಡಿದ್ದಾರೋ, ಅದರ ಬಗ್ಗೆ ವಿರೋಧಪಕ್ಷದವರು ರಚನಾತ್ಮಕ ಸಲಹೆಗಳನ್ನು ಕೊಟ್ಟು ಸಹಾಯಮಾಡುವುದು ಉತ್ತಮ. ಸುಮ್ಮನೆ ಅದೂ ಬೇಡ, ಇದೂ ಬೇಡ ಎನ್ನುವುದು ರಚನಾತ್ಮಕ ಸಲಹೆಯಲ್ಲ. ಅದಕ್ಕೆ ಬದಲು ಈಗ ಸರ್ಕಾರದವರು ನಮಗೆ ಕೊಟ್ಟಿರತಕ್ಕ ಬಡ್ಜೆಟ್ಟನ್ನು ನೋಡಿಕೊಂಡು ಖರ್ಚು ಬಾಬಿನಲ್ಲಿ ಪ್ರಜಾಭ್ಯುದಯ ಕಾರ್ಯಗಳ ಖರ್ಚುಗಳಿಗೆ ಯಾವ ಯಾವ ಅಂಶಗಳನ್ನು ಸೇರಿಸಿದ್ದಾರೆಂದು ಗಮನಿಸಿ ಅದಕ್ಕಾಗಿ ಆದಾಯ ಎಷ್ಟೆಷ್ಟು ಬರಬೇಕೆಂಬುದನ್ನು ನೋಡಿಕೊಂಡು ಒಂದು ರಚನಾತ್ಮಕ ಸಲಹೆ ಕೊಡಲಿ, ನಾನು ಅದನ್ನು ಸ್ವಾಗತಿಸುತ್ತೇನೆ. ಆ ರೀತಿ ಸಲಹೆ ಕೊಡದೆ ಸುಮ್ಮನೆ negative ಆಗಿ ಕಹಿಯಾಗಿರತಕ್ಕ ಮಾತುಗಳನ್ನಾಡಿದರೆ ಅವಕ್ಕೆ ಯಾವ ಬೆಲೆ ಬರುತ್ತವೆಂಬುದನ್ನು ಅವರೇ ಯೋಚನೆ ಮಾಡಬಹುದು.

2 P.M.

ಮತ್ತೊಂದಂಶವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ವಿರೋಧಪಕ್ಷದವರ ಜವಾಬ್ದಾರಿಯೇನು ಎದುರುಪಕ್ಷದ ಜವಾಬ್ದಾರಿಯೇನು, ಅವರ ಧೋರಣೆ ಯಾವ ರೀತಿ ಇರಬೇಕು ಎಂಬುದನ್ನು ಯೋಚನೆ ಮಾಡಬೇಕು. ನಾವು ನಮ್ಮ ದೇಶದಲ್ಲಿ ಹೌಸ್ ಆಫ್ ಕಾಮನ್ಸಿನ ಪದ್ಧತಿಯನ್ನನುಸರಿಸುತ್ತಿದ್ದೇವೆ. ನಾವು ಬಹುಮಟ್ಟಿಗೆ ಅಲ್ಲಿ ನಡೆಯತಕ್ಕ ನಡೆವಳಿಕೆಗಳನ್ನು ಅರಿತಿದ್ದೇನೆ. ಅಲ್ಲಿ ಎದುರು ಪಕ್ಷದವರು ಎಷ್ಟೇ ವಿರೋಧಿಸಿದಾಗ್ಯೂ ಅವರಲ್ಲಿಯೂ ಒಂದು ರಚನಾತ್ಮಕ ವಿಷಯವಿರುತ್ತದೆ. ಅವರು ಅನುಸರಿಸತಕ್ಕ ' ಸ್ಟ್ರಾಟೆಜಿ 'ಯಲ್ಲಿ ಈಗಿನ ಕಾಲದ ನವೀನ ನಾಗರಿಕ ಕಾಲದ ನೀತಿಯನ್ನನುಸರಿಸುತ್ತಿದ್ದಾರೆಯೇ ಹೊರತು ಯಾವುದೋ ಹಳೆಯ ಕಾಲದ ಪದ್ಧತಿಯನ್ನನುಸರಿಸುತ್ತಿಲ್ಲ. ಇಲ್ಲಿ ನಮ್ಮ ವಿರೋಧಪಕ್ಷ ಮತ್ತು ಅದರ ನಾಯಕರಾದ ಶ್ರೀಮಾನ್ ಇಮಾಂರವರಿಗೆ ಒಂದು ವಿಷಯವನ್ನು ಹೇಳುವುದಾದರೆ, ನಮಗೆ ' ವಾಕ್‌ಔಟ್ ' ಎನ್ನುವುದು ಈಗ ಸಪ್ಪೆಯಾಗಿದೆ ನೀರಸವಾಗಿದೆ. ಅದಕ್ಕೆ ಈಗ ಮೂರು ಕಾಸು ಬೆಲೆಯೂ ಇಲ್ಲ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದರಲ್ಲಿಯೂ ಕಡೆಯಲ್ಲಿ ಇನ್ನೆರಡು ನಿಮಿಷವಿದೆ ಎನ್ನುವಾಗ ' ವಾಕ್‌ಔಟ್ ' ಮಾಡಿದರೆ, ಹಾಸ್ಯಾಸ್ಪದವಾಗುತ್ತದೆಯೇ ವಿನಾ ಇದರಲ್ಲಿ ವಿರೋಧವಿದೆಯೆಂದು ಯಾರೂ ತಿಳಿದುಕೊಳ್ಳುವುದಿಲ್ಲ. ಆದುದರಿಂದ ಅವರು ಈ ' ವಾಕ್ ಔಟ್ ' ಬಿಟ್ಟು ಬೇರೆ ಮಾರ್ಗವಿದ್ದರೆ ತರಲಿ ಎಂದು ಹೇಳುತ್ತೇನೆ. ಇಂಡಿಯಾ ದೇಶದಲ್ಲಿ ಕಲವು ಶಾಸನ ಸಭೆಗಳಲ್ಲಿ ' ವಾಕ್ ಔಟ್ ' ಎನ್ನುವುದಿದೆ. ಹೌಸ್ ಆಫ್ ಕಾಮನ್ಸಿನಲ್ಲಿಲ್ಲ. ಆದುದರಿಂದ ಹೌಸ್ ಆಫ್ ಕಾಮನ್ಸಿನ ಉದಾಹರಣೆಯನ್ನನುಸರಿಸಿ ಬೇಕಾದಷ್ಟು ವಿರೋಧ ಮಾಡಲಿ; ಸಭೆಯಲ್ಲೇ ಕುಳಿತು, ನಡೆವಳಿಕೆಗಳಲ್ಲಿ ಭಾಗವಹಿಸಲಿ. ಈ ' ವಾಕ್ ಔಟ್ ' ಎಂಬ ಕಣ್ಣಾಮುಚ್ಚಾಲೆ ಆಟ ಬೇಡ. ನಾನು ಇಷ್ಟೇ ಹೇಳುವುದು ಈ ಸಂದರ್ಭದಲ್ಲಿ.

*ಶ್ರೀ ಬಿ. ರಾಚಯ್ಯ (ಯಳಂದೂರು ಅನುಸೂಚಿತ ಜಾತಿಗಳು).—ಸ್ವಾಮಿ, ವಿರೋಧಪಕ್ಷದಲ್ಲಿದ್ದುಕೊಂಡು ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಕೇವಲ ವಿರೋಧ ಮಾಡಬೇಕೆಂಬ ಒಂದೇ ದೃಷ್ಟಿಯಿಂದ ನಾನು ವಿರೋಧಿಸುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳುವುದಿಲ್ಲವೆಂದ ನಂಬಿದ್ದೇನೆ. ಮೈಸೂರು ದೇಶದಲ್ಲಿ ಪ್ರಜಾಪ್ರಭುತ್ವ ಬಂದಮೇಲೆ, ಪ್ರಜೆಗಳು ಬೇರೆ ಸರ್ಕಾರ ಬೇರೆ ಎಂಬ ಭಾವನೆಯನ್ನು ಬಿಟ್ಟು ಪ್ರಜಾಸರ್ಕಾರದಲ್ಲಿ ಪ್ರತಿಯೊಬ್ಬರೂ ಕೈಹಾಕಿ, ಅದರ ಆಗುಹೋಗುಗಳಲ್ಲಿ ತಮ್ಮದೇ ಆದ ಒಂದು ಕರ್ತವ್ಯವನ್ನು ಮಾಡಬೇಕಾದುದು ನಾಗರಿಕರಾದ ಪ್ರತಿಯೊಬ್ಬರ ಕರ್ತವ್ಯವೆಂದು ನನ್ನ ಭಾವನೆ. ಈ ದೃಷ್ಟಿಯಿಂದ ನಮ್ಮ ಕಾಂಗ್ರೆಸ್ ಸರ್ಕಾರ ಅನುಸರಿಸುತ್ತಿರುವ ನೀತಿ ಮತ್ತು ತೋರಿಸುತ್ತಿರುವ ಧೋರಣೆ, ವಿರೋಧಪಕ್ಷಕ್ಕೆ ಕಾಂಗ್ರೆಸ್ ಸರ್ಕಾರ ತೋರಿಸುತ್ತಿರುವ ಸಹಕಾರ ಸಹಾನುಭೂತಿ—ಇವುಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

'ವಿರೋಧಪಕ್ಷದವರು ಯಾವಾಗಲೂ ರಚನಾತ್ಮಕ ಸಲಹೆಗಳನ್ನು ಕೊಡದೆ ಬರಿಯ ವಿರೋಧಮಾಡುವುದರಲ್ಲಿ ಕಾಲಕಳೆಯುತ್ತಿದ್ದಾರೆ. ನಾನು ಹೌಸ್ ಆಫ್ ಕಾಮನ್ಸ್ ನಡೆವಳಿಕೆಗಳನ್ನು ನೋಡಿದ್ದೇನೆ' ಎಂದು ಹೇಳಿದರು........................

ಶ್ರೀ ಪಿ. ಆರ್. ರಾಮಯ್ಯ.—ನೋಡಿದ್ದೇನೆ ಎಂದು ಹೇಳಲಿಲ್ಲ........................

ಶ್ರೀ ಬಿ. ರಾಚಯ್ಯ.—ತಿಳಿದುಕೊಂಡಿದ್ದೇನೆಂದು ಹೇಳಿದರು. ನಾವು ಎಷ್ಟೇ ರಚನಾತ್ಮಕ ಸಲಹೆಗಳನ್ನು ಕೊಟ್ಟರೂ ಕಿವುಡ ಕಿವಿಗಳಮೇಲೆ ಬಿದ್ದಂತಾಗುತ್ತದೆ. ಕಳೆದ ಹದಿನೈದು ದಿವಸಗಳಿಂದಲೂ ಈ ಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ಇದರಲ್ಲಿ ವಿರೋಧಪಕ್ಷದವರು ತಮಗೆ ತಿಳಿದ ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೂ ಸರ್ಕಾರ ತನ್ನ ಸಂಪೂರ್ಣ ಸಹಾನುಭೂತಿಯನ್ನು ತೋರಿಸಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ. ಸರ್ಕಾರ ಒಂದುಕಡೆ ಆದಾಯವನ್ನು ಹೆಚ್ಚಿಸಬೇಕು, ಮತ್ತೊಂದುಕಡೆ ಖರ್ಚನ್ನು

ಕಡಮೆಮಾಡಬೇಕೆಂದು ಹೇಳುವಾಗ, ನಾನು ತಿಳಿದು ತಿಳಿದುಕೊಂಡಿದ್ದೆ—ಹೊಸ ಮಂತ್ರಿಮಂಡಲ ಅಧಿಕಾರಕ್ಕೆ ಬಂದಮೇಲೆ ಅದಷ್ಟುಮಟ್ಟಿಗೂ ಕೆಲವು ಇಲಾಖೆಗಳಲ್ಲಿ ಸಿಬ್ಬಂದಿಯ ಖರ್ಚು ಕಡಮೆಮಾಡುತ್ತಾರೆ, ಇದರ ಮೂಲಕ ಖರ್ಚು ಕಡಮೆಮಾಡಿ ಉತ್ಪತ್ತಿ ಹೆಚ್ಚಿಸುತ್ತ ಇನ್ನೊಂದುಕಡೆ ರಚನಾತ್ಮಕ ಕಾರ್ಯಗಳನ್ನು ಸಾಧಿಸುತ್ತಾರೆಂದು ಮೊದಲು ಉತ್ಪತ್ತಿಬರುವ ಕಾರ್ಯಗಳಿಗೆ 'ಪ್ರಯಾರಿಟಿ' ಕೊಟ್ಟು ಅದರಿಂದ ಬಂದ ಹಣವನ್ನು ದೇಶದ ಉನ್ನತಿಗಾಗಿ ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟೆವು. ಖರ್ಚು ಕಡಮೆಮಾಡಲು, ಉದಾಹರಣೆಗೆ, ಅಗ್ರಿಕಲ್‌ಚರ್, ವೆಟರಿನೆರಿ ಮತ್ತು ಹಾರ್ಟಿಕಲ್‌ಚರಲ್ ಇಲಾಖೆಗಳನ್ನು ಒಟ್ಟಿಗೆ ಸೇರಿಸಿ ಒಬ್ಬರೇ ಮುಖ್ಯಾಧಿಕಾರಿಗಳನ್ನು ಮಾಡಿದರೆ ಸ್ವಲ್ಪಮಟ್ಟಿಗೆ ಖರ್ಚು ಕಡಿಮೆ ಮಾಡಬಹುದೆಂದು ಹೇಳಿದೆವು; ಇದು ಸಾಧ್ಯವಿಲ್ಲವೆಂದು ಹೇಳಿದರು. ಇನ್ನೊಂದು ಕಡೆ ವಯಸ್ಕರ ವಿದ್ಯಾಭ್ಯಾಸ, ಸಂಸ್ಕೃತಿಪ್ರಸಾರ ಮತ್ತು ಸೇವಾದಳ ಈ ಮೂರು ಶಾಖೆಗಳೂ ಮಾಡುವುದು ಒಂದೇರೀತಿಯ ಕೆಲಸವಾಗಿರುವುದರಿಂದ ವಯಸ್ಕರ ವಿದ್ಯಾಸಂಸ್ಥೆಗಳಲ್ಲಿರುವ ಒಂದುಲಕ್ಷ ವಿದ್ಯಾರ್ಥಿಗಳನ್ನು ಪ್ರೈಮರಿ ಸ್ಕೂಲುಗಳಿಗೇ ಸೇರಿಸಿದರೆ ಪ್ರೈಮರಿ ಸ್ಕೂಲುಗಳಲ್ಲಿ ಕೆಲಸಮಾಡುತ್ತಿರುವ ಉಪಾಧ್ಯಾಯರಿಗೂ ಒಂದು ವಿಧದಲ್ಲಿ ಸಂಬಳಸಾರಿಗೆಗಳನ್ನು ಹೆಚ್ಚು ಮಾಡಿದಹಾಗಾಗುತ್ತದೆ, ಅವರ ಬೇಡಿಕೆಗಳನ್ನೂ ಪ್ರಜಾಸರ್ಕಾರ ಈಡೇರಿಸಿದಹಾಗಾಗುತ್ತದೆ, ಜೊತೆಗೆ ಅಧಿಕಾರಿಗಳನ್ನು ಕಡಮೆಮಾಡುವುದರಿಂದ ಅಲ್ಲಿಯೂ ಕೂಡ ಹಣ ಉಳಿತಾಯವಾಗುತ್ತದೆ, ಈ ದೃಷ್ಟಿಯಿಂದ ಒಟ್ಟುಗೂಡಿಸುವುದಕ್ಕೆ ಅವಕಾಶವಿದೆ ಎಂದು ನಮ್ಮಲ್ಲಿ ಅನೇಕರು ಸಲಹೆಯನ್ನು ಕೊಟ್ಟರು. ಆದರೂ ಸರ್ಕಾರ ಇನ್ನೂ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಇನ್ನು ಸೆಕ್ರೆಟೇರಿಯಟ್ಟಿನಲ್ಲಿರುವ ಸಿಬ್ಬಂದಿಯನ್ನು ಕಡಮೆ ಮಾಡುವುದಕ್ಕೆ ಅವಕಾಶವಿದೆ; ಆದರೂ ಮಾಡಿಲ್ಲ. ಇದಕ್ಕೆ ಕಾರಣವನ್ನು ಊಹಿಸುವುದು ಕಷ್ಟವೇನೂ ಇಲ್ಲ. ಏನೋ ಹಿಂದಿನಿಂದ ನಡೆದುಕೊಂಡು ಬಂದಿದೆ, ನಮ್ಮ ಕಾಲದಲ್ಲಿ ನಾವು ರಿಟ್ರೆಂಚ್ ಮಾಡಿದರೆ, ಕೆಲವು ಅಧಿಕಾರಿಗಳ ವಿಶ್ವಾಸವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಸರ್ಕಾರಕ್ಕೆ ಶಂಕೆಯಿದೆಯೋ ಏನೋ! ಸೆಕ್ರೆಟೇರಿಯಟ್ಟಿನಲ್ಲಿ ಕೇಸ್‌ವರ್ಕರ್‌ಗಳ ಮೇಲೆ ಸೂಪರಿಂಟೆಂಡೆಂಟುಗಳು, ಅಸಿಸ್ಟೆಂಟ್ ಸೆಕ್ರೆಟರಿಗಳು, ಅಂಡರ್ ಸೆಕ್ರೆಟರಿಗಳು, ಆಮೇಲೆ ಸೆಕ್ರೆಟರಿಗಳು! ಹೀಗೆ ಅನೇಕ ದೊಡ್ಡದೊಡ್ಡ ಹುದ್ದೆಗಳು ಬಹಳ ಜಾಸ್ತಿಇವೆ. ದೊಡ್ಡ ಹುದ್ದೆಗಳನ್ನು ಕಡಮೆಮಾಡುವುದಕ್ಕೆ ಅವಕಾಶವಿದ್ದೂ, ಈ ಸಲಹೆಗಳನ್ನು ನಾವು ಕೊಡುತ್ತಿದ್ದರೂ ಇದಕ್ಕೆ ಸರ್ಕಾರ ಸಹಾನುಭೂತಿಯಿಂದ ಗಮನಕೊಡುತ್ತಿಲ್ಲ. ನಾವು ಸಹಕಾರಹಸ್ತವನ್ನು ನೀಡುತ್ತಿದ್ದೇವೆ; ಈಗಲಾದರೂ ಸರ್ಕಾರ ಕಣ್ಣುತೆರೆದು ನೋಡಲಿ ಎಂದು ಇದನ್ನೆಲ್ಲಾ ಹೇಳುತ್ತಿದ್ದೇನೆ.

ಸರ್ಕಾರಿ ಹುದ್ದೆಗಳನ್ನು ಕಡಮೆಮಾಡುತ್ತಾ ಹೋಗುವುದರಿಂದ ನಿರುದ್ಯೋಗ ಸಮಸ್ಯೆ ನಮ್ಮ ಮುಂದೆ ನಿಂತರೆ, ಆ ಕಷ್ಟವನ್ನು ಯಾವರೀತಿ ನಿವಾರಿಸುವುದು ಎಂದು ಅವರ ಮನಸ್ಸಿಗೆ ಶಂಕೆಬರಬಹುದು. ಆದಾಗ್ಯೂ, ಹೆಚ್ಚಿನ ಸಂಬಳಗಳನ್ನು ತೆಗೆದುಕೊಳ್ಳುವ ಅಧಿಕಾರಿಗಳಲ್ಲಿ ಒಂದೇ ಅಧಿಕಾರಿ ಬೇರೆಬೇರೆ ಶಾಖೆಗಳ ಕೆಲಸಗಳನ್ನು ಮಾಡಲು ಅವಕಾಶವಿದೆ. ಈಗ ಪಡಿತರಮಾಡಿ ಯಾವರೀತಿ ಒಂದುಪಾವು ತಿನ್ನುವವರಿಗೆ ಅರ್ಧಪಾವು ತಿನ್ನಬೇಕೆಂದು ಮಾಡಿದ್ದಾರೋ ಹಾಗೆಯೇ ಸರ್ಕಾರದಲ್ಲಿ ಅಧಿಕಾರದಲ್ಲಿರುವ ಅಧಿಕಾರಿಗಳು ದೇಶದ ಹಿತಕ್ಕಾಗಿ ದುಡಿಯುವುದು ಅವಶ್ಯಕ. ಆದುದರಿಂದ ಒಬ್ಬರಿಗೆ ಎರಡು ಇಲಾಖೆಗಳ ಕೆಲಸಗಳನ್ನು ಒದಗಿಸುವುದರಲ್ಲಿ ಅಧಿಕಾರಿಗಳ ಮನಸ್ಸಿಗೆ ನೋವಾದರೂ, ದೇಶದ ಹಿತದೃಷ್ಟಿಯಿಂದ ಅವರು ಸ್ವಲ್ಪ ಹೆಚ್ಚು ಕೆಲಸ ಮಾಡಬೇಕಾಗುತ್ತದೆ. ಹೀಗೆ ಮಾಡುವುದರಿಂದ ಸರ್ಕಾರದ ಖರ್ಚನ್ನು ಕಡಮೆಮಾಡಬಹುದು.

ಇನ್ನೊಂದು ವಾದವನ್ನು ಹೇಳುತ್ತಾರೆ. ರಚನಾತ್ಮಕ ಕಾರ್ಯಗಳಿಗೆ ಹಣ ಹಾಕಬೇಕಾಗುತ್ತದೆ, ಸ್ಕೂಲುಗಳು, ರಸ್ತೆಗಳು, ಆಸ್ಪತ್ರೆಗಳು, ನೀರಾವರಿ ಕಾಮಗಾರಿಗಳು ಮುಂತಾದ ಕಾರ್ಯಗಳಿಗೆ ಹೆಚ್ಚು ಮೊಬಲಗನ್ನು ಒದಗಿಸುತ್ತಿದ್ದೇವೆ, ಇವಕ್ಕೆಲ್ಲಾ ಹಣವನ್ನೊದಗಿಸಬೇಕಾದರೆ ಹೊಸ ತೆರಿಗೆಯನ್ನು ವಿಧಿಸಬೇಕಾಗುತ್ತದೆಂದು ಹೇಳುತ್ತಾರೆ. ಹೀಗೆ ಮಾಡುವಾಗ ನಾವು ವಿರೋಧಪಕ್ಷದಲ್ಲಿರುವವರು ಸರ್ಕಾರವನ್ನು ವಿರೋಧಿಸಿ ಎಷ್ಟೇ ಮಾತನಾಡಿದರೂ, ಸರ್ಕಾರದವರು ಮಸೂದೆಗಳನ್ನು ಪಾಸುಮಾಡದೆ ಬಿಡುವುದಿಲ್ಲ; ನಾವು ಈ ರೀತಿಯ ಮಾರ್ಗವನ್ನನುಸರಿಸುತ್ತಿಲ್ಲ. ಒಂದು ತೆರಿಗೆಯನ್ನು ಹಾಕಬೇಕೆಂದು ಅವರು ತಂದರೆ, ಎಲ್ಲಿ ಅದನ್ನು ಹಾಕುವುದು, ಯಾರಮೇಲೆ ಆ ಹೊರೆಯನ್ನು ಹೇರುವುದು ಎಂದು ಯೋಚನೆಮಾಡಿ ನೋಡಿದರೆ, ಅವಕಾಶವೇ ಸಿಕ್ಕುವುದಿಲ್ಲ. ನಾವು ಒಪ್ಪಲಿ ಅಥವಾ ಒಪ್ಪದೇಯಿರಲಿ ನಾವು ಮಾಡಿದ್ದನ್ನು ಮಾಡಿಯೇ ಮಾಡುತ್ತೇವೆಂಬ ಧೋರಣೆಯನ್ನು ಸರ್ಕಾರ ತೋರಿಸಿದರೆ ಅದರಿಂದ ಒಳ್ಳೆಯದಾಗುವುದಿಲ್ಲ. ವೆಲ್‌ಫೇರ್‌ಸ್ಟೇಟ್ ಎಂದು ಹೇಳುವಾಗ ಅನೇಕ ತೆರಿಗೆಗಳನ್ನು ನಾವು ಹೊರಬೇಕಾಗುತ್ತದೆ, ನಿಜ. ಆದರೆ ತೆರಿಗೆ ಹಾಕುವಾಗ ಪ್ರಜಾಭಿಪ್ರಾಯವನ್ನೂ ತಿಳಿಯದೆ, ಪ್ರಜೆಗಳ ಪ್ರತಿನಿಧಿಗಳಾಗಿ ಬಂದಿರತಕ್ಕ ಸದಸ್ಯರ ಅಭಿಪ್ರಾಯವನ್ನೂ ಅರಿಯದೆ, ನಾವು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ ಎಂಬ ಒಂದು ಧೋರಣೆಯಿಂದ ಹೊರಟರೆ, ಅದು ಒಳ್ಳೆಯದಲ್ಲ. ಇರತಕ್ಕ ಹಣದಲ್ಲಿ ಜನರಮೇಲೆ ಹೆಚ್ಚು ತೆರಿಗೆಯನ್ನು ಹಾಕದೆ, ಖರ್ಚು ಕಡಮೆಮಾಡಿ ಆಯವ್ಯಯವನ್ನು ಸರಿತೂಗಿಸುವುದಕ್ಕೆ ವೆಲ್‌ಫೇರ್ ಸ್ಟೇಟಿನಲ್ಲಿ ಸಾಧ್ಯವಿದೆ. ಮೊದಲಿನಿಂದಲೂ ಒಂದೊಂದು ಸರ್ಕಾರ ಬಂದಾಗ ಒಂದೊಂದು 'ಎಕ್ಸ್‌ಪೆರಿಮೆಂಟ್' ಎಂದರೆ ಪರೀಕ್ಷಾಪ್ರಯೋಗ ಮಾಡುತ್ತಾಬಂದರು. ಬುಲ್‌ಡೋಜರುಗಳ ಪ್ರಯೋಗವಾಯಿತು, ರೇಡಿಯೋಗಳನ್ನು ಹಳ್ಳಿಯವರಿಗೆ ಕೊಟ್ಟದ್ದಾಯಿತು,—ಇದರಲ್ಲಿ ಎಷ್ಟು ಉಳಿದಿದೆಯೋ ಏನೋ, ಏನಾಗಿದೆಯೋ ಗೊತ್ತಿಲ್ಲ—ಆಮೇಲೆ ಸಂಸ್ಕೃತಿಪ್ರಸಾರವೂ ನಮ್ಮ ಒಪ್ಪಿಗೆಯಿಲ್ಲದೆ ಪ್ರಾರಂಭವಾಯಿತು. ಬೇರೊಂದು ಲೆಜಿಸ್‌ಲೇಚರ್ ಕಟ್ಟಡವನ್ನು, ನಾವು ಒಂದು ಭವ್ಯವಾದ ಮಂದಿರದಲ್ಲಿರಬೇಕೆಂದು ಆಶೆಪಟ್ಟು, ಕಟ್ಟಲು ಪ್ರಾರಂಭಮಾಡಿದರು. ಹೀಗೆ ದೇಶ ಕಷ್ಟದಲ್ಲಿರುವಾಗ, ಸರ್ಕಾರದ ಹಣಕಾಸಿನ ಪರಿಸ್ಥಿತಿ ಕಷ್ಟವಾಗಿರುವಾಗ ಇದನ್ನು ಮಾಡುವುದೆ? ಮೊದಲು ಯಾವುದು ಹೆಚ್ಚು ಉತ್ಪತ್ತಿಕೊಡುತ್ತದೆ ಎಂಬುದನ್ನು ನೋಡಿ ಅಂಥ ಕೆಲಸಗಳನ್ನು ಕೈಕೊಳ್ಳುವುದನ್ನು ಬಿಟ್ಟು ಇದನ್ನೆಲ್ಲಾ ಮಾಡುವುದೆ? ಮೊದಲು ಇರುವ ಕಟ್ಟಡಗಳಲ್ಲೇ ಮಾಡುತ್ತಿರಲಿಲ್ಲವೆ? ಶೇಷಾದ್ರಿ ಮೆಮೋರಿಯಲ್‌ಹಾಲ್ ಇದೆ, ಮೈಸೂರಿನಲ್ಲಿ ಕ್ರಾಫರ್ಡ್‌ಹಾಲ್ ಇವೆ, ಜಗನ್ಮೋಹನ ಪ್ಯಾಲೆಸ್ ಇದೆ. ಸದ್ಯಕ್ಕೆ ನಮ್ಮ ಸಭೆಯ ಕಾರ್ಯಕಲಾಪಗಳನ್ನು ಇರುವ ಕಟ್ಟಡದಲ್ಲೇ ನಡೆಸಿಕೊಳ್ಳುವುದು ಸಾಧ್ಯವೆಂದು ಹೇಳಿದರೂಕೂಡ ಹೊಸ ಕಟ್ಟಡವನ್ನು ಇಷ್ಟುದೊಡ್ಡ ಖರ್ಚಿನಿಂದ ಏಕೆ ಕಟ್ಟಿಸಬೇಕು? ಅನಿವಾರ್ಯವಾದ ಖರ್ಚಾದರೆ ಮಾಡಬೇಕೇ ಹೊರತು

(ಶ್ರೀ ಬಿ. ರಾಚಯ್ಯ.)

ಮುಕ್ಕದ್ದಕ್ಕೆ ಏಕೆಮಾಡಬೇಕು ? ನೀರಾವರಿ ಕೆಲಸಗಳಲ್ಲಿ ಯಾವುದನ್ನು ಮೊದಲು ಮಾಡಬೇಕು, ಯಾವುದನ್ನು ನಿಧಾನವಾಗಿ ಮಾಡಬೇಕು ಎಂಬ ವಿವೇಚನೆಯನ್ನುಪಯೋಗಿಸದೆ, ಒಂದೇಸಾರಿ ಎಲ್ಲಾ ಯೋಜನೆಗಳನ್ನೂ ತೆಗೆದುಕೊಂಡಿದ್ದಾರೆ. ಈಗ ಸದ್ಯದಲ್ಲಿ ಕಷ್ಟದಲ್ಲಿರುವ ಈ ತಲೆಮಾರಿನ ಜನರಿಗೆ ಪ್ರತಿಫಲ ದೊರಕದೇಯಿರುವಾಗ ಮುಂದಿನ ತಲೆಮಾರಿನವರಿಗೆ ದೊರಕುವುದನ್ನು ಈಗಲೇ ಮಾಡುವುದರಿಂದ ಪ್ರಯೋಜನವೇನು ? ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು, ಅವುಗಳನ್ನು ಒಂದೇವರ್ಷದಲ್ಲಿ ಪೂರ್ತಿಮಾಡಿ, ಅದರಿಂದ ಬರತಕ್ಕ ಉತ್ಪತ್ತಿಯನ್ನು ಹಾಕಿ ಬೇರೆ ಯೋಜನೆಗಳನ್ನು ಕಾರ್ಯಗತಮಾಡುವುದಕ್ಕೆ ಸಾಧ್ಯವಾದೀತೆಂದು ಅನೇಕರು ಅಭಿಪ್ರಾಯಪಟ್ಟರು. ಆರೀತಿ ಅಭಿಪ್ರಾಯಪಡುವವರಲ್ಲಿ ನಾನೂ ಒಬ್ಬನು. ಪ್ರಜಾಪ್ರತಿನಿಧಿಗಳಿಂದ ಬಂದಿರುವ ಅಭಿಪ್ರಾಯಗಳನ್ನು ಕ್ರೋಡೀಕರಿಸಿ, ಯಾವುದನ್ನು ಮೊದಲು ಕೈಕೊಳ್ಳಬೇಕು, ಯಾವುದು ಬೇಡ ಎಂಬುದನ್ನು ನಿರ್ಧರಿಸಬೇಕೆಂಬ ಮನೋಭಾವವನ್ನು ಸರ್ಕಾರ ತೋರಿಸುತ್ತಿಲ್ಲ. ವಿವೇಚನೆಯಿಂದ ಖರ್ಚು ಮಾಡುತ್ತಿಲ್ಲವಾದುದರಿಂದ ಇಂಥ ಸರ್ಕಾರಕ್ಕೆ ಬೆಂಬಲಕೊಡುವುದು, ಈ ತೆರಿಗೆ ಹಾಕುವುದನ್ನು ಒಪ್ಪುವುದು ನ್ಯಾಯವಲ್ಲ. ಆದಕಾರಣ ಈ ಮಸೂದೆಯನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. LINGANNA (Nanjangud).—Sir, when the last Budget was placed before us, the Finance Minister was pleased to state before this House that the main motto and the policy of the Government was to save monies wherever possible by retrenchment or by stopping such items of expenditure which were not of absolute necessity to the advancement of the State or for administrative purposes of the State. Today the Appropriation Bill has been placed before us and before that another Budget speech was made on the floor of this House, the members of which are supposed to be the representatives of ninety lakhs of people.

Sri V. VENKATAPPA.—We are.

Sri M. LINGANNA.—Even in that speech, a case has been made out for retrenchment and also for cutting down unnecessary expenditure.

I wish to point out certain items of expenditure which could have been saved and by which the new taxation to be levied by the present Government would be quite unnecessary. In the very first instance, I wish to draw the attention of the Treasury Bench to one item of expenditure that they are going to incur and for which they ask our consent; that is, the building for the House of Legislature in the State. As we all know, one lakh was expended for the construction of this Hall in which we are sitting and also we know that the Legislative Council which is functioning has a different Hall of its own.

After having expended one lakh of rupees and after having come to know that our Budget is deficit to the tune of 1½ crores, I must humbly submit that the Government are ill-advised in trying to expend nearly 50 lakhs of rupees over a new building which is going to be constructed and if this construction is postponed, then the Treasury would have 50 lakhs of rupees in its exchequer and the new tax proposed by which they are expecting nearly 40 to 50 lakhs would not have been of absolute necessity. The second item of expenditure that they are thinking of nearly to the tune of five lakhs is for the so-called cultural development of the State. I have expressed my opinion in regard to this and I once again submit that this item of expenditure is also not necessary. Sir, by this we would have saved nearly 55 lakhs. There is also another item of expenditure for which they are dragging in the name of the Central Government and that is the Food Department. For the maintenance of that particular department they are now expending nearly 40 lakhs of rupees. If the Government had taken a bold step and completely decontrolled, what would have been the state of affairs? They would have saved nearly 40 lakhs of rupees by that also, and, looking at the Budget figures, all told we could have saved nearly one crore of rupees. What are the taxation measures that they are now contemplating and what is the amount that they are going to get from these several fiscal measures? They at best can get something like 40 or 50 lakhs as per estimation. If these three or four

items of expenditure had been completely postponed, probably there would have been no occasion for the Government to bring in these new Bills by which they seek to enhance the education cess, the petrol tax and certain taxes on seating capacity and other things so far as the Motor Vehicles Act is concerned. We know the opinion of the House so far as these items of taxation are concerned.

I have expressed my views so far as education cess is concerned. With regard to other taxation measures there is a lot of opposition and I believe that opposition is not unfounded. The policy that was announced at the time when the first Budget session was held is not being stuck to. There must have been lot of vision and if they had followed a policy of cutting down all expenses unnecessary on their part, probably the new taxation would not have been necessitated and the deficit to the tune of 1½ crores would not have arisen at all.

I submit that this Appropriation Bill needs further consideration by the Treasury Bench and with these few words I close my remarks.

Sri S. SRINIVASA IYENGAR (T.-Narsipur).—Mr. Speaker, I oppose the Appropriation Bill No. 2, 1953. I hope this House will agree with me when I say that the system of Police administration under a bureaucratic set-up is differnet from that in a democratic set-up. We won freedom in the year 1947 and from that day till today we seen to have adopted the principle of *laissez faire*. The Police budget in the year 1934-35 was 18.96 lakhs and it came to 56.10 lakhs when the Congress Ministry came into power. This amounts to, in the language of percentages, to three hundred per cent rise over that of 1934-35 after the Congress Party came into power, *i.e.*, in 1947. Today in 1953-54 the amount that is asked for by this department is 112.86 lakhs.

Sri G. A. THIMMAPPA GOWDA (Arkalgud).—So you do not want Police ?

Sri S. SRINIVASA IYENGAR.—Did I say that ? In the language of percentages, from the year 1947-48 to 1953-54 there is a rise of 101.6 per cent. This rise now is due to many reasons. One of the reasons, I believe, is the system of accounting. Previously, certain amounts used to be shown under the Heads 32-B and 57. These two heads have been merged together under one head, now called Police Administration. I submit that this rise in the Police budget is not required and the reasons are as follows. The reasons as stated in the various Budget Memoranda for increase in expenditure during the course of presenting the Budget were as follows.

In 1942-43 the rise in the Police budget is attributed to additional Police force in Bangalore City and Mysore City. You know what that year represents. It was the year when the members of the opposite side had participated in political demonstrations and agitations. The Government then needed a very strong police force to put them down and maintain peace. Now the position is changed. Have we effected any economy in the Police force as it stood in 1942-43 ? Further, in the year 1943-44 it is said "for internal security and for policing railway lines." This seems to be the reason offered by the then Government for the increase of amount in the Police budget. Further on it is said in 1944-45 "emergency Police force due to rationing". That was the reason given by the Government for the enhanced expenditure under the Police budget. The increase in 1947-48, it is stated, was due to the revision of scales of pay and due to the charges incurred on account of under-trial prisoners of political and other disturbances. These were the reasons that were being given by the Government for the increase in the Police budget. I submit that none of these reasons can hold good today. But still the Government feel that they want the entire Police force. What does it represent ? When will the

(SRI S. SRINIVASA IYENGAR.)

present Government think of changing the set-up of Police administration to a set-up that ought to be under a democracy? I have been told—I have not visited foreign countries—that in England where democracy is an old institution that the Police administration is just like an administration of social workers. An illustration was also given to me how a blind woman sitting on a pavemet with a bundle of news papers would get her entire coin by the evening for all the news papers without missing even a single penny. It is true that the moral code and the national character in England is higher than what we have here. We have to develop in that aspect. But still the police force that was employed ....

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೇ ಸಂಸ್ಕೃತಿ ಪ್ರಚಾರಬೇಕು.

Sri S. SRINIVASA IYENGAR.—That prachara is necessary for both of us.

I submit that the emergency force for the Armed Reserve Police measures and other forces that were employed prior to 1947-48 are of no need today and the Government should have reduced them. That our Home Minister, who is energetic and who is always anxious to know the views of the other side and who is always having a dash, has not thought of doing anything towards economising the expenditure, is something quite unthinkable. I believe, at least now, he will certainly devote greater attention and see that there is a lot of saving in the Police budget.

The next important issue I want to submit is the existence of certain types of officers who are superfluous in that department. I mean that the Deputy Inspectors-General of Police are superfluous in that department. The Police Act that is in force today was enacted in 1908 and amended from time to time, *i.e.*, in 1921, 1932, 1935 and 1943. That Act has no provision wherein statutory powers are given to the Deputy Inspectors-General. You are having an officer who has to function without any statutory powers, but still Government think that the post of Deputy Inspector-General of Police is necessary.

2-30 P.M.

And the second important point is, that an appeal against a District Superintendent of Police lies with the Deputy Commissioner and not with the Deputy Inspector-General of Police. The Deputy Commissioner and the District Superintendent of Police both hold like powers over the subordinates in the Police Department lower than the rank of the Sub-Inspector. Therefore, I feel that the position of the Deputy Inspector-General of Police is anomalous.

The next thing is as regards the anomalous position about this Act. This Act is old. This Act (Police Act) was framed at a time when the rulers had in them the view that they are the rulers and the people are the ruled. To-day we are having a set-up wherein our popular Ministers are elected; the rule is for the people and by the people. Therefore the Police Act needs a thorough revision and must be so drafted as to satisfy the needs of the State for maintaining law and order.

The third thing I want to submit is this. Under the Police budget, a provision has been made for the fire brigade. There is a division in Bangalore and Mysore. I would like to know from the Hon'ble Minister how many cases of fire have been handled by the fire brigade in Mysore City for the last eight years. Naturally I submit that it is an amenity that has been provided for the metropolitan city and rightly, the expenditure should be met by the local bodies and not by the State. The fire brigade that is stationed in Bangalore and Mysore takes away about Rs. 2 to 3 lakhs of our revenue and this amount is to be met by the

local bodies concerned and not by the State.

Sri H. SIDDAVEERAPPA.—We have many of our officers there in Bangalore and Mysore.

Sri S. SRINIVASA IYENGAR.—The cost must be met by the local bodies. That is my point.

Sri H. SIDDAVEERAPPA.—This is the capital of the State.

Sri S. SRINIVASA IYENGAR.—At the same time the Corporation gets the revenue.

Next as regards the Railway Police. There are two divisions under the Railway Police. One is the order police and the other is the criminal police. The charges on the order police are met by the Centre and the other side of the police administration is met out of the State's revenue. At the same time the salary of the Deputy Inspector-Generals of Police is met by the State and not by the Centre. The amount of money that the Government of India is giving to our State falls short of what you spend on the order police. The Government of India gives you Rs. 2.65 lakhs towards the maintenance of this order police while the State is spending Rs 3.42 lakhs on them. Further the order police that are working in the railways have not got the benefits that a central employee should get. The Police Constable of the Centre gets a basic salary of Rs. 30 plus dearness allowance of nearly Rs. 55, altogether a sum of Rs. 85 a month, but our policeman who belongs to the State of Mysore but who does the job of the Centre still continues to get what little he is allowed under the Mysore set-up. Therefore, I feel there is a fit case for our Government to represent to the Government of India that the order police that are doing the duties of the Centre should be paid a similar salary as is being done in other cases. Further, the amount of money that is spent on the criminal police must also be met by the Centre and not by the State.

Another important thing I want to mention is this. In any democratic country, there are two types. One is the civil police and the other is the military police and I have not read instances wherein there is some other force called the Mysore Armed Reserve Police in between the civil police and the army. It is the civil police that maintains law and order and it is the civil police that discharges punctually its preventive and executive duties. The existence of Mysore Armed Reserve Police means that the civil police are not in a position to-day in Mysore State to cope with the situation. You want a reserve police squad. A reserve police represents always a striking force. I would put it to you, what is the need for maintaining such a heavy reserve police at a cost of nearly Rs. 1.12 lakhs? I sumbit, therefore, that the civil police must be given the necessary training to discharge these powers and functions and have these privileges and responsibilities. The minimum qualification of a constable should be a S.S.L.C. and the minimum basic salary must not be less than Rs. 40. While recommending increase in salary, I may expect a cross-question "there is a deficit budget, how can you do it." By economising the various items of expenditure which I have just now narrated, you can certainly save to the tune of nearly Rs. 30 lakhs in the police budget and meet this enhanced salary to the police constable.

Sri H. SIDDAVEERAPPA.—Is the Hon'ble Member aware that police expenditure in Mysore is the lowest in India.

Sri S. SRINIVASA IYENGAR.—I come to it. I am glad that you reminded me about it. The police budget in the Mysore State forms one-eighth of the total revenue. The normal revenue of the State is Rs. 9.06 crores. Centre's subsidy: 3.85. Under industrial concerns the normal receipts from the sale proceeds of the industrial concerns is 7.6. All these put together comes to Rs. 20 crores. That does not represent your real revenue. Your revenue

(SRI S. SRINIVASA IYENGAR.)

is Rs. 9.06 crores, but your commitment is Rs. 15.5 crores. The net deficit is about Rs. 6.9 crores of which Rs. 3.85 crores is given a set off to the Centre. Your permanent deficit is Rs. 2.4 crores. This year you have drawn from funds. Therefore your deficit is Rs. 1.5 crores; next year you have no funds. That also adds to the deficit. So taking into consideration the normal revenue at 9.06 crores, the police budget is one-eighth of the total revenue of the State and we have 13 policemen for every 10,000 people, while it is 9 for every 10,000 in other States. The Hon'ble Minister may kindly verify.

Sri H. SIDDAVEERAPPA.—Not 13, but 15.

Sri S. SRINIVASA IYENGAR.—You have 15 for 10,000. It is 9 in other parts of India.

Mr. SPEAKER.—There was some confusion. I could not follow these figures about the Police Department.

Sri S. SRINIVASA IYENGAR.—I said that there are 13 policemen for every 10,000 of population.

Mr. SPEAKER.—He contradicts.

Sri S. SRINIVASA IYENGAR.—He said it is 15. I said in other parts of India it is 9 per 10,000.

Sri H. SIDDAVEERAPPA.—My friend's figures always puzzle me.

Sri J. MOHAMED IMAM.—The normal revenue is 9 crores. A sum of Rs. 108 lakhs is spent.

Sri S. SRINIVASA IYENGAR.—The normal revenue is Rs. 9.06 crores. You can verify.

Mr. SPEAKER.—The Hon'ble Minister said that the Police expenditure in Mysore is the lowest.

Sri S. SRINIVASA IYENGAR.—The normal expenditure in other parts of India is one-ninth of the revenue, while that of ours is one-eighth, taking into consideration that the normal revenue in the State is Rs. 9.06 crores. I submit that in case I am in error, I will stand corrected after the information is received.

Sri H. SIDDAVEERAPPA.—We are only spending 6 per cent. I am going to give you all-India figures. I verified that the expenditure on the Police in Mysore is the lowest as compared with other parts of India, with the possible exception of Travancore and Cochin.

Mr. SPEAKER.—I remember when that demand was moved, he made a statement. It was lengthy enough and I remember that his figures were correct. Anyhow, you can verify it.

Sri S. SRINIVASA IYENGAR.—I submit we were on that day observing silence. I noted the figures.

I come to the next point. We have in our State 151 Inspectors of Police for 82 taluks. In other parts I submit there is an Inspector for every circle comprised of more than one taluk. After all, in any Station House, the important person that discharges the duty of a police officer is the Sub-Inspector. It is the Sub-Inspector who will be in charge of the Station House and he does the maximum work. The Inspector's job is to forward all papers to the Sub-Inspector and submit them to his superior. Therefore, I feel that the State can certainly economise by reducing the number of Inspectors and improving the condition of the Sub-Inspectors and thereby effect economy. I am glad that the Government have already passed orders improving the conditions of the Sub-Inspector and I know in the Inspector-General of Police we have a real policeman. Hitherto we used to have a M. C. S. for the place and we are now having a real policeman and it is now that we can ever think of any change in the administration and improving the lot of the police constable.

Then I come to the position of the Assistant Superintendents of Police. I believe we have now 24 Assistant Superintendents of Police. Normally what happens is, even under the Police Act of 1908, the Assistant Superintendent of Police has no

statutory powers of functions. It is said that he discharges such of the duties and powers as are delegated by the District Superintendent of Police. So why should you have him? You could as well reorganise the entire department in such a manner as to have a District Superintendent of Police in each district and some assistants wherein you find that the districts are heavy. Thereby not only you will be making the department highly efficient but alert. On account of the existence of Assistant Superintendent of Police, every paper that leaves the Inspector's office is delayed by going to the Assistant Superintendent of Police and then on to the District Superintendent of Police. Therefore, I submit that you can certainly do some good work so far as this aspect is concerned.

At present in our cities we have an over-head administration of police. In all other metropolitan cities I think we have one Commissioner with First Class Magistrate's power. Under the Commissioner we have one District Superintendent of Police and two Assistant Superintendents of Police to administer the city areas. We are having to-day one Deputy Inspector-General of Police, two District Superintendents of Police and eight Assistant Superintendents of Police in major cities, say, in a City like Bangalore. I consider that by adopting the procedure of having a Commissioner of Police in cities like Bangalore with First Class Magistrate's power, you can have a better administration of police rather than what is being done to-day. I hope the Hon'ble Minister will think about this and see how best he could re-organise the department.

Sir, the Hon'ble Minister was pleased to say that our police budget was the lowest in the whole of India. Apart from getting myself corrected, I submit that the State has provided one-ninth of its ordinary revenue to provide medical assistance to the people, while they want one-eighth of it for Police institutions! I submit that it is the Medical Department that should have asked for more and not the Police Department.

I have just spoken these things in order to impress on you that under the present set of circumstances of democratic Government, it is high time that the Police administration is re-organised and re-orientated under a new order.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ನಾನು ಈಗ ಸಭೆಯ ಮುಂದಿರತಕ್ಕ ಮೈಸೂರು ಅಪ್ರೋಪ್ರಿಯೇಷನ್ ನಂಬರ್ ಎರಡನೆಯ ಮಸೂದೆ 1953, ಇದರ ವಿಷಯದಲ್ಲಿ ಕೆಲವು ವಿಷಯಗಳನ್ನು ಹೇಳಲು ಬಯಸುತ್ತೇನೆ. ಈಗಾಗಲೇ ಆಯವ್ಯಯದ ಅಂದಾಜು ಪಟ್ಟಿಯ ಮೇಲೆ ಮಾತನಾಡುತ್ತಾ ಅಲ್ಲಲ್ಲಿ ನನ್ನ ಅಭಿಪ್ರಾಯಗಳನ್ನು ಕೊಡಲು ಸಾಧ್ಯವಾಗಿದೆ. ನಾನು ಭಾವಿಸಿರುವಂತೆ ಒಟ್ಟು ಒಂದು ಪೂರ್ಣವಾದ ದೃಷ್ಟಿಯಿಂದ ನಮ್ಮ ಸಂಸ್ಥಾನದ ಆಯವ್ಯಯವನ್ನು ನೋಡುವುದಕ್ಕೆ ಈಗ ಅವಕಾಶವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಒತ್ತಿ ಹೇಳಬೇಕಾಗಿದೆ. ಅದೇನೆಂದರೆ, ಸಂಸ್ಥಾನಕ್ಕೂ ಕೇಂದ್ರಕ್ಕೂ ಇರತಕ್ಕ ಒಂದು ಬಾಂಧವ್ಯ. ಪ್ರಜೆಗಳ ದೃಷ್ಟಿಯಿಂದ ಈ ಬಾಂಧವ್ಯದ ಬಗ್ಗೆ ಹೇಳುವುದಾದರೆ, ಕೆಲವು ವೇಳೆ ಪ್ರಜೆಗಳು ಕೆಲವು ಸೌಲಭ್ಯಗಳನ್ನು ಕೇಳಿದಾಗ ಸಂಸ್ಥಾನದ ಸರ್ಕಾರ ಕೇಂದ್ರ ಸರ್ಕಾರದ ಮೇಲೂ ಕೇಂದ್ರ ಸರ್ಕಾರ ಸಂಸ್ಥಾನದ ಮೇಲೂ ಜವಾಬ್ದಾರಿಯನ್ನು ಒಡಾಡಿಸುವುದು, ಮಾನ್ಯ ಸದಸ್ಯರೊಬ್ಬರು ಹೇಳಿದಂತೆ, ಕಣ್ಣಾಮುಚ್ಚಾಲೆ ಆಟದಂತೆ ಕಂಡು ಬರುತ್ತದೆ. ಹೀಗೆ ಕಣ್ಣಾಮುಚ್ಚಾಲೆ ಆಡಬಾರದು. ಜನರಿಗೆ ಕೇಂದ್ರ ಸರ್ಕಾರವೂ ಒಂದೇ ಮಾನ್ಯ ಹನುಮಂತಯ್ಯನವರ ಸರ್ಕಾರವೂ ಒಂದೇ. ಆದ್ದುದರಿಂದ ಇನ್ನು ಮುಂದೆ ಯಾವುದೇ ಸಂದರ್ಭದಲ್ಲಾಗಲಿ ಈ ಸರ್ಕಾರ ಕೇಂದ್ರದ ಮೇಲೆ ಜವಾಬ್ದಾರಿಯನ್ನು ಹೊರಿಸಿ ತಾನು ತನ್ನ ಜವಾಬ್ದಾರಿಯನ್ನು ಜಾರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಾರದು,

ಎರಡನೆಯದಾಗಿ, ಮಂತ್ರಿಮಂಡಲದ ಬಗ್ಗೆ ಹೇಳುವುದಾದರೆ, ಅವರ ಪ್ರವಾಸದ ಸಮಯದಲ್ಲಿ ಕೆಲವು ನೀತಿನಿಯಮಗಳನ್ನನುಸರಿಸುವುದು ಅತ್ಯಗತ್ಯವೆಂದು ನಾನಂತೂ ಭಾವಿಸಿದ್ದೇನೆ. ಕೆಲವು ಸಲ ಒಂದು ಜಿಲ್ಲೆಗೆ ಒಂದೇ ತಿಂಗಳಲ್ಲಿ ಎರಡು, ಮೂರು, ನಾಲ್ಕು ಜನ ಮಂತ್ರಿಗಳು ಎರಡು ಮೂರು ಸಲ ಬಂದಿರುವ ಸಂದರ್ಭಗಳಿವೆ. ಹೀಗೆ ಅವರು ಬಂದಾಗ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಮತ್ತು ಬೇರೆ ಇಲಾಖೆಗಳವರಿಗೆ ಎಷ್ಟು ಕಾಲ ವ್ಯಯವಾಗಿರುತ್ತದೆ ಎಂಬುದನ್ನು ನಾವು ನೋಡಬಹುದು. ಈ ಸಂಬಂಧದಲ್ಲಿ ಮದರಾಸು ಸರ್ಕಾರದವರು ಒಂದು ಸಮಿತಿಯನ್ನು ಕೂಡ ರಚನೆಮಾಡಿ ಆ ಸಮಿತಿಯವರು ವರದಿಮಾಡಿದ್ದಾರೆ. ಅವರು 'ಇದು ಬಹಳ ಸೂಕ್ಷ್ಮವಾದ ಸಮಸ್ಯೆ, ಖಚಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಕಷ್ಟ, ಅವರೇ ತಿಳಿದುಕೊಂಡು, ಒಂದು ನೀತಿಯನ್ನನುಸರಿಸಿ ನಡೆಯುವುದು ಒಳ್ಳೆಯದು' ಎಂದು ಹೇಳಿದ್ದಾರೆ. ಆದುದರಿಂದ ಮೊದಲೇ, ಮಂತ್ರಿಗಳು ಪ್ರವಾಸಮಾಡುವುದಕ್ಕೆ ಪೂರ್ವಭಾವಿಯಾಗಿ, ಎಲ್ಲಿಗೆ ಹೋಗಬೇಕು, ಯಾವ ಸ್ಥಳಕ್ಕೆ ಹೋಗದಿದ್ದರೆ ಪ್ರಜೆಗಳ ಹಿತ ಅಥವಾ ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎಂದು

(ಶ್ರೀ ಎಸ್. ಗೋಪಾಲಗೌಡ.)

ಯೋಚಿಸಿ ಅಲ್ಲಿಗೆ ಹೋಗಬೇಕು. ಮಂತ್ರಿಗಳು ಹೋದಾಗ ಅನೇಕ ಜನರಿಗೆ ಇಂಟರ್‌ವ್ಯೂ ಕೊಡುವ ಪದ್ಧತಿಯಿದೆ. ಹೀಗೆ ಕೊಟ್ಟಾಗ ಅಲ್ಲಿನ ಪ್ರಜಾಪ್ರತಿನಿಧಿಗಳು ಏನೇನು ಮನವಿಗಳನ್ನು ಮಾಡುತ್ತಾರೆ, ಏನು ಹೇಳುತ್ತಾರೆ, ಯಾವ ವಿಚಾರ ಪ್ರಜೆಗಳ ಹಿತದೃಷ್ಟಿಯಿಂದ ಮೊದಲು ಮಾಡತಕ್ಕದ್ದು ಎಂಬುದನ್ನು ನೋಡಿ, ಭರವಸೆಕೊಟ್ಟರೆ, ತಕ್ಷಣ ಅದನ್ನು ಈಡೇರಿಸುವುದಕ್ಕೆ ಪ್ರಯತ್ನಮಾಡಬೇಕು. ನನ್ನ ಸ್ವಂತ ಅನುಭವ ಹೇಳುತ್ತೇನೆ. ನಾನೂ ಒಂದೆರಡು ಸಲ ಪ್ರಜೆಗಳಿಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ನಿವೇದಿಸಿಕೊಂಡದ್ದುಂಟು. ಅವರು ಅದನ್ನು ಗಮನಕ್ಕೆ ತೆಗೆದುಕೊಳ್ಳಲೂ ಇಲ್ಲ, ಉತ್ತರವೂ ಇಲ್ಲ. ಬರಿಯ ಕ್ಷೇಮ ಸಮಾಚಾರ ವಿಚಾರಮಾಡುವ ಹಾಗಿದ್ದರೆ ಚಿಂತೆಯಿಲ್ಲ. ಬಂದಾಗ ಖುದ್ದು ಮಂತ್ರಿಗಳೇ ನೋಡಬೇಕಾದ ವಿಷಯವಿರುತ್ತದೆ, ಕೇಳಿ ವಿಮರ್ಶೆಮಾಡುವುದೂ ಇರುತ್ತದೆ, ಇನ್ನು ಸತ್ಯಾಂಶವನ್ನೂ ತಿಳಿಯಬೇಕಾದ್ದಿರುತ್ತದೆ. ಅಂಥ ಸಂದರ್ಭಗಳಲ್ಲಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳದೇಯಿದ್ದರೆ ಅವರ ಪ್ರವಾಸದ ಉದ್ದೇಶ ಬಹುಮಟ್ಟಿಗೆ ನೆರವೇರುವುದಿಲ್ಲವೆಂದು ನನ್ನ ಅಭಿಪ್ರಾಯ.

ಈ ಸಂದರ್ಭದಲ್ಲಿ ಮಂತ್ರಿಮಂಡಲಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ಪ್ರಾಮುಖ್ಯ ವಿಷಯವನ್ನು ಪ್ರಸ್ತಾಪಮಾಡಬೇಕಾಗಿದೆ. ತಮ್ಮೆಲ್ಲರಿಗೂ ತಿಳಿದ ಹಾಗೆ ತಾಮ್ರದ ತಂತಿ ಪ್ರಕರಣದ ಸಂಬಂಧದಲ್ಲಿ ಮಾನ್ಯ ಮಂತ್ರಿಗಳೊಬ್ಬರು ರಾಜೀನಾಮೆಕೊಡುವ ಸಂಭವ ಬಂತು. ನನಗೆ ತಿಳಿದ ಹಾಗೆ, ಅವರಿಗೆ ಕೊಟ್ಟಿದ್ದ ಪೋರ್ಟ್‌ಫೋಲಿಯೋವನ್ನು ಅವರಿಂದ ಕಿತ್ತುಕೊಂಡದ್ದು ಅವರ ರಾಜೀನಾಮೆಗೆ ಕಾರಣವಾಯಿತೆಂಬ ವದಂತಿಯಿದೆ. ಏನೇ ಇರಲಿ, ಈ ಒಂದು ಪ್ರಕರಣ ನಡೆಯಿತು, ಜನ ಜನಿತವಾಗಿ ಹಬ್ಬಿತು. ಈ ಸಂಬಂಧದಲ್ಲಿ ಅವರಿಂದ ಒಂದು ಹೇಳಿಕೆ ಕೂಡ ಬರಲಿಲ್ಲ. ತಾವು ಒಂದು ಕ್ರಮವನ್ನನುಸರಿಸಬೇಕಾದರೆ, ಸಂಬಂಧಪಟ್ಟ ಸಚಿವರು ರಾಜೀನಾಮೆಕೊಟ್ಟ ಮಾತ್ರಕ್ಕೇ ಜನತೆಯಲ್ಲುಂಟಾದ ಸಂದೇಹ ನಿವಾರಣೆಯಾದಂತಾಗಲಿಲ್ಲ, ಅವರು ತಪ್ಪಿತಸ್ಥರಲ್ಲವೆಂಬುದು ಹೊರಗೆ ಬರುವುದಿಲ್ಲ. ಆದುದರಿಂದ ತಾವು ತಪ್ಪಿತಸ್ಥರಲ್ಲವೆಂಬುದನ್ನು ಜನರಿಗೆ ಯಾವ ರೀತಿ ತೋರಿಸಬೇಕೋ ಆ ರೀತಿ ತೋರಿಸದೇಯಿದ್ದರೆ, ಇನ್ನೂ ಹೆಚ್ಚು ಅನುಮಾನಪಡುವುದಕ್ಕೂ ಹರಡುವುದಕ್ಕೂ ಅವಕಾಶವಾಗುತ್ತದೆ.

ಇನ್ನೊಂದು ಅಮಾನಿಕೆರೆಯ ಪ್ರಕರಣ. ಈ ಹೊತ್ತಿಗೂ ಪತ್ರಿಕೆಗಳಲ್ಲಿ ಅಗ್ರ ಲೇಖನಗಳು ಕೂಡ ಬರುತ್ತಲೇ ಇವೆ. ಮಂತ್ರಿಮಂಡಲದವರೊಬ್ಬರನ್ನು ಅಲ್ಲಿಗೆ ಕಳುಹಿಸಿ ಯಾವ ರೀತಿ ಕೆಲಸ ನಡೆಯುತ್ತಿದೆಯೆಂದು ಅವರು ಹೇಳಿಕೆ ಕೊಟ್ಟರು. ಆದರೆ ಮುಖ್ಯವಾಗಿ ವಿರೋಧ ಪಕ್ಷದವರೇ ಆಗಲಿ, ಬೇರೆ ಇನ್ನಾರಾದರೂ ಟೀಕೆ ಮಾಡುವವರೇ ಆಗಲಿ ಮಂತ್ರಿಗಳು ಹೋಗಿ ಪರಿಶೀಲನೆ ನಡೆಸುವಾಗ ಅಲ್ಲಿರಲಿಲ್ಲ. ಇವರು ಹೋಗುವಾಗ ಜನರಿಗೆ ತಿಳಿವಳಿಕೆ ಕೊಡಲಿಲ್ಲ. ಆದಕಾರಣ ತಾವು ಒಂದು ಹೇಳಿಕೆಯನ್ನು ಕೊಟ್ಟ ಮಾತ್ರಕ್ಕೇ ಅಥವಾ ಯಾರ ಮೇಲೆ ದೂರು ಬಂತೋ ಅವರು ಪತ್ರಿಕೆಗಳನ್ನು ಕಟುವಾಗಿ ಟೀಕೆಮಾಡಿದ ಮಾತ್ರಕ್ಕೇ ಅಥವಾ ಅವರ ಜೊತೆಗಾರರಾಗಿ ಕೆಲಸಮಾಡುವ ಸಚಿವರು ಇವರು ಅಧಿಕಾರದ ಸ್ಥಾನವನ್ನು ದುರುಪಯೋಗಮಾಡಿಕೊಂಡು ಆ ಕೆಲಸಮಾಡಿಲ್ಲ ಎಂದು ಹೇಳಿದ ಮಾತ್ರಕ್ಕೇ ಅದು ಸರಿ ಎಂದು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇಂಥ ಸಂದರ್ಭ ಬಂದಾಗ ಯಾರು ವಿರೋಧ ಪಕ್ಷದ ಮುಖಂಡರಿರುತ್ತಾರೋ ಅವರನ್ನೂ ಹತ್ತಿರದ ಜನ ಯಾರಿರುತ್ತಾರೋ ಅವರೊಬ್ಬರನ್ನೂ ಒಳಗೊಂಡ ಸಮಿತಿಯನ್ನಾದರೂ ಮಾಡಿ ಪೂರ್ತಿಯಾಗಿ ಪರಿಶೀಲಿಸಿ ಟೀಕೆಗಳಿಗೂ ದೂರುಗಳಿಗೂ ಅವಕಾಶ ಅಥವಾ ಆಧಾರವಿಲ್ಲ ಎಂಬುದನ್ನು ಸ್ಪಷ್ಟವಾಗಿ ದೇಶದ ಮುಂದೆ ತಿಳಿಸುವುದು ಎಂಥ ಪ್ರಜಾಪ್ರಭುತ್ವ ಸರ್ಕಾರದಲ್ಲಿಯೂ ಮುಖ್ಯವಾದ ನಿಯಮ, ಮೂಲಸಿದ್ಧಾಂತ. ಅದನ್ನು ಮಾಡದೆಯಿದ್ದರೆ, ನೀವು ಎಷ್ಟು ಮುಚ್ಚಿದರೂ ನಾವು ಸಹಿಸುವುದಕ್ಕಾಗುವುದಿಲ್ಲ. ಇಷ್ಟು ದಿವಸವೂ ನಾವು ಸಹಿಸಿದೆವು, ತಾವು ಸತ್ಯವನ್ನು ಎತ್ತಿಹಿಡಿಯುತ್ತೀರೆಂದು, ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಇನ್ನು ಮುಂದಾದರೂ ಇಂಥ ಪ್ರಕರಣ ಇನ್ನೊಂದು ಬಂದರೆ, ಸರಿಯಾದ ಮಾರ್ಗವನ್ನನುಸರಿಸಬೇಕು. ಇನ್ನೊಂದು ಗಂಧಕದ ಪ್ರಶ್ನೆ, ಪ್ರಸ್ತಾಪಿಸಿ ಕೈಬಿಟ್ಟರಿ. ಕೆಲವು ಇಂಥಾ ಪ್ರಸಂಗಗಳು ಬರುತ್ತವೆ. ಅವುಗಳಲ್ಲಿ ಕೆಲವು ಬರಿಯ ಅಪಾದನೆಗಳಾಗಿರಬಹುದು ಮತ್ತೆ ಕೆಲವು ನಿಜವಾಗಿರಬಹುದು. ಸಾಬೀತು ಮಾಡದೇಯಿದ್ದರೆ ಮುಂದೆ ಕಷ್ಟ ಬರುತ್ತದೆ. ಹೀಗೆ ಮಾಡಿದರೆ ಪ್ರಜಾಪ್ರಭುತ್ವ ಸರಿಯಾಗಿ ನಡೆಯದೇಯಿರುವ ರೀತಿ ಒಂದು ಕೆಟ್ಟ ಮೇಲ್ಪಂಕ್ತಿಯನ್ನು ಹಾಕಿಕೊಡುತ್ತೀರೆಂದು ಎಚ್ಚರಿಕೆಕೊಡುತ್ತೇನೆ.

ಇನ್ನು ಮೂರನೆಯದು, ಭೂಸುಧಾರಣೆಯ ವಿಷಯ. ಈ ವಿಷಯವನ್ನು ಅನೇಕ ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ಈ ಹೊತ್ತು ತರತಕ್ಕ ಇನಾಮ್ ರದ್ದಿಯಾತಿ ಮಸೂದೆ ಈ ಸಮಸ್ಯೆಯ ಅಂಚನ್ನು ಕೂಡ ಮುಟ್ಟುವುದಿಲ್ಲ. ಈ ವಿಷಯದಲ್ಲಿ ಮೂಲ ಭೂತ ಸುಧಾರಣೆಯಾಗಬೇಕೆಂದು ಎಷ್ಟೋ ದಿವಸಗಳಿಂದ ಕೂಗು ದೇಶದಲ್ಲಿ ಕೇಳುತ್ತಿದೆ. ಆದರೂ ಮುಂದೆ ಯಾವ ಹೆಜ್ಜೆಯನ್ನೂ ಹಾಕಿಲ್ಲ. ನಾವು ಮಾಡುತ್ತಿದ್ದೇವೆ, ನಿಧಾನವಾಗಿ ಮುಂದೆ ಹೋಗುತ್ತಿದ್ದೇವೆಂದು ಹೇಳಬಹುದು. ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಯಾವ ಪರಿಸ್ಥಿತಿ ಬಂದಿತ್ತು, ಯಾವ ರೀತಿ ಅವಕಾಶವಿತ್ತು ಎನ್ನುವುದೆಲ್ಲಾ ಗೊತ್ತಿದೆ. ಉದಾಹರಣೆಗೆ ಕಾಗೋಡಿನಲ್ಲಿ ಹೋರಾಟ ನಡೆಯಿತು. ರೈತರಿಗೆ ಪರಿಹಾರ ದೊರೆಯಲಿಲ್ಲ. ಸರ್ಕಾರ ಅಲ್ಲಿಯೂ ಕೂಡ ಸತ್ಯಾಂಶವನ್ನು ಹೊರಗೆಡಹಲಿಲ್ಲ. ಮುಚ್ಚಿ ದೊಡ್ಡಿ ಪ್ರಕರಣ ನಡೆಯಿತು ; ಇದರ ಬಗ್ಗೆ ಯಾವ ಖಚಿತವಾದ ಅಭಿಪ್ರಾಯವನ್ನೂ ಸರ್ಕಾರ ಕೊಡಲಿಲ್ಲ, ಯಾವ ಖಚಿತವಾದ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ. ಹಾಸನ ಜಿಲ್ಲೆಯಲ್ಲಿ ಕೆಂಚಟ್ಟವಳ್ಳಿ ಗ್ರಾಮದಲ್ಲಿ ರೈತರನ್ನು ಜಮೀನ್ದಾರರು ಜಮೀನು ಕಿತ್ತುಕೊಂಡು ಓಡಿಸುತ್ತಿದ್ದಾರೆ. ಇದಕ್ಕೆ ಯಾವ ಬಂದೋಬಸ್ತನ್ನೂ ಸರ್ಕಾರ ಮಾಡುತ್ತಿಲ್ಲ. ಹೀಗೆಯೇ ದೇಶಾದ್ಯಂತ ರೈತರನ್ನು ಜಮೀನ್ದಾರರು ಬಲ ಪ್ರಯೋಗದಿಂದ ಭೂಮಿಯಿಂದಲೂ ತಳ್ಳತಕ್ಕ ಪ್ರಸಂಗಗಳು ಅವ್ಯಾಹತವಾಗಿ ನಡೆಯುತ್ತಿವೆ. ಈ ಗೇಣೀದಾರರ ಕಾನೂನು ಹುಟ್ಟಿದ ಮೇಲೆ ಜಮೀನ್ದಾರರ ಪ್ರಕೋಪಕ್ಕೆ ಎಷ್ಟೋ ಜನ ರೈತರು ಪಾತ್ರರಾಗಿ, ತೀರ್ಥಹಳ್ಳಿಯಲ್ಲಿ ಮನೆ ನುಗ್ಗಿ ಹೊಡೆದಾಟವಾಗಿ ಕೇಸ್ ಹಾಕಿರುವುದು ಎಲ್ಲರಿಗೂ ಗೊತ್ತಿದೆ. ಈ ರೀತಿ ಬಡ ರೈತರ ಮೇಲೆ ಜುಲುಮೆ ನಡೆಯುತ್ತಿದೆ. ಇನ್ನು ಪ್ರೊಕ್ಯೂರ್‌ಮೆಂಟ್ ನೆಪದಿಂದ ಸರ್ಕಾರ ಪ್ರವೇಶಮಾಡಿ ರೈತರಿಗೆ ಕಿರುಕುಳ ಕೊಡುತ್ತಿದೆ. ಗೇಣೀದಾರರಿಗೆ ಸರಿಯಾದ ಕಾನೂನಿಲ್ಲ, ರಕ್ಷಣೆಯಿಲ್ಲ. ರೈತರು ಗೇಣಿಕೊಟ್ಟರೆ ಅವರಿಗೆ ರಶೀತಿ ಕೊಡುವುದಿಲ್ಲ. ಕಾನೂನಿದ್ದರೂ ಇದೆಯೋ ಇಲ್ಲವೋ

ಎನ್ನುವ ಅನುಮಾನ ಜನರಿಗೆ ಬರುವ ಪರಿಸ್ಥಿತಿಯಿದೆ. ಆದುದರಿಂಧ ಹೆಚ್ಚಿನ ಶ್ರದ್ಧೆವಹಿಸಿ ಸರಿಯಾದ ರೀತಿಯಲ್ಲಿ, ಈಗಿರುವ ಕಾನೂನಾದರೂ ಸರಿಯಾಗಿ ಜಾರಿಯಾಗುವ ರೀತಿಯಲ್ಲಿ, ಕಾರ್ಯಕ್ರಮವನ್ನು ಕೈಗೊಳ್ಳಬೇಕು.

ಇನ್ನು ನಾಲ್ಕನೆಯದಾಗಿ, ಪಾನನಿರೋಧ ನೀತಿಯ ವಿಷಯ. ಇದೊಂದು ದೊಡ್ಡ ನೀತಿ ಎಂದಿಟ್ಟುಕೊಂಡರು. ಇದರಲ್ಲಿ ಮೂಲ ಭೂತವಾದ ಭಿನ್ನಾಭಿಪ್ರಾಯವಿದೆ, ಉದಾಹರಣೆಗೆ, ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿ ಶ್ರೀ ಸಿ. ಡಿ. ದೇಶಮುಖ್‌ರವರು ಇದನ್ನು ಪುನರ್ವಿಮರ್ಶೆಮಾಡಬೇಕೆಂದು ಹೇಳುತ್ತಾರೆ, ಬೊಂಬಾಯಿನ ಮುಖ್ಯ ಮಂತ್ರಿ ಮೊರಾರ್ಜಿ ದೇಶಾಯಿ‌ರವರು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಹೀಗೆ ಬೇರೆ ಬೇರೆ ಅಭಿಪ್ರಾಯಗಳಿವೆ. ವಿರೋಧ ಪಕ್ಷದವರೂ ತಮ್ಮ ಅಭಿಪ್ರಾಯವನ್ನು ಅನೇಕ ವೇಳೆ ಹೇಳಿದ್ದಾರೆ. ಅದನ್ನೆಲ್ಲಾ ನಾನು ಈಗ ಹೇಳುತ್ತಿಲ್ಲ. ಸರ್ಕಾರ ಯಾವುದೊಂದು ನೀತಿಯನ್ನು ಮುಂದಿಡುತ್ತಾರೋ, ಅನುಸರಿಸಿಕೊಂಡು ಬರುತ್ತಾರೋ. ಅದರಲ್ಲಿ ಅವರಿಗೆ ಸಂಪೂರ್ಣವಾದ ನಂಬಿಕೆಯಿರಬೇಕು. ಹಾಗಿಲ್ಲದೇ ಇರುವಾಗ ತಾವು ನಡೆಯತಕ್ಕ ದಾರಿಯಲ್ಲೇ, ತಮ್ಮ ಹೆಜ್ಜೆಯಲ್ಲೇ ತಮಗೆ ಅನುಮಾನವಿದ್ದರೆ, ಇದು ಯಾವತ್ತಿಗೂ ಕಾರ್ಯಗತವಾಗುವ ಸಂಭವವಿಲ್ಲವೆಂದು ಖಂಡಿತವಾಗಿ ಹೇಳಬೇಕಾಗಿದೆ. ಪಾನನಿರೋಧ ಎಲ್ಲಿ ಜಾರಿಯಲ್ಲಿದೆಯೋ ಅಲ್ಲಿ ಮರಗಳನ್ನು ಕಟ್ಟಲು ಕೊಟ್ಟಿರುವ ನೀತಿಗಿಂತ ಹೆಚ್ಚಿನ ಅನೀತಿ ಯೇನಿದೆ? ಈಗ ಪಾನನಿರೋಧ ವಿರುವ ಕಡೆ ಮರಗಳಿಂದ ಹೆಂಡವನ್ನು ಇಳಿಸಲು ಅವಕಾಶಕೊಟ್ಟಿದೆ. ಹೀಗೆ ಅವರು ಹೆಂಡ ಇಳಿಸಿದ ಮೇಲೆ ಕುಡಿಯದೆ, ದೇವರಿಗೆ ತೆಗೆದುಕೊಂಡು ಬರುವಂತೆ, ಅದನ್ನು ತೆಗೆದುಕೊಂಡು ಬರುತ್ತಾರೆಯೆ? ಅಲ್ಲಿ ಸಾರ್ವೋದ್ಧಾರವಾಗಿ ಹೆಂಡದ ವ್ಯಾಪಾರ ನಡೆಯುತ್ತಿದೆ!

Sri H. SIDDAVEERAPPA.—You are always accustomed to talk in the language of hyperbole.

ಶ್ರೀ ಎಸ್. ಗೋಪಾಲಗೌಡ.—ಇದನ್ನೆಲ್ಲಾ ನಾವು ಹೇಳಿದರೆ, ನಿಮಗೆ ಕಣ್ಣಿಲ್ಲ, ಎಷ್ಟು ಕೆರೆಗಳನ್ನು ಕಟ್ಟಿದ್ದೇವೆ ನೋಡಿ, ಕಣ್ಣು ಬಿಟ್ಟು ನೋಡಿ ಎಂದು ಹೇಳುತ್ತಾರೆ. ನಿಜ, ತಾವು ಕಟ್ಟಿರುವ ಕೆರೆ ಕಾಲುವೆಗಳು ನಮ್ಮ ಕಣ್ಣಿಗೆ ಕಾಣುತ್ತಿವೆ. ಆದರೆ, ನಿಮ್ಮ ಬೆನ್ನು ನಿಮಗೆ ಕಾಣುವುದಿಲ್ಲ. ನಿಮ್ಮ ತಪ್ಪು ನಿಮಗೆ ಕಾಣುವುದಿಲ್ಲ. ಆದುದರಿಂದ ಇದನ್ನು ಕನ್ನಡಿ ಹಿಡಿದು ತೋರಿಸುವುದು ನಮ್ಮ ಕರ್ತವ್ಯ. 'ಮೂಕೊರೆಯಾಗೆ ಕನ್ನಡಿಯಂ ತೋರೆ, ಮಾರೆ ಬೈಗುಂ, ಬಡಿಗುಂ' ಎಂಬಂತೆ ಕೋಪಿಸಿಕೊಂಡು ತಮಗೆ ತಮ್ಮ ತಪ್ಪು ಗೊತ್ತಿದ್ದರೂ ಕೂಡ ಇಲ್ಲವೆಂದು ಹೇಳುವುದಕ್ಕೆ ಹೊರಡುತ್ತೀರಿ. ಇದು ಪ್ರಜಾಪ್ರಭುತ್ವ ತತ್ವಕ್ಕೆ ಒಳ್ಳೆಯವದಲ್ಲವೆಂದು ಹೇಳುತ್ತೇನೆ. ಪಾನನಿರೋಧ ನೀತಿಯನ್ನು ಹೀಗೆ ಮುಂದುವರಿಸಿಕೊಂಡು ಹೋದರೆ ದೇಶದಲ್ಲಿ ಕ್ಷೋಭೆಯುಂಟಾಗುತ್ತದೆ. ಅಲ್ಲದೆ ಅನೇಕ ಸಂದರ್ಭಗಳಲ್ಲಿ ಎಷ್ಟೋ ಜನರು ಯಾವ ತಪ್ಪನ್ನೂ ಮಾಡದೇಯಿದ್ದರೂ ಪೋಲೀಸಿನವರು ತಮ್ಮ ಜೇಬಿನಲ್ಲಿ ಸೀಸೆ ಇಟ್ಟುಕೊಂಡು ಬಂದು ಅವರ ಮೇಲೆ ಕೇಸು ಹಾಕಿದ ಪ್ರಸಂಗಗಳು ನಡೆದಿವೆ.

ಶ್ರೀ ಎಚ್. ಸಿದ್ದವೀರಪ್ಪ.—ತಾವು ಹೇಳುವಷ್ಟು ಕೆಟ್ಟಿಲ್ಲ ನಮ್ಮ ದೇಶ. I challenge you to show one case where a Policeman has put a bottle in your pocket and put a case.

Mr. SPEAKER.—It is a matter for evidence.

3 P.M.

ಶ್ರೀ ಎಸ್. ಗೋಪಾಲಗೌಡ.—ನಾನು ಹೇಳುತ್ತಿರುವುದು 'hyperbole' ಅಲ್ಲ ಸತ್ಯಾಂಶ.

Sri H. SIDDAVEERAPPA.—I challenge him to give one case where a Policeman has put a bottle in his pocket?

ಶ್ರೀ ಎಸ್. ಗೋಪಾಲಗೌಡ.—ನನ್ನ ಪ್ಯಾಕೆಟ್‌ನಲ್ಲಿ ಇಟ್ಟು ಕೇಸನ್ನು ಹಾಕಿದ್ದಾರೆಂದು ನಾನು ಹೇಳಲಿಲ್ಲ. ಅಂಥ ಕೇಸುಗಳು ನಡೆದಿವೆ, ಅವುಗಳನ್ನು ತೋರಿಸುತ್ತೇನೆ ಎಂದು ಹೇಳಿದೆ. ನಾನು ತಿಳಿಸತಕ್ಕದ್ದರಲ್ಲಿ ಅಂಥ ತಪ್ಪುಗಳೇನಾದರೂ ಇದ್ದಲ್ಲಿ ನಾನು ಅವುಗಳನ್ನು ಒಪ್ಪಿಕೊಳ್ಳಲು ಸಿದ್ಧನಾಗಿರುತ್ತೇನೆ. ತಾವು ಪಾನನಿರೋಧ ನೀತಿಯನ್ನು ಜಾರಿಗೆತರಲು ಅನುಸರಿಸುತ್ತಿರುವ ನೀತಿ ಏನಿದೆಯೋ ಅದರಿಂದ ನಮಗೆ ಬರುತ್ತಿದ್ದ ವರಮಾನ ಒಂದು ಕಮ್ಮಿ ಆಯಿತೇ ಹೊರತು, ಕುಡಿತವೇನೋ ಕಮ್ಮಿ ಆಗಿಲ್ಲ. ಇಂದು ಅದು ಮನೆ ಮನೆಯಲ್ಲೂ ಒಂದು ಗೃಹಕೈಗಾರಿಕೆಯಂತೆ ಆಗಿ ಹೋಗಿದೆ! ಇದರಿಂದ ದೇಶದಲ್ಲಿ ಜನರ ನೈತಿಕ ಮಟ್ಟ ಕೆಳಕ್ಕೆ ಬರುತ್ತಿದೆ. ಇನ್ನು ತಾವೇನಾದರೂ ಈ ಜನರ ನೈತಿಕ ಮಟ್ಟವನ್ನು ಒಂದು ಕಾನೂನು ಬಲದಿಂದ ಸರಿಪಡಿಸುತ್ತೇವೆಂದು ಭಾವಿಸಿದ್ದರೆ ಅದು ತಪ್ಪು ಅಭಿಪ್ರಾಯವೆಂದು ಹೇಳಬೇಕಾಗುತ್ತದೆ. ಅಂತೂ ತಮ್ಮ ಈ ನೀತಿಯಿಂದ ಬಹಳ ಕಷ್ಟವಾಗುತ್ತದೆ. ಆದರೆ ನಾನೀಗ ಈ ವಿಚಾರದಲ್ಲಿ ಮೂಲ ಭೂತ ಅಂಶಗಳ ಬಗ್ಗೆ ಚರ್ಚೆಮಾಡಿ ತಮ್ಮ ಕಾಲವನ್ನು ಹೆಚ್ಚಿಗೆ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಆದರೆ ತಮ್ಮ ಇಂದಿನ ನೀತಿಯಲ್ಲಿ ಅನೇಕ ಲೋಪ ದೋಷಗಳಿವೆಯೆಂದು ಮಾತ್ರ ತಿಳಿಸುತ್ತೇನೆ. ತಮ್ಮ ನೀತಿಯಲ್ಲಿರತಕ್ಕ ಒಂದು ದೊಡ್ಡ ಲೋಪ ದೋಷವೇನೆಂದರೆ, ಈ ಪಾನನಿರೋಧವನ್ನು ಒಂದು ಕಡೆ ಜಾರಿಯಲ್ಲಿಟ್ಟು, ಮತ್ತೊಂದು ಕಡೆ ಜಾರಿಯಲ್ಲಿಡದೆ, ಹಾಗೆ ಎಲ್ಲೆಲ್ಲಿ ಈ ಪಾನನಿರೋಧವನ್ನು ಜಾರಿಯಲ್ಲಿಟ್ಟಿದ್ದೀರೋ ಅಂಥ ಕಡೆಗಳಲ್ಲಿರತಕ್ಕ ಸೇಂದಿ ಮರಗಳನ್ನು ಟ್ಯಾಪ್‌ಮಾಡಿ, ಆ ಹೆಂಡವನ್ನು ಅಲ್ಲಿಂದ ಸಾಗಿಸಿಕೊಂಡು ಬಂದು, ಜಾರಿಯಲಿಲ್ಲದ ಪ್ರದೇಶದಲ್ಲಿ ಬಿಕರಿ ಮಾಡತಕ್ಕಂಥ ಈ ನ್ಯೂನಾತಿರಿಕ್ತ ಮಾರ್ಗದಿಂದ ಜನರಿಗೆ ಅನುಕೂಲವಾಗುವ ಬದಲು ಇನ್ನೂ ಹೆಚ್ಚಿನ ತೊಂದರೆಗಳಾಗಲು ಅವಕಾಶವಿದೆ. ಅನೀತಿಗೆ ಅವಕಾಶವಿದೆ. ನಮಗೆ ಬರುತ್ತಿದ್ದ ರೆವೆನ್ಯೂ ಹಾಳಾಗಿ ಹೋದುದರ ಜೊತೆಗೆ, ಕಳ್ಳ ಭಟ್ಟಿ ಸಾರಾಯಿ ತಯಾರಿಕೆ, ಕದ್ದು ಹೆಂಡ ಕುಡಿಯುತಕ್ಕದ್ದು ಇತ್ಯಾದಿಗಳೆಲ್ಲಾ ಜಾಸ್ತಿಯಾಗಿ, ಜನ ಜಾಗ್ರತಿ ಹೊಂದುವುದಕ್ಕೆ ಬದಲಾಗಿ ಅವರೆಲ್ಲಾ ಸಂಪೂರ್ಣವಾಗಿ ಹಾಳಾಗಿ ಹೋಗುತ್ತಾರೆಂದು ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ನೀವು ಆ ಭದ್ರಾವತಿ ಕಬ್ಬಿಣದ ಕಾರ್ಖಾನೆಗಾಗಿ ಅನೇಕ ವರ್ಷಗಳಿಂದ ಕಾಡನ್ನು ಕಡಿಯುತ್ತ ಬಂದಿದ್ದೀರಿ. ಹಾಗೆ ಕಾಡನ್ನು ಕಡಿದು ಆ ಮರಗಳನ್ನೆಲ್ಲಾ ಸುಟ್ಟು ಇದ್ದಲು ಇತ್ಯಾದಿಗಳನ್ನು ಮಾಡಿ ಆ ಕಾರ್ಖಾನೆಗೆ ಸರಬರಾಯಿ

(ಶ್ರೀ ಎಸ್. ಗೋಪಾಲಗೌಡ)

ಮಾಡಿರತಕ್ಕ ಫಲವಾಗಿ ಈ ದಿವಸ ಮಲೆನಾಡಿನಲ್ಲಿ ಕಾಡೇ ಮಾಯವಾಗುತ್ತಾ ಬಂದಿದೆ. ಹೀಗೆ ಇನ್ನೂ ಕೆಲವಾರು ವರ್ಷಗಳು ಕಳೆದರೆ ಆ ಕಾಡುಗಳೆಲ್ಲಿದ್ದವು ಎಂಬ ಅಂದಾಜನ್ನೂ ಸಹ ಮಾಡಲು ಸಾಧ್ಯವಿಲ್ಲದಂತಾಗುತ್ತದೆ. ಹಾಗೆ ಕಾಡಿನಲ್ಲಿ ಮರಗಳನ್ನು ಕತ್ತರಿಸತಕ್ಕ ಪ್ರಮಾಣದಲ್ಲಿ ಕಾಡನ್ನು ಅಭಿವೃದ್ಧಿ ಮಾಡುತ್ತಿಲ್ಲ. ಅವರ ಕಡೆಗೆ ತಮ್ಮ ಗಮನವನ್ನೇ ಕೊಟ್ಟಿಲ್ಲವೆಂದು ಹೇಳಬೇಕಾಗಿದೆ ಹೀಗೆ ಅಫಾರಸ್ಟೇಷನ್ ಕೆಲಸಗಳು ಸರಿಯಾಗಿ ಆಗುತ್ತಿಲ್ಲ ಇನ್ನು ಅನೇಕ ಸಂದರ್ಭಗಳಲ್ಲಿ ಕಾಡಿಗೆ ಬೆಂಕಿ ಬಿದ್ದು ವಿಶೇಷ ನಷ್ಟಗಳಾಗುತ್ತಿವೆ. ಇದನ್ನು ಯಾರಾ ನಿಗಾಕೊಟ್ಟು ನೋಡಿಕೊಳ್ಳುತ್ತಿಲ್ಲ. ಇಂಥ ಅವ್ಯವಸ್ಥೆಗಳನ್ನು ತಡೆಗಟ್ಟಲು ಸರ್ಕಾರದವರು ಯಾವ ಒಂದು ಪ್ರಯತ್ನವನ್ನೂ ಸರಿಯಾಗಿ ಮಾಡಿಲ್ಲ. ಇನ್ನು ಈ ಇಲಾಖೆಯವರು ಲೈಸೆನ್ಸು ಕೊಡತಕ್ಕ ಪದ್ಧತಿಯಲ್ಲಿ ಜನರಿಗೆ ಬಹಳ ಕಿರುಕುಳಗಳಿರುತ್ತವೆ. ದೊಡ್ಡ ದೊಡ್ಡ ಕಾಡುಗಳ ಮಧ್ಯದಲ್ಲಿ ಲೈಸೆನ್ಸ್‌ದಾರರಾದವರು ಏನಾದರೂ ಒಂದು ಭಾರಿಮರವನ್ನು ಕಡಿದರೆ ಅದನ್ನು ಅವರು ಅಲ್ಲಿಂದ ನೇರವಾಗಿ ಅವರವರ ಮನೆಗಳ ಹತ್ತಿರಕ್ಕೇ ತರಬೇಕೆಂದು ಆ ಲೈಸೆನ್ಸಿನಲ್ಲಿ ನಮೂದಿಸಲಾಗಿದೆ. ಆದರೆ ಆ ಷರತ್ತಿನ ಪ್ರಕಾರ ಆ ಲೈಸೆನ್ಸ್‌ದಾರ ಆ ಭಾರಿ ನಾಟವನ್ನು ತನ್ನ ಮನೆಯ ಹತ್ತಿರಕ್ಕೆ ತರಬೇಕಾಗಿದ್ದರೆ ಅದಕ್ಕೆ ಆನೆ ಕಟ್ಟಿ ಎಳೆಸಿದ ಹೊರತು ಅದು ಅಲ್ಲಿಂದೀಚೆಗೆ ಬರಲು ಸಾಧ್ಯವಿಲ್ಲ. ಅದನ್ನು ಅಲ್ಲಾಡಿಸಲೂ ಕೂಡ ಸಾಧ್ಯವಿರುವುದಿಲ್ಲ. ಅಂಥ ಸಂದರ್ಭಗಳಲ್ಲಿ ಲೈಸೆನ್ಸ್‌ದಾರರು ಅಲ್ಲೇ ಕಾಡಿನಲ್ಲಿ ಗುಂಡಿಮಾಡಿ, ಆ ಮರವನ್ನು ಕೊಯ್ದುತರಲು ಅವಕಾಶ ಕೊಡುತ್ತಿಲ್ಲ. ಇಂಥ ಕಿರುಕುಳದ ಬಾಬುಗಳನ್ನಿಟ್ಟುಕೊಂಡಿರುವುದೂ, ಮತ್ತು ಕೆಲವು ಕೇಸುಗಳಲ್ಲಿ ಕಾಂಪೌಂಡು ಮಾಡುವಂಥ ಅವಕಾಶವಿಟ್ಟುಕೊಂಡಿರುವುದೂ ಕೇವಲ ಆ ಇಲಾಖೆಯ ಅಧಿಕಾರಿಗಳಿಗೆ ಒಂದು ವರಮಾನದ ಮಾರ್ಗಕ್ಕಾಗಿಯೇ ಹೊರತು ಬೇರೆ ಯಾವುದಕ್ಕೂ ಅಲ್ಲ. ಹೀಗೆ ಈ ಕಾಡು ಇರತಕ್ಕದ್ದು ಅವರಿಗೋಸ್ಕರವಾಗಿಯೇ, ಮತ್ತು ಇದು ಅವರಿಗೆ "ವಂಶಪಾರಂಪರ್ಯವಾಗಿ ಬಂದಿರತಕ್ಕಂಥ ಒಂದು ಸ್ವತ್ತು ಎಂಬ ಭಾವನೆ ಅವರಿಗೆ ಬಂದಿರುವಂತೆ ತೋರುತ್ತದೆ. ತಾವು ಈ ತೊಂದರೆಗಳನ್ನೆಲ್ಲಾ ಪರಿಹರಿಸಿ ರೈತರಿಗೆ ಅನುಕೂಲ ನೀಡಬೇಕು. ತಾವು ಈ ಇಲಾಖೆಯ ಅಧಿಕಾರಿಗಳನ್ನು ಒಂದು ಸರಿಯಾದ ಹದ್ದು ಬಸ್ತಿನಲ್ಲಿಡದೆ ಹೋದರೆ ಅಲ್ಲಿಯ ರೈತರು ತಮ್ಮ ಮನೆಮಠಗಳನ್ನು ಮಾರಾಟಮಾಡಿಕೊಂಡು ಹೋಗತಕ್ಕ ಪರಿಸ್ಥಿತಿ ಬರಬಹುದು. ಅವರು ಏನೊಂದು ತಪ್ಪುಮಾಡದೆ ಇದ್ದರೂ ಈ ಅಧಿಕಾರಿಗಳ ಕೈಗೆ ಸಿಕ್ಕಿ ನರಳುವ ಮತ್ತು ಮಾನಮರ್ಯಾದೆಗಳನ್ನೂ ಸಹ ಕಳೆದುಕೊಳ್ಳುವ ಸ್ಥಿತಿ ಬಂದಿದೆ. ಆದುದರಿಂದ ಸರ್ಕಾರದವರು ಆದಷ್ಟು ಬೇಗ ಈ ವಿಚಾರಗಳನ್ನೆಲ್ಲಾ ಪರಿಶೀಲನೆಮಾಡಿ ಜನರಿಗೆ ಅವಶ್ಯಕವಾದ ಪರಿಹಾರಗಳನ್ನು ನೀಡಬೇಕೆಂದು ಹೇಳುತ್ತೇನೆ.

ಇನ್ನು ನ್ಯಾಯಾಂಗ ವಿಚಾರ ತೆಗೆದುಕೊಂಡರೆ ನ್ಯಾಯಾಂಗ ಮತ್ತು ಕಾರ್ಯಾಂಗಗಳನ್ನು ಬೇರೆ ಬೇರೆಯಾಗಿ ಪ್ರತ್ಯೇಕಮಾಡಿಡಬೇಕೆಂದು ಹಿಂದಿನಿಂದಲೂ ಅನೇಕವಾಗಿ ಚರ್ಚೆಗಳು ನಡೆಯುತ್ತಲೇ ಬಂದಿವೆ. ಆದರೆ ಈ ಕೆಲಸವಿನ್ನೂ ಆಗಿಲ್ಲ. ಇದನ್ನು ಆದಷ್ಟು ಜಾಗ್ರತೆ ನೆರವೇರಿಸಬೇಕೆಂದು ಹೇಳುತ್ತೇನೆ. ನಮ್ಮ ಮುಂಖಡರೊಬ್ಬರು ಹೇಳುತ್ತಿದ್ದರು. 'ನಮ್ಮ ದೇಶದ ಜಿಲ್ಲಾಧಿಕಾರಿಗೆ ಅಮೆರಿಕದ ಅಧ್ಯಕ್ಷರಿಗಿಂತಲೂ ಅಧಿಕಾರ ಹೆಚ್ಚು' ಎಂದು. ಈ ಅಮಲ್ದಾರರಿಗೂ ಅಸಿಸ್ಟೆಂಟ್ ಕಮಿಷನರುಗಳಿಗೂ ಮತ್ತು ಡೆಪ್ಯುಟಿ ಕಮಿಷನರುಗಳಿಗೂ ಅಧಿಕಾರ ವ್ಯಾಪ್ತಿ ಬಹಳ ಹೆಚ್ಚಾಗಿರುತ್ತದೆ. ಆದ್ದರಿಂದ ಅವರು ನ್ಯಾಯಾಂಗ ಮತ್ತು ಕಾರ್ಯಗಳೆರಡನ್ನೂ ಸಾಕಷ್ಟು ಯಶಸ್ವಿಯಾಗಿ ನಡೆಸಿಕೊಂಡು, ಜನರ ತಪ್ಪು ನೆಪ್ಪುಗಳನ್ನು ತನಿಖೆಮಾಡಲು ಬಹಳ ಅಡಚಣೆಗಳೂ ಮತ್ತು ಅದರಿಂದ ತೊಂದರೆಗಳಾಗುವ ಸಂಭವಗಳೂ ಉಂಟು. ಈ ಅಂಶ ತಮಗೆಲ್ಲರಿಗೂ ಗೊತ್ತಿರಬೇಕು. ಆದರೆ ಪ್ರತಿಯೊಬ್ಬರಿಗೂ ನ್ಯಾಯ ದೊರೆಯಬೇಕಾದದ್ದು ಬಹಳ ಮುಖ್ಯವಾದುದೆಂಬುದನ್ನು ತಾವೆಲ್ಲರೂ ಒಪ್ಪುತ್ತೀರಿ. ಆದಾಗ್ಯೂ ಈ ಕಾರ್ಯ ಏತಕ್ಕಾಗಿ ಹೀಗೆ ಇನ್ನೂ ವಿಳಂಬವಾಗುತ್ತಿದೆಯೋ ಅದು ನನಗೆ ಅರ್ಥವಾಗದು. ಇದನ್ನು ಬೇಗ ಬದಲಾವಣೆ ಮಾಡಬೇಕೆಂದು ನಾನು ಸರ್ಕಾರದವರ ಹಿತದೃಷ್ಟಿಯಿಂದಲೂ ಮತ್ತು ನ್ಯಾಯದ ಹಿತದೃಷ್ಟಿಯಿಂದಲೂ ಒತ್ತಾಯ ಮಾಡುತ್ತೇನೆ.

ಇನ್ನು Efficiency Audit and Anti-corruption ಇಲಾಖೆ ವಿಚಾರ ತೆಗೆದುಕೊಂಡರೆ—ಈ ಇಲಾಖೆಯಲ್ಲಿ ಖರ್ಚು ವೆಚ್ಚಗಳು ನಿಷ್ಕಾರಣವಾಗಿ ದಿನ ದಿನಕ್ಕೂ ವಿಸ್ತರಿಸಿಕೊಂಡು ಹೋಗುತ್ತಿವೆ. ನಾವು ನಿರೀಕ್ಷಣೆ ಮಾಡಿದ್ದ ಮಟ್ಟದಲ್ಲಿ ಈ ಇಲಾಖೆ ಕೆಲಸಮಾಡುತ್ತಿಲ್ಲ. ಎರಡು ಮೂರು ವರ್ಷಗಳ ಕಾಲದ ಕೇಸುಗಳು pending ಇರುತ್ತವೆ. ಸರ್ಕಾರಿ ಅಧಿಕಾರಕ್ಕೆ ಬರತಕ್ಕ ಜನರು ಸರಿಯಾಗಿ ಕೆಲಸಮಾಡಬೇಕು, ಇಲ್ಲವೇ ತಮ್ಮ ಹುದ್ದೆಗಳಿಗೆ ಅವರು ರಾಜೀನಾಮೆಕೊಟ್ಟು ಹೋಗಬೇಕು. ಹಾಗೆ ಒಂದು ಯಾವ ಹೆದರಿಕೆಯೂ ಅವರಿಗೆ ಇಲ್ಲದಿರುವ ಕಾರಣ, ಅವರು ಈ ದಿವಸ ತಿಂಗಳ ಆಖೈರಿಗೆ ದುಡ್ಡು ಬಂದರೆ ಸರಿಯೆಂಬ ಭಾವನೆಯುಳ್ಳವರಾಗಿರುವುದರಿಂದ, ಹೀಗೆ ಸಹಸ್ರಾರು ಕೇಸುಗಳು ಮೂಲೆಗೆ ಬೀಳಲು ಅವಕಾಶವಾಗಿದೆ. ಹೀಗೆ ಕೆಲಸಗಳು ನಿಧಾನವಾಗುವುದಕ್ಕೆ ಅವಕಾಶಕೊಡದೆ ಅವು ಬೇಗ ಬೇಗ ತೀರ್ಮಾನವಾಗತಕ್ಕ ಏರ್ಪಾಡುಗಳನ್ನು ಮಾಡಬೇಕೆಂದು ತಿಳಿಸುತ್ತೇನೆ.

ಇನ್ನು P.S.C. ವಿಚಾರ. ಇದೊಂದು ದೊಡ್ಡ ಸಂಸ್ಥೆ. ಇದು ಮುಂದಕ್ಕೆ ಇನ್ನೂ ಅನೇಕ ದೊಡ್ಡ ದೊಡ್ಡ ಕೆಲಸಗಳನ್ನು ಮಾಡತಕ್ಕದ್ದಾಗಿದೆ. ಈ ಇಲಾಖೆಯಲ್ಲಿ ನಮಗೆಲ್ಲರಿಗೂ ಗೊತ್ತಿರುವ ಹಾಗೆ, ಬೇಕು ಬೇಕಾದವರಿಗೆ ಹುದ್ದೆಗಳನ್ನು ಕೊಡಲು ಅವಕಾಶವಿದೆ. ಆದರೆ ಅಂಥಾದ್ದು ಏನಾದರೂ ಕಮ್ಮಿ ಆಗಿದೆಯೋ ಎಂಬುದನ್ನು ನೋಡುವುದಕ್ಕೆ ಹೋದರೆ, ಅದೂ ಕೂಡ ಅನುಮಾನಾಸ್ಪದವಾಗಿಯೇ ಇದೆ. ನಿಷ್ಪಕ್ಷಪಾತವಾಗಿ...

Mr. SPEAKER.—Just this morning the rules were placed on the Table of the House. The Hon'ble Member may go through them and then comment.

ಶ್ರೀ ಎಸ್. ಗೋಪಾಲಗೌಡ.—ಬಹಳ ಸಂತೋಷವಾಯಿತು. ನಾನು ಎಷ್ಟೋ ಸಲ ಆ C.R.B. ಲಿಸ್ಟಿಗೆ ಸೇರಲು S.S.L.C. ದರ್ಜೆಯ ಅರ್ಜಿದಾರರಿಗೆ ಎಷ್ಟೆಷ್ಟು ಕಷ್ಟಗಳಿದ್ದವು ಎಂಬುದನ್ನು ತಿಳಿಸಿದ್ದೇನೆ. ಅವರ ಹೆಸರುಗಳನ್ನು ಆ ಒಂದು ಎನ್‌ಲಿಸ್ಟ್‌ಮೆಂಟ್ ಪಟ್ಟಿಯಲ್ಲಿ ಸೇರಿಸಲು ಸಾಧ್ಯವಾಗದೆ ಹೋಯಿತೆಂದರೆ, ಅದೆಷ್ಟು ಪಶ್ಚಾತ್ತಾಪಕರವಾದ ವಿಷಯ! ಈ ಸಂಸ್ಥೆಯು ಬಹಳ ವಿಚಕ್ಷಣೆಯಿಂದ ಕೆಲಸ ಕಾರ್ಯಗಳನ್ನು ಪ್ರಾರಂಭಮಾಡಬೇಕಾಗಿದೆ. ಈಗ ಈ

ಇಲಾಖೆ ಸ್ಥಾಪಿತವಾಗಿ ಇಲ್ಲಿಗೆ ಒಂದೂವರೆ ವರ್ಷದ ಮೇಲಾಯಿತು. ಆದರೆ ಇದ ಸಾಕಷ್ಟು ತೃಪ್ತಿಕರವಾಗಿ ಕೆಲಸಗಳನ್ನು ನಡೆಸಿಲ್ಲವೆಂದು ಹೇಳಬೇಕಾಗಿದೆ.

ಇನ್ನು ವೈದ್ಯ ಸಹಾಯದ ವಿಚಾರ. ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಗೊತ್ತಿರುವಂತೆ ಇಲ್ಲಿ ಶುಲ್ಕ ಹೆಚ್ಚಿಸಿದ್ದಾರೆ.

Mr. SPEAKER.—How much more time does the Hon'ble Member require ?

Sri S. GOPALA GOWDA.—Ten minutes.

Mr. SPEAKER.—The Hon'ble Member may continue after lunch. The House will now rise for lunch and meet again at 3-35.

The House adjourned at Ten Minutes past Three of the Clock and re-assembled at Thirty-five Minutes past Three of the Clock.

(Mr. Speaker in the Chair).

Sri S. GOPALA GOWDA.—Shall I continue, Sir ?

Mr. SPEAKER.—Yes.

ಶ್ರೀ ಎಸ್. ಗೋಪಾಲಗೌಡ.—ವೈದ್ಯ ಸೌಲಭ್ಯಗಳಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರು ಒಂದು ಆರ್ಡರನ್ನು ಹೊರಡಿಸಿದ್ದಾರೆ. ಇತ್ತೀಚೆಗೆ ಹೊಸದಾಗಿ ಕೆಲವು ತೆರಿಗೆಗಳನ್ನು ವಿಧಿಸಿದ್ದರು. ಅನಂತರ ಈ ಸಂಬಂಧವಾಗಿ ಅನೇಕ ಕಡೆಗಳಿಂದ, ಈ ತೆರಿಗೆ ನ್ಯಾಯವಾದುದಲ್ಲ, ಜನರಲ್ಲಿ ಈ ಹೊರೆಯನ್ನು ಹೊರಲು ಶಕ್ತಿಯಿಲ್ಲ ಎಂಬ ಕೂಗುಗಳೂ ಮತ್ತು ಕೆಲವು ದೂರುಗಳೂ ಬಂದುದರಿಂದ, ಆ ಆಜ್ಞೆಯನ್ನು ಈಗ ಒಂದು ರೀತಿಯಾಗಿ ಮಾರ್ಪಾಟು ಮಾಡಿದ್ದಾರೆ. ಈ ತಿಂಗಳ 18ನೆಯ ತಾರೀಖಿನಲ್ಲಿ ಒಂದು ಆರ್ಡರನ್ನು ಹೊರಡಿಸಿ ಆಸ್ಪತ್ರೆಯಲ್ಲಿರತಕ್ಕ ರೋಗಿಗಳಿಗೆ ಕೊಡತಕ್ಕ ಹಾಲು, ಮೊಟ್ಟೆ, ಬ್ರೆಡ್, ಇತ್ಯಾದಿ ಡಯಟ್‌ಗಳನ್ನು ಕಡಮೆ ಮಾಡಿದ್ದಾರೆ. ಹೀಗೆ ಒಂದು ಸುಧಾರಣೆಯನ್ನು ಜಾರಿಗೆ ತರುತ್ತಿದ್ದಾರೆಂಬ ವದಂತಿ ಕೇಳಿದ್ದೇನೆ. ಇದು ಆ ರೀತಿ ಆಗಿದ್ದರೆ ಇಂದಿನ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಗೆ ಇದು ನ್ಯಾಯವಾದುದೆಂದು ಪರಿಗಣಿಸುವುದಕ್ಕಾಗುವುದಿಲ್ಲ. ವೈದ್ಯ ಸಹಾಯ ಕೋರಿ ಬರತಕ್ಕ ಜನರಲ್ಲಿ ಅನೇಕರು ಬಡವರೇ ಇದ್ದಾರೆ. ಆಸ್ಪತ್ರೆಗೆ ಬರತಕ್ಕವರಲ್ಲಿ ಬಡರೋಗಿಗಳೇ ಹೆಚ್ಚಾಗಿರುತ್ತಾರೆ. ಶ್ರೀಮಂತರಿಗೆ ಈ ವೈದ್ಯ ಸೌಲಭ್ಯಗಳನ್ನು ಹೊಂದಲು ಬೇರೆ ಅನುಕೂಲಗಳಿರುತ್ತವೆ. ಆದಕಾರಣ ಮುಖ್ಯವಾಗಿ ಬಡವರಿಗೆ ವೈದ್ಯ ಸೌಕರ್ಯ ನೀಡತಕ್ಕದ್ದು ಸರ್ಕಾರದವರ ಆದ್ಯ ಕರ್ತವ್ಯ. ಇಲ್ಲಿಯ ತನಕ ಯಾವ ರೀತಿ ಈ ಬಡರೋಗಿಗಳಿಗೆ ವೈದ್ಯ ಸೌಲಭ್ಯಗಳು ದೊರೆಯುತ್ತಿದ್ದವೋ ಅದೇ ರೀತಿ ದೊರಕಿಸಿ ಕೊಡದೆ, ಹಣ ಕಾಸಿನ ಪರಿಸ್ಥಿತಿ ಹದಗೆಟ್ಟಿದೆಯೆಂದು, ಆ ಸೌಲಭ್ಯಗಳನ್ನು ನಿಲ್ಲಿಸುವುದಾದರೆ, ಬಡರೋಗಿಗಳಿಗೆ ತಾವು ತುಂಬ ತೊಂದರೆ ಕೊಟ್ಟ ಹಾಗೆ ಆಗುತ್ತದೆ. ಆದುದರಿಂದ ಸರ್ಕಾರದವರು ಅಂಥ ಒಂದು ಆರ್ಡರನ್ನು ಹೊರಡಿಸಿದ್ದರೆ ಅದನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ವೈದ್ಯಕೀಯ ಸಂಬಂಧವಾಗಿ ನಾನು ಸೂಚಿಸಬೇಕಾಗಿರುವುದೇನೆಂದರೆ—ತಾವು ನಮ್ಮ ಆಯುರ್ವೇದ ಮತ್ತು ಯುನಾನಿ ಬಾಬುಗಳಿಗೂ ಬೆಂಬಲ ಕೊಡಬೇಕಾದುದ ಅತ್ಯಗತ್ಯ ಎಂಬ ವಿಚಾರ. ತಾವು ಈಗ ನಡೆಸುತ್ತಿರುವ ಕಾಲೇಜುಗಳಲ್ಲೇ ಈ ಆಯುರ್ವೇದ ಬಾಬಿನ ಒಂದು ಭಾಗವನ್ನು ಪ್ರಾರಂಭ ಮಾಡಿದರೂ ಮಾಡಬಹುದು. ನಮ್ಮಲ್ಲಿ ಮೆಡಿಕಲ್ ಕಾಲೇಜು ಮತ್ತು ಮೆಡಿಕಲ್ ಸ್ಕೂಲು ಇವೆ. ಅಲ್ಲಿಗೆ ವಿದ್ಯಾಭ್ಯಾಸಕ್ಕಾಗಿ ಬರುವವರಿಗೆ ಈ ಬಾಬಿನಲ್ಲೂ ಚೆನ್ನಾಗಿ ತಿಳಿವಳಿಕೆಗಳನ್ನು ಕೊಟ್ಟು ಈ ಎರಡು ಬಾಬುಗಳಲ್ಲಿಯೂ ಅವರು ಅಭ್ಯಾಸ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟರೆ ಈ ಎರಡು ಬಾಬುಗಳಿಗೂ ತಾವು ಪ್ರೋತ್ಸಾಹನೀಡಿದ ಹಾಗಾಗುತ್ತದೆ. ಬಹಳ ಹಿಂದಿನಿಂದಲೂ, ನಮ್ಮ ಪುರಾತನ ಕಾಲದಿಂದಲೂ ಬಂದಿರತಕ್ಕಂಥ ಈ ವೈದ್ಯ ಕ್ರಮವನ್ನು ಮತ್ತೆ ರೂಢಿಸಿ, ಇದನ್ನು ಅಭಿವೃದ್ಧಿ ಪಡಿಸುವುದಕ್ಕೆ ಸರ್ಕಾರದವರು ಒಂದು ಪ್ರೋತ್ಸಾಹ ನೀಡದಹಾಗೆ ಆಗುತ್ತದೆ. ಈಗಾಗಲೇ ಒಂದು ಇಂಥ ಆಸ್ಪತ್ರೆ ಬೆಂಗಳೂರಿನಲ್ಲಿ ಸ್ವಲ್ಪ ಉತ್ತಮವಾಗಿ ಕೆಲಸ ಮಾಡುತ್ತಿದೆ. ಆದರ ಸರ್ಕಾರದವರು ಈ ಆಸ್ಪತ್ರೆಯ ವಿಚಾರದಲ್ಲಿ ಕ್ರೂತ್ತಿನ ಮಕ್ಕಳಿಗೆ ಅಥವಾ ಮಲತಾಯಿ ಮಕ್ಕಳಿಗೆ ತೋರಿಸತಕ್ಕಂಥ ಭಾವನೆಯನ್ನು ತೋರಿಸುತ್ತಿದ್ದಾರೆ. ಎಲ್ಲ ಆಸ್ಪತ್ರೆಗಳಿಗೂ ಕೊಡುವಂಥ ಸೌಲಭ್ಯಗಳನ್ನು ಇದಕ್ಕೂ ಕೊಡಬೇಕಾದದ್ದು ನ್ಯಾಯ. ಆದರೆ ಈ ಆಯುರ್ವೇದ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಾಕಷ್ಟು ಹಾಸಿಗೆಗಳಿಲ್ಲ. ಅಷ್ಟಿಷ್ಟು ಸಹಾಯ ಕೊಡುತ್ತಿದ್ದುದನ್ನು ಇತ್ತೀಚೆಗೆ ಖೋತಾಮಾಡಿರುವುದು ಒಂದು ದೊಡ್ಡ ಆಘಾತವಾದಂತೆ ಆಗಿರುತ್ತದೆ, ಇದನ್ನು ಉತ್ತಮಪಡಿಸುವುದಕ್ಕೆ ತಾವು ಮೊದಲು ಗಮನ ಕೊಡಬೇಕು. ಇದಕ್ಕೂ ಸಹ ತಾವು ಇಂಗ್ಲೀಷ್ ವೈದ್ಯಕೀಯ ಆಸ್ಪತ್ರೆಗಳಿಗೆ ಒದಗಿಸುವಂಥ ಸೌಲಭ್ಯಗಳೆಲ್ಲವನ್ನೂ ಒದಗಿಸಬೇಕು. ಇದರ ಅಡ್ಮಿನಿಸ್ಟ್ರೇಷನ್ನನ್ನು ಸರಿಪಡಿಸಬೇಕು. ಮಲೆನಾಡಿಗೆ ಹೆಚ್ಚಿನ ಸೌಕರ್ಯಗಳನ್ನು ನೀಡತಕ್ಕದ್ದು ಸರ್ಕಾರದವರ ಕರ್ತವ್ಯ. ಹಾಗೆ ಮಾಡದೆ ಬಿಟ್ಟಿರುವುದು ಅವರ ಕರ್ತವ್ಯ ಲೋಪಗಳಲ್ಲಿ ಒಂದಾಗಿದೆ. ಸಂಪತ್ತನ್ನೇನೋ ಪ್ರಕೃತಿ ಮಲೆನಾಡಿಗೆ ಕೊಟ್ಟದ್ದು ಸಹಜ. ಆದರೆ ಅಲ್ಲಿ ಜನರು ಜೀವಿಸುವುದೇ ಬಹಳ ಕಷ್ಟವಾಗಿದೆ. ಆ ಜೌಗು ಪ್ರದೇಶದಲ್ಲಿ, ಮಲೇರಿಯಾ ಹಾವಳಿ, ಅಸೀಮಿಕ್ ಎಂಬ ಒಂದು ಖಾಯಿಲೆ ಇತ್ಯಾದಿ ರೋಗಗಳಿಂದ ಜನರು ನರಳುತ್ತಲೇ ಇದ್ದಾರೆ. ಇತ್ತೀಚೆಗೆ ಈ ಖಾಯಿಲೆಗಳು ಜಾಸ್ತಿಯಾಗುತ್ತಿವೆ. ಅವರಿಗೆ ಈ ಬಗ್ಗೆ ವೈದ್ಯ ಸೌಕರ್ಯಗಳು ಇನ್ನೂ ಹೆಚ್ಚಿಗೆ ಬೇಕಾಗಿರುವುದರಿಂದ, ಅವುಗಳನ್ನು ಒದಗಿಸಿ ಕೊಡಬೇಕಾದುದು ಸರ್ಕಾರದವರ ಕರ್ತವ್ಯ. ಈ ವೈದ್ಯ ಸೌಲಭ್ಯಗಳನ್ನು ಕೇಳುವುದಕ್ಕೆ ಪ್ರಾರಂಭವಾಡಿ ಎಷ್ಟೋ ವರ್ಷಗಳಾಯಿತು. ಆದರೆ ಇತ್ತೀಚೆಗೆ ತಾವು ಡಿ.ಡಿ.ಟಿ. ಯನ್ನೇನೋ ಅಲ್ಲಲ್ಲೇ ಸ್ಪ್ರೇ ಮಾಡಿಸುತ್ತಿದ್ದೀರಿ. ಇದೊಂದು ಕಣ್ಣೊರೆಸತಕ್ಕ ವಿಧಾನ. ಈ ಡಿ.ಡಿ.ಟಿ. ಹೊಡೆಯುತಕ್ಕವರು ಒಂದು ತಿಂಗಳಲ್ಲಿ ಕೆಲವು ದಿವಸ ಬಂದು ಹೊಡೆದುಬಿಟ್ಟು ಹೊರಟುಹೋದರೆ ಪುನಃ ಅವರು ಒಂದು ವರ್ಷವಾದರೂ ವಾಪಸ್ಸು ಬರುವುದಿಲ್ಲ. ಈ ಹೆಲ್ತ್ ಯೂನಿಟ್‌ಗಳನ್ನು ಲೊಕೇಟ್‌ಮಾಡಿರತಕ್ಕದ್ದು ಸರಿಯಾಗಿಲ್ಲ. ಹೊಸ ಹೆಲ್ತ್

(ಶ್ರೀ ಎಸ್. ಗೋಪಾಲಗೌಡ.)

ಯೂನಿಟ್ಟುಗಳಿಗೆ ಸರ್ಕಾರದಲ್ಲಿ ಹಣವಿಲ್ಲ ಎಂದು ತಾವು ಹೇಳಬಹುದು. ಆದರೆ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ಇದರ ಅಗತ್ಯ ಹೆಚ್ಚಾಗಿದೆ. ಸಾಧ್ಯವಾದರೆ ತಾವು ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಆಸ್ಪತ್ರೆ ಕೊಡಬೇಕಾಗಿರುತ್ತದೆ. ಹಾಗೆ ಅದು ಸಾಧ್ಯವಾಗದಿರುವುದಕ್ಕಾಗಿ ತಾವು ರಸ್ತೆ ಸೌಕರ್ಯಗಳನ್ನಾದರೂ ಒದಗಿಸಿಕೊಟ್ಟು 2) ಮೈಲಿ ರೇಡಿಯಸ್ಸಿಗಾದರೂ ಒಂದು ಸೆರ್ಕಲ್ ಮಾಡಿ ಆ ಗ್ರಾಮಗಳಿಗೆ ಒಂದು well equipped ಆಸ್ಪತ್ರೆಯನ್ನು ಕೊಟ್ಟರೆ ಜನರಿಗೆ ಬಹಳ ಅನುಕೂಲಮಾಡಿದಂತಾಗುತ್ತದೆ. ತೀರ್ಥಹಳ್ಳಿಯಲ್ಲಿ ಒಂದು ಆಸ್ಪತ್ರೆ ಕಟ್ಟಿದೆ. ಮುಗಿದು ಅದನ್ನು ಇನ್ನೂ ಪ್ರಾರಂಭಿಸದಿರುವುದರಿಂದ ಅದು ಈಗ ಕತ್ತೆ ಕುದುರೆಗಳು ಮಲಗುವ ಒಂದು ಛತ್ರದೋಪಾದಿ ಆಗಿದೆ. ಆ ಕಟ್ಟಡಕ್ಕೆ ಹಾಕಿದ್ದ ಬೋಲ್ಟ್—ನಟ್‌ಗಳೂ ಸಹ ಕಳುವಾಗಿ ಹೋಗಿವೆ. ಆ ಕಂಟ್ರಾಕ್ಟರಿಗೆ ತಲೆನೋವು ಇನ್ನೂ ತಪ್ಪಿಲ್ಲ. ಮಾನ್ಯ ವೈದ್ಯ ಸಚಿವರು ಮೊನ್ನೆ ಅಲ್ಲಿಗೆ ಹೋಗಿದ್ದಾಗ ಆ ಆಸ್ಪತ್ರೆಯನ್ನು ಪ್ರಾರಂಭ ಮಾಡಲು ಸಹಸ್ರಾರು ರೂಪಾಯಿಗಳು ಬೇಕಾಗುತ್ತವೆ. ಆ ಹಣವನ್ನು ಯಾರಾದರೂ ಖಾಸಗೀ ಮುಖಂಡರು ವಹಿಸಿಕೊಳ್ಳಲು ಮುಂದೆ ಬಂದರೆ ಆಗ ನಾವು ಆಸ್ಪತ್ರೆಯನ್ನು ಪ್ರಾರಂಭಮಾಡಲು ಮುಂದೆ ಬರುತ್ತೇವೆಂದು ಒಂದು ವಾದವನ್ನು ನಮ್ಮ ಮುಂದಿಟ್ಟರು. ಆದರೆ ಸರ್ಕಾರದವರು ಇನ್ನೂ ಹೆಚ್ಚಿನ ಹಣವನ್ನು ಹಾಕಿ ಮಲೆನಾಡಿನ ಜನರಿಗೆ ಹೆಚ್ಚು ಹೆಚ್ಚು ವೈದ್ಯಸಹಾಯಗಳನ್ನು ನೀಡದೆ ಹೋದರೆ ತಾವು ಬೇರೆ ಎಷ್ಟು ಸೌಲಭ್ಯಗಳನ್ನು ಅಲ್ಲಿಗೆ ನೀಡಿದರೂ ಅವುಗಳಿಂದ ಅವರಿಗೆ ಉಪಯೋಗವಾಗುವುದಿಲ್ಲ ವೆಂದು ನಾನು ತಿಳಿಸುತ್ತೇನೆ.

ಇನ್ನು ಮಲೆನಾಡು ಅಭ್ಯುದಯದಬಗ್ಗೆ ಒಂದು ಸಮಿತಿಯನ್ನು ಮಾಡಿತ್ತು. ಆದರೆ ಆ ಸಮಿತಿಯವರು ಮಾಡಿದ್ದ ಸಲಹೆಗಳೆಲ್ಲವೂ ಈಗ ಹೊರಟುಹೋದವು. ಈಗ ಏನೋ ಒಂದು ಆಸೆ ಹುಟ್ಟಿಸುವಂತೆ ಒಂದು ಕೋಟಿ ರೂಪಾಯಿಗಳ ಖರ್ಚಿನಲ್ಲಿ ಒಂದು ಪಾಂಚವಾರ್ಷಿಕ ಯೋಜನೆಯನ್ನು ಅಲ್ಲಿ ಪ್ರಾರಂಭಿಸಲಿದ್ದಾರೆ. ಈ ಒಂದು ಕೋಟಿ ರೂಪಾಯಿಗಳನ್ನೂ ಕೂಡ ಯಾವ ರೀತಿ ಖರ್ಚುಮಾಡುತ್ತಾರೆಂಬುದು ತೀರ್ಮಾನವಾಗಿಲ್ಲ. ಅದನ್ನು ಮಾಡುವಾಗ ಮಲೆನಾಡಿನ ಪ್ರಾಂತ್ಯಗಳನ್ನು ಬೇರ್ಪಡಿಸಿ, ಅದನ್ನೇ ಒಂದು Zone ಮಾಡಿ, ಅಲ್ಲಿ ಎಷ್ಟರಮಟ್ಟಿನ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಬೇಕೆಂಬುದನ್ನು ಪೂರ್ವಭಾವಿಯಾಗಿ ಪರಿಶೀಲನೆಮಾಡಿ. ಆ ಬಗ್ಗೆ ಆದಷ್ಟು ಜಾಗ್ರತೆ ಒಂದು ಯೋಜನೆಯನ್ನು ಕಾರ್ಯಗತಮಾಡುವುದರಿಂದ ಮಲೆನಾಡಿಗೆ ಒಳ್ಳೆಯದಾಗುವುದು. ಮಲೆನಾಡು ಅಭಿವೃದ್ಧಿಯಾದರೆ ಸುತ್ತಮುತ್ತಲ ಪ್ರದೇಶಗಳು ಅಭಿವೃದ್ಧಿಯಾಗುತ್ತವೆ. ಮತ್ತು ಮೈಸೂರು ಸಂಸ್ಥಾನದ ಆದಾಯ ಕೂಡ ಹೆಚ್ಚುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

'ರೆವೆನ್ಯೂ ಇಲ್ಲ, ಆದಾಯ ಕಡಮೆ, ರಚನಾತ್ಮಕ ಸಲಹೆಗಳನ್ನು ಒಬ್ಬರೂ ಕೊಡುತ್ತಿಲ್ಲ, ಎಂದು ಸರ್ಕಾರದವರು ಅಪಾದನೆಯನ್ನು ಮಾಡುತ್ತಲಿದ್ದಾರೆ. ನಾವು ರಚನಾತ್ಮಕ ಸಲಹೆಗಳನ್ನು ಎಷ್ಟೋಸಲ ಕೊಡುತ್ತೇವೆ. ನಾವು ಮಾತನಾಡುವುದೆಲ್ಲವೂ ರಚನಾತ್ಮಕವಾಗಿಯೇ ಇರುತ್ತವೆ. ಬಹಶಃ ಅವರ ಭಾವನೆಯಲ್ಲಿ 'ರಚನಾತ್ಮಕ' ಎಂದರೆ ಹಣದ ರೂಪದಲ್ಲಿ ಕೊಡುವುದಿಲ್ಲವಲ್ಲಾ ಎಂದು ತಿಳಿದುಕೊಂಡಿರಬಹುದು. ಹಾಗೆ ಹಣದ ರೂಪದಲ್ಲಿ ಕೊಡುವುದಕ್ಕೆ ನಮಗೆ ಚೈತನ್ಯವಿಲ್ಲ. ಆದರೆ ನಮ್ಮ ಸಲಹೆಗಳನ್ನು ಅನುಷ್ಠಾನಕ್ಕೆತಂದರೆ ನೀವು ಹಣ ಖರ್ಚು ಮಾಡುವುದನ್ನು ಎಷ್ಟೋ ಮಟ್ಟಿಗೆ ನಿಲ್ಲಿಸುವುದಲ್ಲದೆ, ಜನರಿಗೂ ಹೆಚ್ಚಿನ ಪ್ರಯೋಜನ ತಂದು ಕೊಡಬಹುದು ಎಷ್ಟೋ ಸಂಪತ್ತು ದೇಶದಲ್ಲಿದೆ. ರಾಜಮಹಾರಾಜರುಗಳಿಗೆ ಕೊಡತಕ್ಕ ಎಷ್ಟೋ ಹಣವನ್ನು ನಿಲ್ಲಿಸುವುದಕ್ಕಾಗುವುದಿಲ್ಲವೇ? ಇವುಗಳನ್ನು ಮಾಡದೆ, ನಿಮ್ಮ ಪಾಂಚವಾರ್ಷಿಕ ಯೋಜನೆ ಫಲಕಾರಿ ಯಾಗುವುದಿಲ್ಲ. ರಾಜಮಹಾರಾಜರುಗಳ ಪ್ರಿವಿ ಪರ್ಸ್‌ಗಳನ್ನು ತೊಡೆದು ಹಾಕಬೇಕಾಗುತ್ತದೆ. ಇಲ್ಲದಿದ್ದರೆ ಪ್ರಜಾಪ್ರಭುತ್ವವೆಂಬುದು ಕೇವಲ ಒಂದು ಥಳಕಾಗಿರುತ್ತದೆ, ಅಷ್ಟೆ. ಇದೇ ರೀತಿ ನಾನಾವಿಧದಲ್ಲಿ ಸಂಪತ್ತಿರುವುದನ್ನು ತಮಗೆ ತೋರಿಸಬಲ್ಲೆವು. ಭೂಮಿ ರೂಪದಲ್ಲಿ, ಬಿಸಿನೆಸ್ ರೂಪದಲ್ಲಿ ಎಷ್ಟೋ ಸಂಪತ್ತಿದೆ. ತಾವು ಹೇಳಬಹುದು, 'ಈ ಪ್ರಶ್ನೆಗಳೆಲ್ಲಾ ಕೇಂದ್ರಕ್ಕೆ ಸಂಬಂಧಪಟ್ಟಿವೆ ನಾವೇನು ಮಾಡುವುದು, ಎಂದು. ಈ ಬಗ್ಗೆ ಎಲ್ಲಾ ಪ್ರಾಂತೀಯ ಸರ್ಕಾರಗಳೂ ಒಂದು ತೀರ್ಮಾನಕ್ಕೆ ಬಂದು ಹೆಜ್ಜೆ ಇಡಬೇಕು ಅಂದರೆ ಕೇಂದ್ರ ಅದಕ್ಕೆ ವಿರೋಧವಾಗಿ ಹೋಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಆದ್ದರಿಂದ ಹೆಚ್ಚು ಹೆಚ್ಚಾಗಿ ಎಲ್ಲಿಂದ ಉತ್ಪತ್ತಿಬರಮಾಡಿಕೊಳ್ಳಬೇಕೆಂಬುದನ್ನು ನೀವು ನೋಡಬೇಕು. ಅದು ಬಿಟ್ಟು, ಮಾತನಾಡಿದರೆ ಟ್ಯಾಕ್ಸೇಷನ್‌ಬಿಲ್ಲುಗಳನ್ನು ತಂದು 'ಶ್ರೀಮಂತರ ಮೇಲೆ ಬೀಳುತ್ತದೆ ನೀವು ವಿರೋಧ ಮಾಡಬೇಡಿ' ಎಂದು ಹೇಳಿದರೆ ಏನು ಪಯೋಜನ? ಶ್ರೀಮಂತರೇ ಆಗಲಿ, ಅವರಿಂದ ಪೂರ್ತಿ ತೆರಿಗೆ ತೆಗೆದುಕೊಂಡಿದ್ದಾರೆಯೇ ಅಥವಾ ಬಿಟ್ಟಿದ್ದಾರೆಯೇ ಎಂಬುದು ಗೊತ್ತಾಗುತ್ತದೆಯೇ? ಆದ್ದರಿಂದ, ಈ ರೀತಿಯಾದ ಯೋಜನೆಗಳಿಂದ ತಮ್ಮ ಬೊಕ್ಕಸ ತುಂಬುವುದಿಲ್ಲ. ನಮಗೆ ಆಗಬೇಕಾದ ಅಭಿವೃದ್ಧಿಯೋಜನೆಗಳಿಗೆ ಇಂಥ taxation measures ನಿಂದ ಹಣ ಒದಗಿಸುವುದಕ್ಕಾಗುವುದಿಲ್ಲ.

ಇನ್ನು ಪೋಲೀಸ್ ಇಲಾಖೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮಲ್ಲಿ ಇವೊತ್ತು ಪೋಲೀಸ್ ನೌಕರರು ಬಹಳ ಕಡಿಮೆ ಸಂಬಳವನ್ನು ಪಡೆಯತಕ್ಕವರಾಗಿದ್ದಾರೆ. ತೋಟಿ ತಳವಾರರಿಂದ ಹಿಡಿದು ಮುಖ್ಯ ಮಂತ್ರಿಗಳು ಮತ್ತು ರಾಷ್ಟ್ರಪತಿಗಳ ತನಕ ನಮ್ಮದೇಶದಲ್ಲಿ ಈ ಒಂದು ಆಡಳಿತ ಯಂತ್ರ ರಚಿತವಾಗಿದೆ. ಎಷ್ಟರಮಟ್ಟಿಗೆ ಅವರಲ್ಲಿ ಒಬ್ಬರಿಗೊಬ್ಬರಿಗೆ ಅಂತರವಿದೆಯೆಂಬುದನ್ನು ನಾನು ಹೇಳಬೇಕಾಗಿಲ್ಲ. ಪೋಲೀಸ್ ದಳದಲ್ಲಿ, ಪೋಲೀಸ್ ಸಣ್ಣ ಅಧಿಕಾರಿಗಳಲ್ಲಿ ಎಷ್ಟರಮಟ್ಟಿನ ದಕ್ಷತೆಯಿರಬೇಕೋ ಅಷ್ಟರಮಟ್ಟಿನ ದಕ್ಷತೆ ಕಂಡುಬರುತ್ತಿಲ್ಲ. ಅಂದಮಾತ್ರಕ್ಕೆ ಪೋಲೀಸ್ ಇಲಾಖೆಯಲ್ಲಿ ದಕ್ಷರಾದ ನೀತಿವಂತರಾದ ಜನ ಇವೊತ್ತು ಪೋಲೀಸ್ ಇಲಾಖೆಯಲ್ಲಿ ಯಾರೂ ಇಲ್ಲವೆಂದು ಹೇಳುವುದಿಲ್ಲ. ಆದರೆ ನಾವು ನಿರೀಕ್ಷಿಸುವಷ್ಟು ಪ್ರಮಾಣದಲ್ಲಿ ಕಂಡುಬರುವುದಿಲ್ಲವೆಂದು ಹೇಳಬಲ್ಲೆ. ಕಂಟ್ರೋಲ್, ಪ್ರೊಹಿಬಿಷನ್-ಇಂಥ ಕಾನೂನುಗಳಿಂದ ಎಷ್ಟೋ ಸಲ ಅವರುಗಳು ಹಾದಿ ತಪ್ಪಿಹೋಗುವ ಸಂದರ್ಭಗಳಿವೆ. ನಾನೇ ಎಷ್ಟೋ ಸಲನೋಡಿದ್ದೇನೆ, ಬಸ್ಸು, ಲಾರಿಗಳವರು ಪ್ರತಿಯೊಂದು ಸ್ಟೇಷನ್‌ಬಳಿಯೂ ನಿಲ್ಲಿಸಿ ಅಲ್ಲಿನ ಕಾನ್‌ಸ್ಟೇಬಲ್ಲಿಗೆ ನಾಲ್ಕಾಣೆ ಕೊಟ್ಟುಕೊಂಡು ಹೋಗುವುದನ್ನು. ಏಕೆಕೊಡುತ್ತಾರೆಂದು ನೀವು ಕೇಳಬಹುದು. ಕಾನೂನುಗಳಲ್ಲಿ ಅನೇಕ ಲೋಪದೋಷಗಳಿರುತ್ತವೆ. ಜೊತೆಗೆ ಅವರುಗಳ ಆರ್ಥಿಕ ಸ್ಥಿತಿಯೂ ಹಾಗಿರುತ್ತದೆ. ಹತ್ತು ಹನ್ನೆರಡು ಘಂಟೆಗಳ ಕಾಲ ಕಾಲಿಗೆ ಬಟ್ಟೆಸುತ್ತಿಕೊಂಡು ಬಿಸಿಲಿನಲ್ಲಿ ಅವನು ನಿಂತಿರುತ್ತಾನೆ. ದಿನವೆಲ್ಲಾ ಸರ್ಕಾರಿ ಕೆಲಸ

ದಲ್ಲಿದ್ದರೂ ಬರುವ ಹಣ ಅವನ ಜೀವನಕ್ಕೆ ಸಾಲದು. ಅವನಿಗೂ ಸಂಸಾರದ ಕಷ್ಟನಷ್ಟ ತುಂಬಿ ಹೋಗಿರುತ್ತದೆ. ಜೀವನ ಜರುಗಿಸುವುದೇ ದುರ್ಭರವಾಗಿರುವಾಗ ಅವರ ಆದಾಯ ಮಾತ್ರ ಮೊದಲಿನಷ್ಟೇ ಇರುವುದೆಂದರೆ ಅವರಲ್ಲಿ ತರ್ಕಬದ್ಧವಾದ ನ್ಯಾಯವಿಲ್ಲ. ಇದನ್ನೆಲ್ಲಾ ತಿಳಿದೂ ಸರ್ಕಾರ ಏನೋ ಮಾಡಿಕೊಂಡು ಹೋಗಲಿ ಎಂದು ಕಣ್ಣು ಮುಚ್ಚಿ ಕೊಂಡು ಸುಮ್ಮನಿದೆ ಇವರಂತೆಯೇ ಇತರ ಎಲ್ಲಾ ನಾನ್‌ಗೆಜೆಟೆಡ್ ನೌಕರರ ವಿಚಾರವೂ. ಎಲ್ಲಾ ಗೆಜೆಟೆಡ್ ಆಫೀಸರುಗಳನ್ನೂ ತೆಗೆದು ಹಾಕಿ ಅವರಿಗೆ ಬರುತ್ತಿರುವ ಸಂಬಳವನ್ನು ಈ ನೌಕರರಿಗೆ ಹಂಚಿ ಬಿಟ್ಟರೂ ಒಬ್ಬೊಬ್ಬರಿಗೂ ಐದಾರು ರೂಪಾಯಿಗಳು ಕೂಡ ಬರುವುದಿಲ್ಲ ಎಂದು ಮೊನ್ನೆ ಮಾನ್ಯ ರೆವಿನ್ಯೂ ಸಚಿವರು ಒಂದು ವಿಚಿತ್ರ ವಾದವನ್ನಿಟ್ಟರು. ಅಂದ ಮೇಲೆ ಈ ಯಂತ್ರವನ್ನು ಯಾವ ರೀತಿ ಸರಿಪಡಿಸುವುದು, ಈ ರೀತಿಯ ಅನ್ಯಾಯಗಳನ್ನು ಕೊನೆಗೊಳಿಸುವುದಕ್ಕೆ ಸಾಧ್ಯವೇ ಎಂಬುದನ್ನಾದರೂ ಯೋಚನೆಮಾಡಬೇಡವೇ? ಬೇರೆ ಬಾಬುಗಳಿಗೆ ಹಾಕುವ ಹಣವನ್ನಾದರೂ ಕಡಮೆಮಾಡಿ, ಇವರುಗಳ ಸಂಖ್ಯೆಯನ್ನಾದರೂ ಕಡಮೆ ಮಾಡಿ, ಉಳಿದವರಿಗಾದರೂ ಹೆಚ್ಚಿಗೆ ಸಂಬಳಕೊಟ್ಟು ಅವರಲ್ಲಿ ದಕ್ಷತೆ, ನೀತಿ ಇರುವಂತೆ ಪ್ರಯತ್ನಮಾಡಬೇಡವೇ? ಈ ಅತಾರಾ ಕಛೇರಿಯನ್ನೇ ತೆಗೆದುಕೊಂಡರೆ, ಈ ಸಾವಿರಾರು Pigeon Holes ನಲ್ಲಿ ಸೇರಿಕೊಂಡು ನರಳುತ್ತಿರುವ ವ್ಯಕ್ತಿಗಳನ್ನು ನೋಡಿದರೆ ನಮ್ಮ ಮನ ಕರಗುತ್ತದೆ! ಕೆಲವು ನೌಕರರು ಮಂತ್ರಿಗಳು ಹೊರಟರೆಂದರೆ ಎದ್ದು ಬಿದ್ದು ಬಳುಕುತ್ತಾ ಬೆಳ್ಳಿಕೋಲು ಹಿಡಿದುಕೊಂಡು ಮೂಗು ಪ್ರಾಣಿಗಳಂತೆ ಹೋಗುತ್ತಿರುತ್ತಾರೆ. ಬರುವ ಅಲ್ಪಸ್ವಲ್ಪ ಹಣದಿಂದ ಹತ್ತಾರು ವರ್ಷಗಳಿಂದ ನೋವು ಬಾಳಿನ ಒಂದು ನರಕದಲ್ಲಿ ಬಿದ್ದು ಒದ್ದಾಡುತ್ತಿರುವುದನ್ನು ಕಾಣಬಹುದು. ಇಂಥಾ ಒಂದು ಪರಿಸ್ಥಿತಿಯಲ್ಲಿ ನೀವು ಎಷ್ಟೇ ಉತ್ಸಾಹ ಶಾಲಿಗಳೇ ಆಗಿರಲಿ ತಮಗೆ ಎಂಥದೇ ರಾಷ್ಟ್ರ ನಿರ್ಮಾಣಮಾಡಬೇಕೆಂಬ ಉಜ್ವಲಾಕಾಂಕ್ಷೆಯಿರಲಿ, ಅದು ಸಾರ್ಥಕವಾಗುತ್ತದೆಯೇ ಎಂಬುದನ್ನು ತಾವು ಯೋಚನೆಮಾಡಬೇಕು. ಈ ಬಡ ನೌಕರರ ವರ್ಗವೇನಿದೆಯೋ ಅದಕ್ಕೇನಾದರೂ ಪರಿಹಾರ ಕಲ್ಪಿಸಿಕೊಡಲೇ ಬೇಕು. ಅವರಿಗೆ ಹೆಚ್ಚಿನ ಸೌಲಭ್ಯಗಳನ್ನು ಸಂಬಳ ರೂಪದಲ್ಲಿ ಆಗದಿದ್ದರೂ ಬೇರೆ ರೂಪದಲ್ಲಿ—ಅಕ್ಕಿ, ರಾಗಿ ಕಡಮೆ ದರದಲ್ಲಿ ಕೊಟ್ಟೋ, ವಿದ್ಯಾಭ್ಯಾಸ ವೈದ್ಯಕೀಯ ಸಹಾಯಗಳನ್ನು ಉಚಿತವಾಗಿ ಮಾಡಿಯೋ ಸಹಾಯ ಮಾಡುವುದಕ್ಕಾಗುವುದಿಲ್ಲವೇ! ಅವರೆಲ್ಲರಿಗೂ ಸಾವಿರಾರು ರೂಪಾಯಿಗಳ ಸಂಬಳವನ್ನೇ ಕೊಡಬೇಕೆಂದು ನಾನೇನೂ ಹೇಳುವುದಿಲ್ಲ. ಹಿಂದೆ ಮಹಾತ್ಮಗಾಂಧಿಯವರು ಲಿನ್‌ಲಿತ್‌ಗೋರವರಿಗೆ ಬರೆದ ಪತ್ರದಲ್ಲಿ ಅವರನ್ನು ದ್ದೇಶಿಸಿ 'ಏನು ಸ್ವಾಮಿ, ತಾವು ಇಷ್ಟೊಂದು ಸಂಬಳ ತೆಗೆದುಕೊಳ್ಳುತ್ತಿದ್ದೀರಲ್ಲ, ಇಂಡಿಯಾ ದೇಶದಲ್ಲಿ ಸಾಮಾನ್ಯ ಮನುಷ್ಯನ ದುಡಿಮೆ ಒಂದು ರೂಪಾಯಿ ಇರುವಾಗ 10,000 ರೂಪಾಯಿಗಳನ್ನು ನೀವು ತೆಗೆದುಕೊಳ್ಳುತ್ತಿದ್ದೀರಲ್ಲ, ಎಂದು ಆಶ್ಚರ್ಯವನ್ನು ವ್ಯಕ್ತ ಪಡಿಸಿದರು. ಇವೊತ್ತಿನ ದಿವಸ ನಮ್ಮ ಸಂಸ್ಥಾನದಲ್ಲಿ ಕೇವಲ 15 ರೂಪಾಯಿ 20 ರೂಪಾಯಿ ತೆಗೆದುಕೊಳ್ಳುವವರೂ ಇದ್ದಾರೆ. ಒಂದು ಕಡೆ ಇಷ್ಟು ಕಮ್ಮಿ ಸಂಬಳ, ಇನ್ನೊಂದು ಕಡೆ ಸಾವಿರಾರು ರೂಪಾಯಿಗಳ ಸಂಬಳ, ಇಷ್ಟೊಂದು ಅಂತರ ಇಟ್ಟುಕೊಂಡು ನೀತಿಬೋಧೆ ಮಾಡುತ್ತೀರಿ. ಏನೂ ಇಲ್ಲದವನಿಗೆ ದೇಶಕ್ಕಾಗಿ ದುಡಿಯಿರೆಂದು ಹೇಳುತ್ತೀರಿ. ಇದೊಂದು ಕೇವಲ ವಿಪರ್ಯಾಸ. ಅವನನ್ನು ಹಾಸ್ಯಮಾಡುವ ಕೆಲಸ ಇದು. ನಿಜವಾಗಿಯೂ ಆ ಕೆಲಸವನ್ನು ಅವನು ಮಾಡಲು ಸಾಧ್ಯವಿಲ್ಲ. ಪರಿಸ್ಥಿತಿ ಉತ್ತಮಗೊಂಡ ಹೊರತು ಅವನು ಉತ್ತಮಗೊಳ್ಳುವುದಿಲ್ಲ. ದೇಶ, ರಾಷ್ಟ್ರ ಎಂಬ ದೊಡ್ಡಮಾತುಗಳೆಲ್ಲ ಮಾತಾಗಿಯೇ ಉಳಿಯುತ್ತವೆಯೇ ಹೊರತು ಕಾರ್ಯದಲ್ಲಿ ಸಫಲವಾಗುತ್ತವೆಯೇ? ಆದ್ದರಿಂದ ಇಂಥ ಪ್ರಶ್ನೆಗಳನ್ನು ಮೂಲಭೂತವಾಗಿ ನೋಡಬೇಕು. ಈ ದೃಷ್ಟಿಯಿಂದ ಮಾಡದೆ ಹೋದರೆ ತಾವು ಹೇಳುವುದೆಲ್ಲಾ ಮಾತಾಗಿಯೇ ಉಳಿಯುತ್ತವೆಂದು ನಾನು ಹೇಳುತ್ತೇನೆ.

ಇವೊತ್ತು ಇನ್ನೊಂದು ಸಮಾಚಾರವನ್ನೂ ಕೇಳುತ್ತಿದ್ದೇವೆ. ಇದುವರೆಗೂ ನಮ್ಮಲ್ಲಿದ್ದ ಇನ್ಷೂರೆನ್ಸ್ ಇಲಾಖೆ ಕೂಡ ಕೇಂದ್ರಕ್ಕೆ ಹೋಗುತ್ತದೆಂದು. ನಿಜವಾದ ವ್ಯವಹಾರ ಏನೆಂಬುದು ನಮಗೆ ಗೊತ್ತಿಲ್ಲ. ಈ ವರೆಗೂ ನಮ್ಮ ಮೈಸೂರು ಸಂಸ್ಥಾನ ತನ್ನದೇ ಆದ ಒಂದು ಇನ್ಷೂರೆನ್ಸ್ ಕಂಪೆನಿಯನ್ನಿಟ್ಟುಕೊಂಡಿತ್ತು. ಇದನ್ನು ಯಾವ ರೀತಿಯಲ್ಲಾದರೂ ವಹಿಸಿಕೊಟ್ಟಲ್ಲಿ ನಮ್ಮ ಸಂಸ್ಥಾನಕ್ಕೆ ಏನೇನು ಸೌಲಭ್ಯಗಳಿರಬೇಕೆಂಬುದನ್ನು ಕೂಲಂಕಷವಾಗಿ ವಿಚಾರಮಾಡಿ ಸೂಕ್ತ ಕಾರ್ಯಕ್ರಮವನ್ನು ಅನುಸರಿಸುತ್ತಾರೆಂದು ನಂಬಿದ್ದೇನೆ.

ಮೊನ್ನೆ, ರಾಷ್ಟ್ರೀಕರಣದ ಪ್ರಶ್ನೆ ಬಂದಾಗ ಮೈಸೂರು ದೇಶದಲ್ಲಿ ಅನೇಕ ಕಂಪೆನಿಗಳೂ, ಅನೇಕ ಜಾಯಿಂಟ್ ಸ್ಟಾಕ್ ಕಂಪೆನಿಗಳೂ ಸರ್ಕಾರದಿಂದ ಪೋಷಿತವಾಗಿ ನಡೆಯುತ್ತವೆಯೆಂದು ಹೇಳಿದರು. ಇನ್ನೊಂದು ಒಳ್ಳೆಯ ಚಿಹ್ನೆ ಬೇರೆ ಪ್ರಾಂತ್ಯಗಳಿಗಿಂತ ಮೈಸೂರು ದೇಶ ಮುಂದುವರಿದಿರಬಹುದು. ರೋಡ್ ಟ್ರಾನ್ಸ್‌ಪೋರ್ಟ್, ಭದ್ರಾವತಿ ಕಬ್ಬಿಣದ ಕಾರ್ಖಾನೆ ಮುಂತಾದ ಅನೇಕ ಕಾರ್ಖಾನೆಗಳು ಚೆನ್ನಾಗಿ ನಡೆಯುತ್ತಿವೆಯೇ? ಖಾಸಗೀ ಕೈಗಾರಿಕೆಗಳ ಉದ್ಯಮಗಳಲ್ಲಿ ಇತ್ತೀಚೆಗೆ slump ಬಂದಿದೆ. ಉತ್ಪತ್ತಿಯಾದ ಸಾಮಾನುಗಳು ಲಾಭದಾಯಕವಾಗಿ ಖರ್ಚಾಗುತ್ತಿಲ್ಲ. ಅಲ್ಲಲ್ಲಿ ಮಿಲ್ಲುಗಳನ್ನು ಮುಚ್ಚುತ್ತಿರುವ ಸೂಚನೆಗಳು ಕಂಡುಬರುತ್ತಿವೆ. ಕೆಲವನ್ನು ಆಗಲೇ ಮುಚ್ಚಿಯೂ ಇದ್ದಾರೆ. ಈಸಂದರ್ಭದಲ್ಲಿ ಸರ್ಕಾರದವರು ಕಾರ್ಮಿಕರ ದೃಷ್ಟಿಯಿಂದ, ದೇಶದ ಜನತೆಗೆ ಉದ್ಯೋಗವನ್ನೊದಗಿಸುವ ದೃಷ್ಟಿಯಿಂದ ಒಂದು ಯೋಚನೆ ಮಾಡಬೇಕು. ಇಂಥ ಮಿಲ್ಲುಗಳನ್ನು ಮುಚ್ಚುವ ಸಂದರ್ಭವೇನಾದರೂ ಬಂದರೆ ಆ ಮಿಲ್ಲುಗಳನ್ನು ಸರ್ಕಾರದವರೇ ನೇರವಾಗಿ ತೆಗೆದುಕೊಂಡು ನಡೆಸತಕ್ಕ ಏರ್ಪಾಡು ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಈಗಿರತಕ್ಕ ಕಾರ್ಮಿಕರ ಪರಿಸ್ಥಿತಿಯೇನಿದೆಯೋ ಅದನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನಮಾಡಬೇಕು. ನೀವೀಗ ಪ್ರಯತ್ನ ಮಾಡುತ್ತಿಲ್ಲವೆಂದು ಹೇಳುಯುತ್ತಿಲ್ಲ. ಆ ದಿಕ್ಕಿನಲ್ಲಿ ಎಷ್ಟೋಮಟ್ಟಿಗೆ ಪ್ರಯತ್ನಗಳು ನಡೆತ್ತಿವೆ. ಇದಕ್ಕೊಂದು ಇಲಾಖೆ ಕೂಡ ಇದೆ. ಆದರೂ ಕೂಡ ಕೆಲವು ಕಡೆಗಳಲ್ಲಿ ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕಿರುವ ಅದರಲ್ಲೂ ಯಾವ ರೀತಿಯನ್ನೂ ಅನುಸರಿಸದೆ ತೆಗೆದು ಹಾಕಿರುವ ನಿದರ್ಶನಗಳೂ ಇವೆ. ಕೆಲವು ವೇಳೆ ದಕ್ಷತೆಯನ್ನೂ ಗಣನೆಗೆತೆಗೆದುಕೊಳ್ಳದೆ, ಉದ್ಯಮದಲ್ಲಿ ತೊಡಕನ್ನುಂಟು ಮಾಡುತ್ತಿದ್ದಂತಹ ಕೆಲವು ವ್ಯಕ್ತಿಗಳನ್ನು ತೆಗೆಯಬೇಕೆಂಬ ದೃಷ್ಟಿಯಿಂದ ತೆಗೆದಿರುವ ಸಂದರ್ಭಗಳೂ ಉಂಟು ಈಗಲೂ ಸರ್ಕಾರದವರು ಆ ಮನುಷ್ಯನ ದುಡಿಮೆಯ ದೃಷ್ಟಿಯಿಂದ ಇಂಥ ವಿಷಯಗಳಲ್ಲಿ ಸ್ವಲ್ಪ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆಂದು ಹೇಳಬಯಸುತ್ತೇನೆ.

ಸಹಕಾರ ಸಂಸ್ಥೆಗಳು ಅನೇಕವು ಈಗ ನಮ್ಮ ಸಂಸ್ಥಾನದಲ್ಲಿ ಕೆಲಸಮಾಡುತ್ತಿವೆ. ಸಹಕಾರ ಸಂಸ್ಥೆ

(ಶ್ರೀ ಎಸ್. ಗೋಪಾಲಗೌಡ.)

ಗಳ ಬಗ್ಗೆ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಇಷ್ಟು ಹೇಳಿದರೆ ಸಾಕು. ಇದರಲ್ಲಿ ಹೆಚ್ಚಿನ ಕೆಲಸ ಇನ್ನೂ ನಡೆಯಬೇಕಾಗಿದೆ. ಒಂದು ಪ್ರಯತ್ನ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಎಂಬ ಹೆಸರಿನಲ್ಲಿ ಈಗ ನಡೆಧಿದೆ. ಆದರೆ ಇವೊತ್ತು ಮೊದಲಿನಷ್ಟು ಭರದಲ್ಲಿ ಕೆಲಸ ಮಾಡದೆ ಅಲ್ಲೇ ಸ್ಥಗಿತವಾಗಿ ನಿಂತಿದೆ. ಎಷ್ಟೋ ಕಡೆ ಲೆಕ್ಕಪತ್ರಗಳೇ ಆಡಿಟ್ ಆಗದೆ misappropration ಆಗಿರುವ ಸಂದರ್ಭಗಳೂ ಇವೆ. ಈಗ ಸಾಮಾನ್ಯವಾಗಿ ಈ ಕೋ-ಆಪರೇಟಿವ್ ಸಂಸ್ಥೆಗಳಲ್ಲಿ ಏನಾಗಿದೆಯೆಂದರೆ ಆ ಊರಿನ ವ್ಯಾಪಾರಗಾರರೇ ಮೊದಲು ಸಹಕಾರ ಕೊಡುವ ರೀತಿಯಲ್ಲಿ ಮುಂದೆ ಬಂದು, ಆ ಮೇಲೆ ಕ್ರಮೇಣ ಆ ವ್ಯಾಪಾರಗಾರರು ತಮ್ಮ ತಮ್ಮ ಅಂಗಡಿಗಳಲ್ಲಿ ಯಾವಯಾವ ಸಾಮಾನುಗಳಿಲ್ಲವೋ ಅವುಗಳನ್ನು ಮಾತ್ರ ಈ ಸೊಸೈಟಿಗಳಿಗೆ ತರಿಸಿಮಾರಾಟಮಾಡುವ ಹಾಗೆ ಮಾಡಿದ್ದಾರೆ. ಉದಾಹರಣೆಗೆ ಕಾಫೀಬೀಜ ಸಾಮಾನ್ಯವಾಗಿ ಸಿಕ್ಕುವುದಿಲ್ಲ. ಅದನ್ನು ಮಾತ್ರ ತರಿಸಿ, ಸೀಮೆ ಎಣ್ಣೆ ಸಿಕ್ಕುವುದಿಲ್ಲ ಅದನ್ನು ಮಾತ್ರ ತರಿಸಿ, ಗೋಧಿ ತರಿಸಿ-ಎಂದು ಹೇಳುತ್ತಾ ಒಂದು ರೀತಿಯಲ್ಲಿ show ಮಾಡಿಕೊಂಡು, ಸಿಬ್ಬಂದಿ ಲೆಕ್ಕ ಇಟ್ಟುಕೊಂಡಿದ್ದಾರೆಯೇ ಹೊರತು ಸರಿಯಾಗಿ ಕೆಲಸನಡೆಸುತ್ತಿಲ್ಲ. ಆದ್ದರಿಂದ ದಳ್ಳಾಳಿಗಳನ್ನು ಕ್ರಮವಾಗಿ ಮೂಲೋತ್ಪಾಟನಮಾಡಲು, ಮಾರಾಟ ಮಾಡುವ ರೈತರೇ ಆಗಲಿ, ಕೊಳ್ಳುವವರೇ ಆಗಲಿ ನೇರವಾಗಿ ಈ ಸಹಕಾರ ಸಂಸ್ಥೆಗಳ ಮೂಲಕ ವ್ಯಾಪಾರ ವ್ಯವಹಾರ ನಡೆಸುವಂತೆ ಏರ್ಪಾಡುಮಾಡಬೇಕೆಂದು ಹೇಳುತ್ತೇನೆ. ಆದಿಕ್ಕಿನಲ್ಲಿ ಜನತೆ ಅಷ್ಟು ಉತ್ಸಾಹದಿಂದ ಕೆಲಸ ನಡೆಸಿಕೊಂಡು ಬರುತ್ತಿಲ್ಲ. ಆದ್ದರಿಂದ ಇವೊತ್ತಿನ ದಿವಸ ಈ ಮಲ್ಟಿಪರ್ಪಸ್ ಸೊಸೈಟಿಗಳು ಮೂಲೆಗೆ ಬೀಳುವಂತಿದ್ದರೂ ಅವುಗಳನ್ನು ಕೈಬಿಡದೆ ನಡೆಸಿಕೊಂಡು ಬರುವುದಲ್ಲದೆ ಅವುಗಳನ್ನೂ ಜೀವಂತವಾಗಿಮಾಡುವುದಕ್ಕೆ ಅಲ್ಲಿರುವ ದಳ್ಳಾಳಿಗಳನ್ನೂ ಮತ್ತು ವ್ಯಾಪಾರಸ್ಥರನ್ನೂ ಮೂಲೋತ್ಪಾಟನಮಾಡಿ, ಅವು ಹಳ್ಳಿಗಳಲ್ಲೂ ಮತ್ತು ಪಟ್ಟಣಗಳಲ್ಲೂ ಒಂದು ಮುಖ್ಯವಾದ ಪಾತ್ರವನ್ನು ವಹಿಸುವ ಅವಕಾಶವನ್ನು ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ಹಳ್ಳಿಗಳಲ್ಲಿ ಸಾಹುಕಾರಗಳು ಹೆಚ್ಚುತ್ತವೆ. ಮಾರತಕ್ಕ ವಸ್ತುಗಳನ್ನೂ ಕಡಮೆ ಬೆಲೆಗೆ ಮಾರಿಕೊಂಡು ಕೊಂಡುಕೊಳ್ಳುವ ಪದಾರ್ಥಗಳಿಗೆ ಹೆಚ್ಚಿಗೆಕೊಡಬೇಕಾಗುತ್ತದೆ. ಎಲ್ಲಿಯವರೆಗೆ ಹಾಗೆಯೇ ಇರುತ್ತದೆಯೋ, ಅಲ್ಲಿಯವರೆಗೆ ಹಳ್ಳಿಯ ರೈತರು ಆರ್ಥಿಕವಾಗಿ ಮುಂದುವರಿಯುವುದಿಲ್ಲ. ಆದ್ದರಿಂದ ಸಹಕಾರ ಸಂಸ್ಥೆಗಳನ್ನೂ ಹೆಚ್ಚು ಹೆಚ್ಚಾಗಿ ಬೆಳೆಸಿಕೊಂಡು ಬರುವುದು ಅತ್ಯಗತ್ಯ.

ಅನೇ ಸಂದರ್ಭದಲ್ಲಿ ರೈತರಿಗೆ ಸಾಲಗಳನ್ನು ಕೊಡುವುದಕ್ಕೆ ಈಗ ಸರ್ಕಾರ ಏನು ವ್ಯವಸ್ಥೆಮಾಡಬೇಕೆಂದು ಯೋಚನೆಮಾಡಿದೆ—ಅಪೆಕ್ಸ್ ಬ್ಯಾಂಕಿಗೆ ಹಣವನ್ನು ಕೊಟ್ಟು ಅದರ ಮುಖಾಂತರ ಕೆಲಸ ನಡೆಯಸಬೇಕೆಂದು ಮಾಡಿರುವುದು ಅಷ್ಟು ಸಾಧುವಾದುದಲ್ಲ. ಅದರಿಂದ ಸಾರ್ವತ್ರಿಕವಾಗಿ ಎಲ್ಲ ಬಡರೈತರಿಗೂ ಸಹಾಯವಾಗುವುದಿಲ್ಲವೆಂದು ನಂಬಿದ್ದೇನೆ. ಸರ್ಕಾರ ನಿಜವಾಗಿಯೂ ರೈತರಿಗೆ ಮತ್ತು ಹಳ್ಳಿಯ ಜನರಿಗೆ ಹೆಚ್ಚಿನ ಹಣದ ಸೌಲಭ್ಯಒದಗಿಸಿಕೊಡಬೇಕೆಂದರೆ ಸಾಲದ ಬಗ್ಗೆ ಒಂದು ಸರ್ವೆಮಾಡಬೇಕಾಗಿದೆ. ಎಷ್ಟೋ ವೇಳೆ ಬಡ್ಡಿಯ ರೂಪದಲ್ಲಿ ಸಾಲ ತೀರಿಸಿದ್ದರೂ ಸಾಲದ ಪತ್ರ ಸಾಲ ಕೊಟ್ಟವರಲ್ಲೇ ಉಳಿದಿರುತ್ತದೆ. ಆತನು ಯಾವಾಗ ಬೇಕಾದರೂ ಉಪಯೋಗಿಸಿಕೊಂಡು ಆತನ ಮನೆಯನ್ನು ಯಾವಾಗ ಬೇಕಾದರೂ ಹಾಳುಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ವಿಷಯದಲ್ಲಿ ಒಂದು ಸರ್ವೆಮಾಡಬೇಕು ; ನಮ್ಮ ದೇಶದಲ್ಲಿ ಯಾವ ಯಾವ ಸಾಲಗಳಿವೆ, ಅವನ್ನು ಪರಿಹಾರಮಾಡುವುದಕ್ಕೆ ಏನು ಮಾಡಬೇಕೆಂಬದನ್ನು ಪರ್ಯಾಲೋಚನೆಮಾಡಿ ರಿಸರ್ವ್ ಬ್ಯಾಂಕಿನಿಂದ ಸಹಾಯ ಪಡೆದು ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೊನೆಯ ಪಕ್ಷ ತಾಲ್ಲೂಕಿಗೆ ಒಂದೊಂದಾದರೂ ಸಾಲವನ್ನು ಕೊಡತಕ್ಕ ಬ್ಯಾಂಕುಗಳನ್ನಿಟ್ಟು ಸಾಲಗಾರರನ್ನು ದಳ್ಳಾಳಿಗಳಿಂದ ಬಿಡಿಸಿ ನೇರವಾಗಿ ವ್ಯವಹಾರ ನಡೆಯುವಂತೆ ಅವಕಾಶ ಕಲ್ಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

4 P.M.

ಇನ್ನು ಈ ಮೇಲ್ಮನೆಯನ್ನು ತೆಗೆದುಹಾಕತಕ್ಕ ವಿಷಯ ದೇಶದಲ್ಲಿ ಈ ಹೊತ್ತು ಪ್ರಸ್ತಾಪವಾಡಲ್ಪಟ್ಟಿದೆ ಇದೊಂದು ತಲೆಯ ಮೇಲೆ ಕುಳಿತಿರುವ ಭಾರ ಎಂದು ನನಗೂ ಅನಿಸುತ್ತದೆ ಇದರಿಂದ ಹೆಚ್ಚು ಸೇವೆ ಸಲ್ಲುತ್ತದೆಯೆಂದು ನಾನು ತಿಳಿದುಕೊಂಡಿಲ್ಲ. ಮಹಾತ್ಮಾ ಗಾಂಧಿಯವರು ಎರಡು ಮನೆಗಳಿರಬೇಕೆಂದೂ ಇದು ಅನಿವಾರ್ಯವೆಂದೂ ಹೇಳಿಲ್ಲ. ಅಥವಾ ತಜ್ಞರೂ ಹೇಳಿಲ್ಲ ಆದುದರಿಂದ ನಮ್ಮ ದೇಶ ಈ ರೀತಿಯ ಡೆಮಾಕ್ರಸಿಯನ್ನು ಹೊತ್ತುಕೊಂಡುಹೋಗುವುದು ಕಷ್ಟವಾಗಿದೆ. ನಮ್ಮದು ಬಡದೇಶ. ಆದುದರಿಂದ ಒಂದು advertisement ಗಾಗಿ, top heavy ಆಗಿರುವ ಪದ್ಧತಿಯನ್ನು ನಾವು ಇಟ್ಟುಕೊಳ್ಳಬಾರದು, ಖರ್ಚು ಕಡಮೆಯಾಗಬೇಕು. ಕಾನೂನು ವ್ಯವಸ್ಥೆಯಾಗಲಿರುವುದೇ ಆಗಲಿ ಜನಸಾಮಾನ್ಯರ ಹೆಸರಿನಲ್ಲಿ ಮಾಡುವುದರಿಂದ, ಅವರಿಗಾಗಿ ಅವರ ಪ್ರತಿನಿಧಿಗಳಾಗಿ ನಾವು ಕೆಲಸಮಾಡುವುದರಿಂದ, ನಾವು ಏನು ಮಾಡುತ್ತೇವೆ, ಏನು ಕಾನೂನು ಕಾಯಿದೆಗಳನ್ನು ಮಾಡುತ್ತೇವೆ ಎಂಬುದನ್ನು ಸಾಮಾನ್ಯ ಮನುಷ್ಯ ತಿಳಿದುಕೊಳ್ಳುವ ಮಟ್ಟದಲ್ಲಿರಬೇಕೇ ವಿನಾ ತೀರ complicated ಆಗಿರಬಾರದು. ಹಾಗಿದ್ದರೆ ಸಾಮಾನ್ಯ ಮನುಷ್ಯನಿಗೆ ತಿಳಿದುಕೊಳ್ಳಲು ಕಷ್ಟವಾಗುತ್ತದೆ ಮತ್ತು ಖರ್ಚು ಹೆಚ್ಚಾಗುತ್ತದೆ. ಆದುದರಿಂದ ಎರಡು ಮನೆಗಳು ಇಲ್ಲಿ ಅವಶ್ಯಕವಿಲ್ಲ. ಮೇಲ್ಮನೆಯನ್ನು ರದ್ದುಮಾಡುವುದಕ್ಕೇನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ಸರ್ಕಾರ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

Mr. SPEAKER.—You said you would require ten minutes after lunch. But you have taken half an hour after lunch !

ಶ್ರೀ ಎಸ್. ಗೋಪಾಲಗೌಡ.—ಇನ್ನು ನೀರಾವರಿ ವಿಚಾರ ನೋಡಿದರೆ, ಕಾರ್ಯ ಪ್ರಾರಂಭವಾಗಿರುವ ತುಂಗಾ ಯೋಜನೆಯಿದೆ, ಅದರ ಕೆಲಸ ಇನ್ನೂ ಮುಗಿದಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು ಮಾತನಾಡುವಾಗ ಕೆಲಸ ಬಹಳ ಮುಂದುವರೆದು ನಡೆದಿದೆ, ಸದ್ಯದಲ್ಲೇ ಮುಗಿಯುತ್ತದೆ ಎಂದು ಹೇಳಿದರು. ಹೋದ ವರ್ಷ ಕೂಡ ಮುಂದಿನ ವರ್ಷ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದರು; ಇನ್ನೂ ನಾಲೆ ಕೆಲಸ ನಡೆಯಬೇಕಾಗಿದೆ. ಆದಕಾರಣ ಈ ವರ್ಷ ಕೊಡುವುದಕ್ಕಾಗುವುದಿಲ್ಲ. ಇನ್ನೂ ಅಂಬ್ಲಗೋಲಾ ಮುಂತಾದ ಯೋಜನೆಗಳು ಹಾಗೆಯೇ ಇವೆ. ಸಣ್ಣಪುಟ್ಟ ನೀರಾವರಿ ಕೆಲಸಗಳೆಷ್ಟೋ ಇವೆ. ತುರ್ತಾಗಿ ಅವುಗಳನ್ನು ಮಾಡಬೇಕು. ಶೀಘ್ರವಾಗಿ ನೆರವೇರುವ ಸಣ್ಣ ಕಾಮಗಾರಿಗಳನ್ನು, ಅವುಗಳಿಂದ ಉಪಯೋಗವಾಗುವ ರೀತಿಯಲ್ಲಿ

ಮಾಡಬೇಕಾದುದು ಪ್ರಥಮ ಕರ್ತವ್ಯ. ಹೆಚ್ಚು ಹೆಚ್ಚು ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಬೇಕೆಂದು ಕೈಕೊಂಡಿರುವುದು ಶ್ಲಾಘನೀಯವಾದರೂ, ಕೂಡ ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗೆಗೆ ಬಂದಾಗ ಲಕ್ಕವಳ್ಳಿ ಯೋಜನೆಯನ್ನು ಮುಗಿಸಬೇಕಾದರೆ ಇನ್ನೂ ಹತ್ತು ಕೋಟಿ ರೂಪಾಯಿ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ಕೇಂದ್ರ ಸರ್ಕಾರವನ್ನು ಕೇಳಬೇಕಾಗುತ್ತದೆ ಎಂದು ಅಪ್ಪಣೆ ಕೊಡಿಸಿದರು. ಕೇಂದ್ರ ಸರ್ಕಾರವನ್ನು ಕೇಳಬೇಕು. ಇಷ್ಟು ಹಣಸಹಾಯಮಾಡಿ ಉಪಕಾರಮಾಡಲಿ. ಆರ್ಥಿಕ ವಿಲೀನೀಕರಣವಾದ ಮೇಲೆ ನಮ್ಮ ವರಮಾನ ಬಹಳ ಕಡಮೆಯಾಗಿ ಹೆಚ್ಚು ಹಣ ಬೇಕಾಗಿದೆ. ನಮ್ಮ ಮೈಸೂರು ಪರದೇಶವೇನೂ ಅಲ್ಲ, ಮೈಸೂರು ದೇಶ ಅಭಿವೃದ್ಧಿಯಾಗಿ ಹೆಚ್ಚು ಆದಾಯ ಬಂದರೆ, ಹೆಚ್ಚು ಉತ್ಪತ್ತಿಯಾದರೆ ಪರದೇಶಗಳಿಗೇನೂ ತೆಗೆದುಕೊಂಡು ಹೋಗುವುದಿಲ್ಲ, ಒಟ್ಟು ಇಂಡಿಯಾ ದೇಶದ ಅಭಿವೃದ್ಧಿ ಹೆಚ್ಚಿದಂತಾಗುತ್ತದೆ ಎಂದು ಹೇಳಿ, ಇಲ್ಲಿ ಪ್ರಾರಂಭಮಾಡಿರುವ ಲಕ್ಕವಳ್ಳಿ, ಮಾಡಬೇಕೆಂದಿರುವ ಹೊನ್ನೆಮರಡು ಮುಂತಾದ ಇನ್ನೂ ಹಲವು ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರದಿಂದ ಸಹಾಯ ತೆಗೆದುಕೊಂಡು ಮಾಡಬೇಕಾಗುತ್ತದೆ.

ಒಟ್ಟಿನಲ್ಲಿ, ಜನರಲ್ಲಿ ಹೆಚ್ಚು ಉತ್ಸಾಹವಿಲ್ಲದಿರುವುದೂ ಪರಸ್ಪರ ಸಹಕಾರ ಸಂಪರ್ಕಗಳಿಲ್ಲದಿರುವುದೂ ಬಹಳ ದೊಡ್ಡ ಕೊರತೆ. ಇದನ್ನು ಹೋಗಲಾಡಿಸಲು ಬಹುಶಃ ಕಾಂಗ್ರೆಸ್ ಸರ್ಕಾರಗಳಿಗೆ ಸಾಧ್ಯವಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ದೇಶದಲ್ಲಿ ಮೂಲಭೂತವಾದ ಬದಲಾವಣೆಯಾಗಿಲ್ಲ. ಜನಜೀವನದಲ್ಲಿ ನೂತನ ಚೈತನ್ಯ, ಉತ್ಸಾಹ, ಸ್ಫೂರ್ತಿಯ ಪ್ರವಾಹ ಹರಿಯಬೇಕೆಂದರೆ, ಅದಕ್ಕೆ ಏನಾದರೂ ಒಂದು ಪ್ರಬಲ ಕಾರಣವಿರಬೇಕು. ಅದಕ್ಕೆ ತಕ್ಕ ಬದಲಾವಣೆಯಾಗಬೇಕು. ಕಣ್ಣಿಗೆ ಎದ್ದುಕಾಣುವ ಬದಲಾವಣೆಯಾಗಬೇಕು ಅದು ಆದ ಹೊರತು ಈ ದೇಶನನ್ನದು, ಇದರ ಉದ್ಧಾರವಾದರೆ ನನ್ನ ಉದ್ಧಾರ, ಇದಕ್ಕಾಗಿ ನಾನು ದುಡಿಯಬೇಕು ಎಂಬ ಮನೋಧರ್ಮದಿಂದ ಪ್ರತಿಯೊಬ್ಬರೂ ಕೆಲಸಮಾಡುವುದಿಲ್ಲ. ದೇಶದ ಆರ್ಥಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡುವುದಕ್ಕೆ ಕಾಂಗ್ರೆಸ್ ಸರ್ಕಾರ ಪ್ರಯತ್ನಮಾಡದೇ ಇದ್ದರೆ ಪಂಚವಾರ್ಷಿಕ ಯೋಜನೆ ಕಾರ್ಯಗತವಾಗುವುದಿಲ್ಲ; ವರ್ಷವರ್ಷವೂ ಖೋತಾ ಬಡ್ಜೆಟ್ ಬೆಳೆದುಕೊಂಡುಹೋಗಿ ಏನು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದಿದ್ದೀರೋ ಅವು ಪರಿಣಾಮಕಾರಿಯಾಗಿ ಆಗುವುದಿಲ್ಲ, ಪ್ರಜೆಗಳಿಗೆ ಉಪಯೋಗವಾಗುವುದಿಲ್ಲ, ಖರ್ಚುಮಾಡಿದ ಹಣ ಸಾರ್ಥಕವಾಗುವುದಿಲ್ಲ. ಆದುದರಿಂದ ನಾನು ಸರ್ಕಾರಕ್ಕೆ ಹೇಳುವುದಿಷ್ಟೆ: ದೇಶದ ನಿರ್ಮಾಣಕಾರ್ಯದ ಜವಾಬ್ದಾರಿ ಹೊತ್ತ ತಾವು ದೇಶದಲ್ಲಿ ಶ್ರದ್ಧೋತ್ಸಾಹ ಹುಟ್ಟಬೇಕಾದರೆ ದೇಶದ ವಸ್ತುಸ್ಥಿತಿಯನ್ನು ಅರಿತು, ಜನತೆಯ ಕೂಗನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ಕೆಲಸಮಾಡಬೇಕು. ಈ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿಕೊಂಡುಹೋಗುತ್ತೀರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಮಾನ್ಯ ಅಧ್ಯಕ್ಷರೆ, ಸಭೆಯ ಮುಂದಿಟ್ಟಿರತಕ್ಕ ಮೈಸೂರು ಸಂಸ್ಥಾನದ ಹಣದ ವಿನಿಯೋಗಕ್ಕೆ ಸಂಬಂಧಪಟ್ಟ ಈ ಮಸೂದಾ ಕಾನೂನನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಅಪ್ರೋಪ್ರಿಯೇಷನ್ ಬಿಲ್ ಎಂಬುದು ಮೈಸೂರು ಸಂಸ್ಥಾನದ ಮುಂದಿನ ಒಂದು ವರ್ಷದ ಭವಿಷ್ಯವನ್ನು ನಿರ್ಧರಿಸುವ ಒಂದು ಜಾತಕದಂತೆ ಅಥವಾ ಮುಂದಿನ ವರ್ಷದ ಆಗುಹೋಗುಗಳನ್ನು ಪ್ರತಿಬಿಂಬಿಸುವ ಒಂದು ಕನ್ನಡಿಯಂತಿದೆಯೆಂದರೆ ತಪ್ಪಾಗಲಾರದು. ನಮ್ಮ ಮುಂದಿಟ್ಟಿರುವ ಈ ಜಾತಕ ಯಾವ ರೀತಿಇದೆಯೆಂದರೆ, ಅಷ್ಟು ಆಶಾದಾಯಕವಾಗಿಲ್ಲ. ಏಕೆಂ ಇದರಲ್ಲಿ ಉಚ್ಚ ಗ್ರಹಗಳಿರುವುದಕ್ಕೆ ಬದಲು ನೀಚಗ್ರಹಗಳೇ ತುಂಬಿವೆಯೆಂದು ಹೇಳಬೇಕಾಗಿದೆ. ಇದು ಸರಿಯಾದ ಕನ್ನಡಿಯು ಹಾಗಿಲ್ಲದೆ ಇದರಲ್ಲಿ ನೈಜವಾದ ಚಿತ್ರ ಪ್ರತಿಬಿಂಬಿತವಾಗುತ್ತಿಲ್ಲ. ಒಂದು false figure ಅಥವಾ ಸುಳ್ಳು ಚಿತ್ರ ಪ್ರತಿಬಿಂಬಿತವಾಗುತ್ತಿದೆಯೆಂದು ಹೇಳಿದರೆ ತಪ್ಪಾಗಲಾರದು.......

ಶ್ರೀ ಎಚ್. ಸಿದ್ದವೀರಪ್ಪ.—ನೀವು ಕಪ್ಪು ಕನ್ನಡಕ ಹಾಕಿಕೊಂಡು ನೋಡಿದರೆ ಹಾಗೆ ಕಾಣುತ್ತದೆ!

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಈ ಆಯವ್ಯಯದ ಪಟ್ಟಿಯನ್ನು ಸಭೆಯ ಮುಂದಿಟ್ಟಾಗಲೆಲ್ಲಾ ಸುಮಾರು ಎರಡು ಮೂರು ವರ್ಷಗಳಿಂದ ಖೋತಾ ಆಯವ್ಯಯ ಪಟ್ಟಿಯನ್ನೇ ನಾವು ನೋಡುತ್ತಾ ಬಂದಿದ್ದೇವೆ. ಈ ರೀತಿ ನಿರಂತರವಾಗಿ, ಸತತವಾಗಿ, ಖೋತಾ ಬಡ್ಜೆಟ್ಟನ್ನು ಇಡುತ್ತಾ ಬಂದರೆ ದೇಶಕ್ಕೆ ಅಷ್ಟು ಕ್ಷೇಮಕರವಲ್ಲ. ಮುಂದಿನ ಆರ್ಥಿಕ ಭದ್ರತೆಗೆ, ಮುಂದಿನ ಅಭಿವೃದ್ಧಿಗೆ ಕುಂದಕವಾಗುತ್ತದೆ, ಕುಂಠಿತವಾಗುತ್ತದೆ. ಪ್ರಗತಿದಾಯಕವಾಗುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಇದೇ ರೀತಿ ಖೋತಾ ಆಯವ್ಯಯದ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತಾ ಹೋದರೆ ಮುಂದೆ ಬಡ್ಜೆಟ್ ದೊಡ್ಡದೋ ಅಥವಾ ಖೋತಾ ದೊಡ್ಡದೊ ಎಂಬ ಸಂಶಯ ಬರಬಹುದು!

ಇನ್ನು ಈ ಖೋತಾವನ್ನು ಸರಿದೂಗಿಸುವುದಕ್ಕೆ ಅವಕಾಶವಿತ್ತು. ಆದರೂ ಕೂಡ ಮಂತ್ರಿಮಂಡಲ ನಿಷ್ಪಕ್ಷಪಾತವಾಗಿ, ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ ಕೆಲವು ಖರ್ಚುಬಾಬುಗಳನ್ನು ಕಡಮೆಮಾಡುವುದಕ್ಕೆ ವಿಚಕ್ಷಣೆಯಿಂದ ಗಮನಕೊಟ್ಟಿದ್ದರೆ ಸಾಧ್ಯವಾಗುತ್ತಿತ್ತೆಂದು ಈಗಾಗಲೇ ಅನೇಕ ಸದಸ್ಯರು ಸಭೆಯ ಗಮನಕ್ಕೆ ತಂದಿದ್ದಾರೆ. ಅದನ್ನು ಮತ್ತೊಮ್ಮೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಉದಾಹರಣೆಗೆ, ಸೆಕ್ರೆಟೇರಿಯಟ್ಟನ್ನು ತೆಗೆದುಕೊಂಡು ಇಲ್ಲಿರತಕ್ಕ ಸಿಬ್ಬಂದಿಯನ್ನೂ ನಡೆಯತಕ್ಕ ಕೆಲಸವನ್ನೂ ಹೋಲಿಸಿ ನೋಡಿದರೆ ಕೆಲಸಕ್ಕಿಂತ ಸಿಬ್ಬಂದಿಯೇ ಜಾಸ್ತಿಯಾಗಿದೆ. ಗೌಡನಿಗಿಂತ ಪೇಟ ಭಾರಿ ಎನ್ನುವಹಾಗಿದೆ. ಇದೊಂದು ಹುತ್ತದ ರೀತಿಯಲ್ಲದೆ. ಇದರಲ್ಲಿರುವ ಹಾವುಗಳನ್ನು ಕಡಮೆಮಾಡಬೇಕು. ಆದರೆ ಸಂಬಂಧಪಟ್ಟ ಮಂತ್ರಿಗಳು ಈ ಹುತ್ತಕ್ಕೆ ಕೈಹಾಕಿದರೆ ಎಲ್ಲಿ ಹಾವು ಕಚ್ಚುತ್ತದೋ ಎಂಬ ಭಯದಿಂದ ಈ ಕಡೆ ಕೈಹಾಕದೆ, ಮಿತವ್ಯಯದ ಯೋಚನೆಯನ್ನು ಇನ್ನೂ ಮಾಡಿಲ್ಲ. ಇನ್ನು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ನೋಡಿದರೆ, ಐ.ಎ.ಎಸ್. ಮತ್ತು ಐ.ಪಿ.ಎಸ್.ಗೆ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಒಂದು ಜಿಲ್ಲೆಯ ಜಿಲ್ಲಾಧಿಕಾರಿಗೆ ಸುಮಾರು 800 ರೂಪಾಯಿನಿಂದ ಸಾವಿರ ರೂಪಾಯಿ ಸಂಬಳ ಕೊಡುತ್ತಿದ್ದವರಿಗೆ ಈ ಹೊತ್ತು 1,800 ರೂಪಾಯಿ ಕೊಡಬೇಕಾಗಿದೆ! ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ 300 ಅಥವಾ 400 ರೂಪಾಯಿ ಸಂಬಳಕ್ಕೆ ಕೆಲಸಮಾಡುತ್ತಿದ್ದವರಿಗೆ ಈ ದಿವಸ 800 ಅಥವಾ ಸಾವಿರ ರೂಪಾಯಿ ಕೊಡಬೇಕಾಗಿದೆ!

ಒಬ್ಬ ಸದಸ್ಯರು.—ಆದರೂ ಅವರಿಗೆ ತೃಪ್ತಿಯಿಲ್ಲ!

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹೀಗಿದ್ದರೂ ಚಿಕ್ಕ ಚಿಕ್ಕ ಜಿಲ್ಲೆಗಳನ್ನಿಟ್ಟುಕೊಂಡು ಸರ್ಕಾರ ಎಲ್ಲಿಯವರೆಗೆ ಮುಂದುವರಿಸುವುದು? ಈ ರೀತಿ ಆಡಳಿತ ವ್ಯಯವನ್ನು ತಲೆಭಾರಮಾಡಿಕೊಂಡು ಮುಂದುವರಿದರೆ ಮಿತವ್ಯಯವನ್ನು ಸಾಧಿಸುವುದಕ್ಕೆ ಸಾಧ್ಯವೆ ಎಂಬುದನ್ನು ಆಲೋಚನೆಮಾಡಬೇಕು. ಇನ್ನು ಬಳ್ಳಾರಿ ಜಿಲ್ಲೆಯ ಆರು ತಾಲ್ಲೂಕುಗಳನ್ನು ಮೈಸೂರಿಗೆ ಕೊಡುವ ಸೂಚನೆಯಿದೆಯೆಂದು ಹೇಳುತ್ತಾರೆ. ಅವು ಬಂದ ಮೇಲೆ ಈಗಿನ ಒಂಭತ್ತು ಡಿಸ್ಟ್ರಿಕ್ಟುಗಳ ಜೊತೆಗೆ ಅದೂ ಸೇರಿ ನವಗ್ರಹಗಳ ಜೊತೆಗೆ ಒಂದು ದಶಮಗ್ರಹ ಬರಬಹುದೆಂಬ ಭಯ ನನಗೆ ಹುಟ್ಟಿದೆ! ಈಗ ಅಧಿಕಾರಿಗಳಿಗೆ ಕೊಡುವ ಸಂಬಳದ ದೃಷ್ಟಿಯಿಂದ ಆದಷ್ಟು ಜಿಲ್ಲೆಗಳ ಸಂಖ್ಯೆಯನ್ನು ಕಡಮೆಮಾಡಿಕೊಂಡು ಆಡಳಿತ ದಕ್ಷತೆಗೆ ಲೋಪ ಬಾರದಂತೆ ನೋಡಿಕೊಳ್ಳುವುದರಿಂದ ಆಡಳಿತ ಬಾಬುಗಳಲ್ಲಿ ಖರ್ಚು ಕಡಮೆಮಾಡಿಕೊಳ್ಳುವುದಕ್ಕವಕಾಶವಾಗುತ್ತದೆ. ಆದುದರಿಂದ ಜಿಲ್ಲೆಗಳ ಸಂಖ್ಯೆಯನ್ನು 9ಕ್ಕಿಂತ ಕಡಮೆಮಾಡಿ ಎಷ್ಟು ಸೂಕ್ತವೋ ಅಷ್ಟು ಮಾಡಬಹುದು. ಬೇಕಾದರೆ ಒಂದು ತಜ್ಞರ ಸಮಿತಿಯನ್ನು ನೇಮಕಮಾಡಿ, ಅವರ ಸಲಹೆ ಪಡೆದು ಮಾಡಬಹುದು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಲಾಗಾಯಿತು ಒಂದು ವೈಶಿಷ್ಟ್ಯವೇನೆಂದರೆ, ಸರ್ಕಾರ ಯೋಜನಾಬ್ರಹ್ಮರಂತೆ ವರ್ತಿಸುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಮಂತ್ರಿಮಂಡಲದ ಪ್ರತಿಯೊಬ್ಬ ಮಂತ್ರಿಗಳೂ ಒಂದೊಂದು ಯೋಜನೆಯನ್ನು ಸೃಷ್ಟಿ ಮಾಡಬೇಕು, ಅದರ ಕೀರ್ತಿ ತನಗೆ ಬರಬೇಕು ಎಂಬ ಮನೋಭಾವದಿಂದ, ವಿವೇಚನೆಯಿಲ್ಲದೆ ತಜ್ಞರ ಅಭಿಪ್ರಾಯವನ್ನೂ ಪಡೆಯದೆ ಬ್ರಹ್ಮನಂತೆ ತಾವೇ ಒಂದೊಂದು ಯೋಜನೆಯನ್ನು ಹಾಕುತ್ತಾರೆ. ಅದು ಪೂರ್ಣ ಫಲಪ್ರದವಾಗದೆ ಅರ್ಧಾಂತ್ಯದಲ್ಲೇ, ಮಂತ್ರಿಗಳು ನಿವೃತ್ತರಾಗುತ್ತಿರುವಂತೆಯೇ, ನಿಂತುಹೋಗಿ ಅದರ ಫಲ ದೊರಕದೆ ಅಲ್ಲೇ ಮೊಟಕಾಗುತ್ತದೆ. ಈ ಯೋಜನೆಗಳ ವಿಚಾರ ಇನ್ನೂ ಸ್ವಲ್ಪ ಹೇಳಬೇಕಾದರೆ, ಪ್ರಜಾಪ್ರಭುತ್ವ ಬಂದ ಮೇಲೆ ನಾವು ಎಷ್ಟೋ ಯೋಜನೆಗಳನ್ನು ನೋಡಿದ್ದೇವೆ. ಗ್ರಾಮಾಭಿವೃದ್ಧಿ ಯೋಜನೆ, ವಿವಿದೋದ್ದೇಶ ಸಹಕಾರ ಸಂಘಗಳ ಯೋಜನೆ, ಬಸ್ಸುಗಳ ರಾಷ್ಟ್ರೀಕರಣ ಯೋಜನೆ. ಈಗ ಸಂಸ್ಕೃತಿ ಪ್ರಸಾರ ಯೋಜನೆ ಬಂದಿದೆ! ಇಂಥ ಹೊಸ ಹೊಸ ಯೋಜನೆಗಳನ್ನು ನೋಡುತ್ತಲೇ ಇದ್ದೇವೆ ಈ ಯೋಜನೆಗಳು ಎಷ್ಟುಮಟ್ಟಿಗೆ ನಿರೀಕ್ಷಿಸಿದಷ್ಟು ಫಲವನ್ನು ಕೊಟ್ಟಿವೆ, ಜನತೆ ಎಷ್ಟುಮಟ್ಟಿಗೆ ಇವುಗಳನ್ನು ಸ್ವಾಗತಿಸಿದೆ, ದೇಶಕ್ಕೆ ಇವುಗಳಿಂದ ಏನು ಸಹಾಯವಾಗಿದೆ ಎಂದು ನೋಡಿದರೆ, ಒಂದು ದೊಡ್ಡ ಸೊನ್ನೆ ಕಾಣುತ್ತದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಪ್ರಪಂಚ ಹುಟ್ಟಿದ್ದೇ ಸೊನ್ನೆಯಿಂದ. ಎಲ್ಲಾ ಓಂಕಾರದಿಂದ ಹುಟ್ಟಿದ್ದು!

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಬಸ್ಸು ರಾಷ್ಟ್ರೀಕರಣದ ವಿಷಯ ತೆಗೆದುಕೊಂಡರೆ, ರಾಷ್ಟ್ರೀಕರಣ ಮಾಡಬೇಕಾದುದನ್ನು ಸರ್ಕಾರ ಧೈರ್ಯವಾಗಿ ಮುಂದೆ ಹೆಜ್ಜೆಯಿಡದೆ ಅಂಜಿ ಅಳುಕಿ ಕಾಲಿಡುತ್ತಿದೆಯೆಂದು ಅರ್ಥವಾಗುತ್ತದೆ. ಹೆಚ್ಚು ಲಾಭ ಕೊಡಲೆಂದು ಮುಂದೆ ಧೈರ್ಯವಾಗಿ ಹೆಜ್ಜೆ ಇಡದೆ ತಪ್ಪು ಹೆಜ್ಜೆ ಇಟ್ಟಹಾಗೆ ಕಾಣುತ್ತದೆ. ಬೆಂಗಳೂರು ಟಿ. ಟಿ. ಸಿ. ಮೈಸೂರು ಸಿಟಿ ಸರ್ವಿಸ್ ಇವುಗಳನ್ನು ಮೊದಲು ರಾಷ್ಟ್ರೀಕರಣಮಾಡಿ, ಅದರ ಆಧಾಯದಿಂದ ಅನುಭವದಿಂದ ಧೈರ್ಯ ಮತ್ತು ಸ್ಫೂರ್ತಿಯನ್ನು ಹೊಂದಿ, ಅಮೇಲೆ ಪೂರ್ಣ ರಾಷ್ಟ್ರೀಕರಣಕ್ಕೆ ಕೈಹಾಕಿದ್ದಿದ್ದರೆ ಚೆನ್ನಾಗಿತ್ತು. ಹಾಗೆಮಾಡದೆ, ಎರಡು ವರ್ಷ ನಷ್ಟವಾಗಿದ್ದರೂ ಇನ್ನೂ ಅವರ ತಪ್ಪು ಅವರ ಗಮನಕ್ಕೆ ಬೀಳದಿರುವುದು ಶೋಚನೀಯವಾಗಿದೆ.

ಪಬ್ಲಿಕ್‌ವರ್ಕ್ಸ್ ಇಲಾಖೆಯ ವಿಚಾರ ನೋಡಿದರೆ, ನೀರಾವರಿ ಕಾಮಗಾರಿಗಳಿಗಾಗಿ ಹಿಂದಿನ ಸರ್ಕಾರ ಇರಿಗೇಷನ್ ಡೆವಲಪ್‌ಮೆಂಟ್ ಫಂಡ್ ಎಂದು ಒಂದು ನಿಧಿಯನ್ನು ಏರ್ಪಾಡುಮಾಡಿದ್ದರು. ಅವರಲ್ಲಿ ಕೋಟ್ಯಾಂತರ ರೂಪಾಯಿ ಹಾಕಿದ್ದರು. ಮುಂದೆ ಕಾಲಾನುಕಾಲಕ್ಕೆ ಉಪಯೋಗವಾಗುತ್ತದೆ, ಫಲ ಕೊಡುತ್ತದೆ ಎಂದು ಇಟ್ಟಿದ್ದರು. ಅದನ್ನು ಈಗ ಸೊನ್ನೆಮಾಡಿದ್ದಾರೆ. ಮುಂದೆ ಈ ಫಂಡಿನ ಕಡೆ ಕೈ ತೋರಿಸುವುದಕ್ಕೂ ಸಾಧ್ಯವಿಲ್ಲ. ಇದನ್ನು ಖಾಲಿಮಾಡಿದರು, ಯಾವುದೋ ಅಭಿವೃದ್ಧಿಯೋಜನೆ, ಅಣೆಕಟ್ಟು ಎಂದು ಯೋಜನೆಗಳನ್ನು ಹಾಕಿದರು; ಈಗಿನ ಜನರ ಮೊಮ್ಮಕ್ಕಳಿಗೂ ಅದರ ಫಲ ದೊರಕುತ್ತದೆಯೋ ಇಲ್ಲವೋ ಗೊತ್ತಿಲ್ಲ! ಇವು ಪೂರೈಸುತ್ತವೆಯೋ ಇಲ್ಲವೋ ಗೊತ್ತಿಲ್ಲ. ಇದಕ್ಕೆ ಬದಲು ಬಹಳ ಶೀಘ್ರವಾಗಿ ಫಲ ಕೊಡುವಂತಹ, ಸಾಧ್ಯವಾದ ಮಟ್ಟಿಗೂ ದುರ್ಭಿಕ್ಷ ಪರಿಸ್ಥಿತಿಯನ್ನೂ ಕ್ಷಾಮ ಪರಿಸ್ಥಿತಿಯನ್ನೂ ಹೋಗಲಾಡಿಸಲು ಸಾಧಕವಾದ ಕೆಲಸಗಳ ಮೇಲೆ ಖರ್ಚುಮಾಡಿದ್ದರೆ ಜನರು ಸ್ವಾಗತಿಸುತ್ತಿದ್ದರು. ಯಾರಮೇಲೂ ಆಕ್ಷೇಪಣೆ ಬರುತ್ತಿರಲಿಲ್ಲ. ನಾನು ಯಾರನ್ನೂ ವೈಯಕ್ತಿಕವಾಗಿ ಆಕ್ಷೇಪಿಸುತ್ತಿಲ್ಲ, ಮಂತ್ರಿಮಂಡಲದಲ್ಲಿ ನಿಜವಾಗಿಯೂ ದಕ್ಷತೆಯಿದ್ದಿದ್ದರೆ, ಅವರು ನಿರ್ಭಯದಿಂದ, ನಿದಾಕ್ಷಿಣ್ಯವಾಗಿ ಕೆಲಸ ಮಾಡುತ್ತಿದ್ದಿದ್ದರೆ, ಈ ರೀತಿ ಆಗುತ್ತಿರಲಿಲ್ಲವೆಂದು ಹೇಳಬೇಕಾಗಿದೆ.

ಇನ್ನು ಕೈಗಾರಿಕೆಗಳ ವಿಚಾರ. ಮಾನ್ಯ ಸದಸ್ಯರು ಈಗಾಗಲೇ ಹೇಳಿದಹಾಗೆ, ವ್ಯವಹಾರ ದೃಷ್ಟಿಯಿಂದ ಲಾಭ ಬರುವಂತೆ ಹಣವನ್ನು ವ್ಯಯಮಾಡುತ್ತಿಲ್ಲ. ಸರ್ಕಾರದ ಆಡಳಿತದಲ್ಲಿರುವ ಕೈಗಾರಿಕೆ ಸಂಸ್ಥೆಗಳನ್ನು ತೆಗೆದುಕೊಳ್ಳಲಿ, ಸರ್ಕಾರದ ಸಹಾಯ ಪಡೆದು ಕೆಲಸ ಮಾಡುತ್ತಿರುವ ಕೈಗಾರಿಕೆ ಸಂಸ್ಥೆಗಳನ್ನು ತೆಗೆದುಕೊಳ್ಳಲಿ, ಸುಮಾರು ಆರು ಕೋಟಿ ರೂಪಾಯಿ ಹಾಕಿರುವ ಕೈಗಾರಿಕೆಗಳಿಂದ ನಿರೀಕ್ಷಿಸಿದಷ್ಟು ಲಾಭ ಬರುತ್ತಿಲ್ಲ. ಒಂದು ರಾಜಕೀಯ ವಾತಾವರಣದ ಹಿನ್ನೆಲೆಯಲ್ಲಿ ಇವುಗಳ ಆಡಳಿತ ನಡೆಯುತ್ತಿದೆಯಾದುದರಿಂದ ಈ ಸ್ಥಿತಿಯಿದೆ. ಆದುದರಿಂದ ರಾಜಕೀಯ ಪಂಗಡಗಳ ಸೋಂಕನ್ನು ಕೂಡ ಸೋಕಿಸದೆ, ನಿಷ್ಪಕ್ಷಪಾತವಾಗಿ ಇವುಗಳ ಆಡಳಿತ ನಡೆಸುವುದಾದರೆ, ವರ್ಷಕ್ಕೆ ಎರಡು ಮೂರು ಕೋಟಿ ರೂಪಾಯಿ ಲಾಭ ಪಡೆದು ನಮ್ಮ ಸಂಸ್ಥಾನದ ಬಡ್ಜೆಟ್ಟಿನ ಖೋತಾವನ್ನು ಸರಿದೂಗಿಸುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡುತ್ತಿಲ್ಲ. ಉದಾಹರಣೆ ಕೊಡಬೇಕೆಂದರೆ ಈಗ ಕಾಲಾವಕಾಶ ಸಾಕಷ್ಟಿಲ್ಲ.

ಇನ್ನು ನಾವು ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಯಾವ ಯಾವ ಬಾಬುಗಳಿಗೆ ಒದಗಿಸಿದ್ದೇವೋ ಅಷ್ಟು ಹಣ ಆಯಾಯ ಬಾಬುಗಳಲ್ಲಿ ಖರ್ಚಾಗಿದೆಯೋ ಅಥವಾ ಹಾಗೆ ಉಳಿದಿದೆಯೋ ಅಥವಾ ಎಷ್ಟು ಖರ್ಚಾಗಿದೆ, ಎಷ್ಟು ಉಳಿದಿದೆಯೆಂಬುದನ್ನು ತಿಳಿದುಕೊಳ್ಳತಕ್ಕ ಬಗ್ಗೆ ಈ ಮಾನ್ಯ ಸಭೆಯ ಸದಸ್ಯರಿಂದೊಡಗೂಡಿದ ಒಂದು ಸಮಿತಿಯನ್ನು ಎಸ್ಟಿಮೇಟ್ ಸಮಿತಿಯೆಂಬುದಾಗಿ ಕರೆದು ಕಳೆದ ವರ್ಷದ ಜೂನ್ ತಿಂಗಳಿನಲ್ಲಿ ಸ್ಥಾಪನೆ ಮಾಡಿದ್ದರು. ಆದರೆ ಒಬ್ಬ ಅಧ್ಯಕ್ಷರನ್ನಾರಿಸಿಕೊಳ್ಳುವು

ದರಲ್ಲೇ ಅರ್ಧ ಆಯಸ್ಸೂ ಅದಕ್ಕೆ ಕಳೆದುಹೋಯಿತು. ಈ ವರ್ಷದ ಫೆಬ್ರುವರಿಯ 6—7ನೇ ತಾರೀಖಿನಲ್ಲಿ ಪ್ರಥಮ ಮೀಟಿಂಗ್ ನಡೆಯಿತು. ಅನಂತರ 3—4 ಮೀಟಿಂಗುಗಳು ನಡೆದುವು. ಇನ್ನೂ ಅಂತ್ಯ ಕಾಲದಲ್ಲಿ ಆ ಸಮಿತಿಯು ಸರ್ಕಾರಕ್ಕೆ ನೀಡತಕ್ಕ ಸಲಹೆಗಳು ಕಾರ್ಯರೂಪಕ್ಕೆ ಬಂದು ಆಡಳಿತ ಬಾಬಿನಲ್ಲಿ ಮಿತವ್ಯಯವನ್ನು ಮಾಡುವ ಹೊತ್ತಿಗೆ ಸರಿಯಾಗಿ ಆ ವರ್ಷವೂ ಕಳೆಯುತ್ತಾ ಬಂತು. ಸರ್ಕಾರದ ಆಡಳಿತ ಬಾಬಿನಲ್ಲಿ ಖರ್ಚು ವೆಚ್ಚಗಳು ಹೆಚ್ಚಾಗಿದ್ದು, ನಡೆಯತಕ್ಕ ಕೆಲಸಗಳನ್ನು ನೋಡಿದರೆ ಎಲ್ಲಾ ಅರ್ಧಂಬರ್ಧ. ಯಾವುದೋ ಒಂದು ಪ್ರಭಾವದಿಂದ ಯಾವನೋ ಒಬ್ಬನಿಗೆ ಒಂದು ಕೆಲಸ ಬೇಕಾಗಿದೆಯೆಂದು ಅದಕ್ಕಾಗಿ ಒಂದು ಹುದ್ದೆಯನ್ನು ಮಾಡಿದ್ದಾರೆ. ನಮ್ಮಲ್ಲಿ ಕೆಲಸಗಳಿಗೆ ತಕ್ಕಂತೆ ಹುದ್ದೆಗಳನ್ನು ಮಾಡುತ್ತಿಲ್ಲ.

Mr. SPEAKER.—The Hon'ble Member is a member of that Committee.

Sri B. P. NAGARAJA MURTHY.—We have to wait and see how the recommendations are going to be implemented.

ಹಾಗೆ ವ್ಯಕ್ತಿಗಾಗಿ ಹುದ್ದೆಗಳನ್ನು ನಿರ್ಮಿಸತಕ್ಕ ವ್ಯಾಮೋಹದ ಬಾಬುಗಳನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಹಿಂದಿದ್ದ ಸರ್ಕಾರ ವ್ಯಕ್ತಿಗಳ ಪ್ರಭಾವಕ್ಕೆ ಯಾವ ಅವಕಾಶವನ್ನು ಕೊಟ್ಟಿರಲಿಲ್ಲ. ಆದರೆ ಈಗಿರತಕ್ಕ ಸರ್ಕಾರ ಅದಕ್ಕೆಲ್ಲಾ ಅವಕಾಶಕೊಟ್ಟಿದೆ. ಇದನ್ನು ಮೊದಲು ತಪ್ಪಿಸಬೇಕು. ಅಂಥ ಅಮೇರಿಕಾ ದೇಶದಲ್ಲೇ, ಅಗ್ರಿಕಲ್ಚರ್, ವೆಟರಿನರಿ ಮತ್ತು ಹಾರ್ಟಿಕಲ್ಚರ್ ಈ ಮೂರು ಬಾಬುಗಳನ್ನು ಒಬ್ಬ ಅಧಿಕಾರಿಗಳ ಆಡಳಿತಕ್ಕೊಳಪಡಿಸಿದ್ದಾರೆಂದು ಕೇಳುತ್ತೇನೆ. ಆ ದೇಶದಲ್ಲಿ ಕೂಡ ಹೀಗೆ ಒಂದು ಮಿತವ್ಯಯವನ್ನು ಇಂಥ ಬಾಬುಗಳಲ್ಲೂ ಮಾಡುತ್ತಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಇಂಥ ಒಂದೊಂದು ಬಾಬಿಗೂ ಒಬ್ಬೊಬ್ಬ ಮೊಖ್ತೇಸರರನ್ನು ಇಡಲಾಗಿದೆ. ಆದರೆ ಈ ಇಲಾಖೆ ಮೊಖ್ತೇಸರರಿಗೆ ಕೊಡುತ್ತಿರುವುದು 100 – 200 ರೂಪಾಯಿಗಳ ಸಂಬಳವಲ್ಲ. ಈವರೆವಿಗೂ ಒಂದು ಸಾವಿರ ರೂಪಾಯಿಗಳಂತೆ ತಿಂಗಳಿಗೆ ಸಂಬಳ ಕೊಡುತ್ತಿದ್ದಾರೆ. ಇದೇ ಈ ಅಗ್ರಿಕಲ್ಚರಲ್ ಮತ್ತು ಇನ್ನುಳಿದ ಎರಡು ಬಾಬುಗಳೆಂದರೆ ನಾನಾಗಲೇ ತಿಳಿಸಿರತಕ್ಕಂಥವುಗಳನ್ನೆಲ್ಲಾ ಸೇರಿಸಿ ಒಂದು ಇಲಾಖೆಯನ್ನು ಮಾಡಿದರೆ ಸಾಕು ಎಂಬುದಾಗಿ ಈ ಹಿಂದೆ ನಿಮ್ಮ ಪಾರ್ಟಿಯ ಸದಸ್ಯರೇ ಈ ವಿಚಾರವನ್ನು ನಿಮ್ಮ ಗಮನಕ್ಕೆ ತಂದಿದ್ದಾರೆ.

ಇನ್ನು ಆಸ್ಪತ್ರೆಗಳ ಔಷಧಿಗಳನ್ನು ಕೊಂಡುಕೊಳ್ಳತಕ್ಕ ಬಗ್ಗೆ ಕಂಟ್ರಾಕ್ಟುಗಳನ್ನು ಕೊಡುತ್ತಿದ್ದಾರೆ. ಆದರೆ ವರ್ಷದಲ್ಲಿ 9—10 ತಿಂಗಳು ಕಳೆದರೂ ಔಷಧಿ ಆಸ್ಪತ್ರೆಯನ್ನೇ ಮುಟ್ಟಿರುವುದಿಲ್ಲ. ಈ ಔಷಧಿಗಳನ್ನು ನೇರವಾಗಿ ಕೊಂಡುಕೊಳ್ಳುತ್ತಿಲ್ಲ. ಈ ಔಷಧಿಗಳನ್ನು ಕೊಂಡುಕೊಳ್ಳುವ ವಿಧಾನ ಕೊಂಕಣ ಸುತ್ತಿಕೊಂಡು ಮೈಲಾರಕ್ಕೆ ಬರುವಂತಿದೆ. ಈ ಆಸ್ಪತ್ರೆಗೆ ಸಪ್ಲೈಆಗತಕ್ಕ ಔಷಧಿಗಳು ಎಸ್. ಪಿ. ಸಿ. ಮೂಲಕವೇ ಬರಬೇಕಾಗಿದೆ. ಅವರು ಔಷಧಿಗಳನ್ನು ಸಪ್ಲೈಮಾಡುವುದು ವರ್ಷದಲ್ಲಿ ಇನ್ನು ಒಂದು ತಿಂಗಳು ಉಳಿದಿದೆ ಎನ್ನುವಾಗ ಅಂದಮೇಲೆ ಅಲ್ಲಿರತಕ್ಕ ರೋಗಿಗಳ ಗತಿ ಆ 10–11 ತಿಂಗಳುಗಳ ತನಕ ಏನಾಗಿರಬೇಕು? ಹೀಗೆ ಅವರು ಸರಬರಾಯಿ ಮಾಡತಕ್ಕ ಔಷಧಿಯ ಪ್ರಮಾಣವಾದರೂ ಎಷ್ಟೆಂಬುದನ್ನು ನಾವು ವಿಮರ್ಶೆಮಾಡಿ ನೋಡುವುದಾದರೆ, ಅದೂ ಕೇವಲ 2-3 ತಿಂಗಳಿದ್ದರೆ ಹೆಚ್ಚಾಯಿತು. ಇನ್ನೂ ವರ್ಷದಲ್ಲಿ 9–10 ತಿಂಗಳು ಆಸ್ಪತ್ರೆಯಲ್ಲಿ ಔಷಧಿಗಳು ಇರುವುದಿಲ್ಲ, ರೋಗಿಗಳಿಗೆ ಅನುಕೂಲವೂ ಆಗುವುದಿಲ್ಲ; ಹೀಗಿರುತ್ತದೆ. ನಾವು ಯಾವ ಒಂದು ಗುರಿಯನ್ನೇ ಮುಟ್ಟಬೇಕಾದರೂ ಅದಕ್ಕೆ ಒಂದು ಸರಿಯಾದ ಕಾರ್ಯವಿಧಾನವನ್ನು ಏರ್ಪಡಿಸಿಕೊಳ್ಳಬೇಕು.

ಇನ್ನು ಹಳ್ಳಿ ಆಸ್ಪತ್ರೆಗಳ ವಿಚಾರ ಹೇಳುವುದಾದರೆ ಕೇವಲ L. M. P. ಓದಿದ ಡಾಕ್ಟರುಗಳನ್ನು ಹಳ್ಳಿಗಳ ಕಡೆ ಇರುವ ಆಸ್ಪತ್ರೆಗಳಿಗೆ ಹಾಕಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಆಸ್ಪತ್ರೆಗಳಿಗೆ M.B.B.S. ಪಾಸಾಗಿರತಕ್ಕವರನ್ನು ಹಾಕುತ್ತಿದ್ದಾರೆ. ಹೀಗಾಗಿ ನಮಗೆಲ್ಲಾ ಆ ಗ್ರಾಮಾಂತರ ಪ್ರದೇಶಗಳಲ್ಲಿ, ಆ L. M. P. ಓದಿಕೊಂಡು ಬರತಕ್ಕವರೇ ಡಾಕ್ಟರೂ, ಸರ್ಜನರೂ ಎಲ್ಲಾ ಆಗಿರುತ್ತಾರೆ. ಈ ಡಾಕ್ಟರುಗಳಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಗ್ರಾಮಾಂತರ ಪ್ರದೇಶಗಳಿಗೆ ಈಗ ತಾವು ಕಳುಹಿಸುತ್ತಿರುವ ಡಾಕ್ಟರುಗಳು ಚಿಕಿತ್ಸೆ ನಡೆಸದಂಥಾ ಅನೇಕ ಕೇಸುಗಳು ಇರುತ್ತವೆ. ಆಗ ಆ ರೋಗಿಗಳು ದೃಢಕಾಯರಾಗಿದ್ದರೆ ಮತ್ತೂ ಅವರ ರೋಗ ಇನ್ನೂ ಬಾಲ್ಯಾವಸ್ಥೆಯಲ್ಲೇ ಇದ್ದರೆ ಅವರು 10—20 ಮೈಲಿ ನಡೆದುಕೊಂಡು ದೊಡ್ಡ ಊರುಗಳಲ್ಲಿರುವ ಆಸ್ಪತ್ರೆಗಳಿಗೆ ಬರಬಹುದು. ಆದರೆ ಹೀಗೆ ಮಾಡಲು ಎಲ್ಲರಿಗೂ ಸಾಧ್ಯವಿಲ್ಲ. ಅಂಥಾ ಹಣಕಾಸಿನ ಅನುಕೂಲವಿರತಕ್ಕವರು ಇಂಥ ಬೆಂಗಳೂರು, ಮೈಸೂರು ಪಟ್ಟಣಗಳಿಗೆ ಬಂದು ತಮ್ಮ ಖಾಯಿಲೆಗಳನ್ನು ವಾಸಿಮಾಡಿಸಿಕೊಂಡು ಹೋಗುತ್ತಾರೆ. ಬಡವರಾಗಿರತಕ್ಕವರು ಬರಲು ಯತ್ನವಿಲ್ಲದೆ ಅಲ್ಲಿ, ಇಲ್ಲಿ ಬಿದ್ದು ಕೊನೆಗೆ ಅಲ್ಲೇ ಸತ್ತುಹೋಗುತ್ತಾರೆ. ಈ ಅನಾನುಕೂಲಗಳನ್ನು ತಕ್ಕಮಟ್ಟಿಗಾದರೂ ತಗ್ಗಿಸುವ ದೃಷ್ಟಿಯಿಂದ ಹಳ್ಳಿ ಆಸ್ಪತ್ರೆಗಳಿಗೆ ನಿಮ್ಮ ಪಟ್ಟಣಗಳಿರತಕ್ಕ ಆಸ್ಪತ್ರೆಗಳಲ್ಲಿರುವ M.B.B.S. ಡಾಕ್ಟರುಗಳನ್ನು ವರ್ಗಮಾಡಿ, ನಗರಗಳಲ್ಲಿ ನೀವು ಆ L. M. P. ಡಾಕ್ಟರುಗಳನ್ನು ಇಟ್ಟುಕೊಳ್ಳುವುದು ಸೂಕ್ತವಾಗಿರುತ್ತದೆ. ಹಾಗೆ ಮಾಡದಿದ್ದರೆ ತಾವು ಅಲ್ಲಿಗೆ ಕಳುಹಿಸುವ ಆ L. M. P. ಡಾಕ್ಟರುಗಳು ಸಾವಿರ ರೋಗಿಗಳನ್ನು ಕೊಲೆಮಾಡಿ ಕೊನೆಗೆ ಅವರೊಬ್ಬರು ಡಾಕ್ಟರಾಗಬೇಕಾಗುತ್ತದೆ.

ಇನ್ನು ತೆರಿಗೆಗಳ ವಿಚಾರ ಹೇಳುವುದಾದರೆ—ಸಾಹುಕಾರರಿಗೆ ತಾವು ಒಂದಕ್ಕೆ ಎರಡರಷ್ಟು ಬೇಕಾದರೂ ತೆರಿಗೆ ವಿಧಿಸಿ, ಬೇಡ ಎಂದು ಹೇಳುವುದಿಲ್ಲ. ಆದರೆ ಯಾರ ಮೇಲೆ ಈಗಾಗಲೇ ಈ ತೆರಿಗೆಗಳ ಹೊರೆ ಸಾಕಷ್ಟು ಇರುತ್ತದೆಯೋ ಅಂಥಾವರ ಮೇಲೆ ಮಾತ್ರ ಹಾಕಬಾರದೆಂದು ಹೇಳಿದೆನೇ ಹೊರತು ಯಾರ ಮೇಲೆ ಸಾಕಷ್ಟು ಈ ತೆರಿಗೆ ಹೊರೆ ಇರುವುದಿಲ್ಲವೋ ಅಂಥವರ ಮೇಲೆ ಈ ತರಿಗೆಗಳನ್ನು ಹೆಚ್ಚಿಸಬಾರದೆಂದು ನಾನು ಹೇಳಲಿಲ್ಲ. ಆದರೆ ಈ ದಿವಸ ನೀವು ತೆರಿಗೆಗಳನ್ನು ಹಾಕುತ್ತಿರುವುದು ಖರ್ಚು ಬಾಬುಗಳು ಜಾಸ್ತಿಯಾಗಿರುವುದರಿಂದ ಅವುಗಳನ್ನು ಸರಿತೂಗಿಸುವುದಕ್ಕಾಗಿ ಹಾಕಲಾಗುತ್ತದೆಂದು ಹೇಳಿದ್ದೀರಿ. ಆದರೆ ತಾವು ಕೈಕೊಳ್ಳಬೇಕೆಂದು ಉದ್ದೇಶಿಸಿರುವ ಅನೇಕ ಖರ್ಚು ಬಾಬುಗಳು ಅಷ್ಟು ಅನಿವಾರ್ಯವಾದವುಗಳೆಂದು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ತಾವು ಖರ್ಚುಮಾಡಬೇಕೆಂದು ಹೊರಟಿರತಕ್ಕ ಆ ಸಂಸ್ಕೃತಿ ಯೋಜನೆಯನ್ನು ಸಂಪೂರ್ಣವಾಗಿ ಕೈ ಬಿಟ್ಟರೂ ಚಿಂತೆಯಿಲ್ಲ. ಇಲ್ಲವೇ ಅದನ್ನು ಇನ್ನೂ ಒಂದು ವರ್ಷ ಮುಂದಕ್ಕೆ ಹಾಕಿದರೆ

(ಶ್ರೀ ಟಿ. ಪಿ ನಾಗರಾಜಮೂರ್ತಿ.)

ಆದರಿಂದ ಅಂಥಾ ಅನರ್ಥಗಳೇನೂ ಉಂಟಾಗಲಾರವು. ಇದರಂತೆಯೇ ವಿಧಾನಸಭಾ ಮಂಡಲದ ಭವನಕ್ಕಾಗಿ 48 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದಿದ್ದೀರಿ. ಇದನ್ನು ಸಹ ತಾವು ಮುಂದಿನ ವರ್ಷಕ್ಕೆ ಹಾಕಬಹುದು

ಇನ್ನು ಸತ್ಯ, ಧರ್ಮ, ಅಹಿಂಸೆಗಳನ್ನು ಪಾಲಿಸುವಂಥ ಈ ಪ್ರಜಾಸರ್ಕಾರ, ತನಗೆ ಸಲ್ಲುತ್ತಿದ್ದ ಆಹಾರ ಸಬ್‌ಸಿಡಿಯನ್ನು ಕಳೆದುಕೊಂಡು, ಈ ದಿವಸ ಸತ್ಯ ಧರ್ಮಗಳನ್ನು ಪಾಲಿಸಿಕೊಂಡು ಬರುತ್ತಿರುವ ಹಳ್ಳಿಯ ರೈತನು ತಾನು ಕಷ್ಟಪಟ್ಟು ಬೆಳೆದಂಥ ದವಸಧಾನ್ಯಗಳನ್ನು, ಆತನಿಗೆ ಲಾಭ ಬರುವ ರೀತಿಯಲ್ಲಿ ಮಾರಾಟ ಮಾಡಿಕೊಳ್ಳಲು ಅವಕಾಶ ಕೊಡದೆ, ಆತನಿಗೆ ನಾನಾ ಕಿರುಕುಳಗಳನ್ನು ಕೊಟ್ಟು, ಹಳ್ಳಿಗಳ ರೈತರಲ್ಲಿರತಕ್ಕ ಧಾನ್ಯವನ್ನೆಲ್ಲಾ ಸೂರೆ ಹೊಡೆದುಕೊಂಡು ಬಂದು, ಆ 70—80 ಲಕ್ಷ ಜನರ ಹೊಟ್ಟೆಯನ್ನು ಬಡಿದು ಈ ಪಟ್ಟಣಕ್ಕೆ ತಂದು ತುಂಬತಕ್ಕ ನೀತಿ ನಿಜವಾಗಿಯೂ ಈ ಪ್ರಜಾ ಸರ್ಕಾರಕ್ಕೆ ಸಮಂಜಸವಾದುದಲ್ಲ. ಈ ದಿವಸ ಕಾರ್ಮಿಕರಲ್ಲಿ ಏನೊಂದು ಸಂಘಟನಾಶಕ್ತಿ ಬಂದಿದೆಯೋ ಅಂಥ ಒಂದು ಶಕ್ತಿ ರೈತರಿಗೂ ಬಂದದ್ದೇ ಆದರೆ, ಆಗ ಸರ್ಕಾರ ಒಂದು ಘಂಟೆ ಕೂಡ ಅವರನ್ನು ನಿರ್ವಹಿಸುವುದಕ್ಕಾಗುವುದಿಲ್ಲ. ಆದರೆ ಜನರು ಆ ಮಟ್ಟಕ್ಕೆ ಹೋಗುವವರೆಗೆ ಅವಕಾಶ ಕೊಡಬಾರದೆಂದು ಹೇಳಿ ಸರ್ಕಾರದವರು ಈಗ ಸಭೆಯ ಮುಂದೆ ಮಂಡಿಸಿರುವ ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ನಾನು ವಿರೋಧಿಸುತ್ತೇನೆ.

4-30 P.M.

(Sri J. Mohamed Imam rose.)

Mr. SPEAKER.—The Hon'ble Minister must have fifteen minutes.

* Sri J. MOHAMED IMAM.—Yes, Sir. I oppose the Appropriation Bill that has been presented to this House. We are asked to vote to the extent of Rs. 32 crores to the Ministry so that this amount may be spent in the course of this year. Before we do so, it is necessary for us to satisfy ourselves that the amount so allotted is spent wisely and that it is spent properly and that while spending this amount the principles laid down by democracy are not violated.

It has been urged by all the members this side that there is need to effect economy and it has also been pointed out that the Government are not devoting their entire attention towards this important aspect. I am not going to dwell on this subject at length because I have pointed out previously the failure of the Government in not effecting economy. But I will stress on only one point and that is, that the Ministers themselves should set an example personally in effecting economy and in this aspect, I would like to dwell on one of their important activities and that is, the tours undertaken by them.

It might have been observed that a large number of members of this House from both sides had tabled a number of questions, and also some cut motions were moved, seeking information regarding the tours of these Ministers.

Sri A. BHEEMAPPA NAIK.—Is it your view that they should not tour ?

Sri J. MOHAMED IMAM.—Please wait and I will tell you how they should and to what extent. My friend has been asking me a direct question : should they not tour ? I was once a Minister and I have seen other Ministers also touring then and I have also seen these Ministers touring.

An HON'BLE MEMBER.—That was not a Responsible Government.

Sri J. MOHAMED IMAM.—I must point out that in the system of democracy, the Ministers should curtail their tours as much as possible. In a system of democracy, the Ministers and the Legislature are meant to lay down policies, but so far as executive matters are concerned, they must leave them to the Civil Servants. In England, where a similar system of democracy is prevalent, I can point out and state with authority that the Ministers hardly tour. They do not tour and also they do not take part in ceremonial functions. I was there for three months and I never read any report in any newspaper that the Ministers were touring or laying foundation-stones. All the ceremonial honours are reserved for one person and to a member of the Royal House. All touring and ascertaining the local grievances are entrusted to the Civil Servants who are non-partisans. Here, the tours are undertaken with threefold objects. First of all, on the pretext of Government duty, they undertake not only ceremonial tours

and propaganda and election tours, but also pilgrimage tours. While they tour they carry on propaganda. I will give you one instance. Two months ago—I think it was on the occasion when the Praja Socialist Party launched a satyagraha and it was on that occassion Sri Gopala Gowda was arrested—I remember the Chief Minister going from place to place and addressing meetings. And waht was he preaching ? I could understand the very words used : "ವಿರೋಧ ಪಾರ್ಟಿಯವರದು ಅಸಭ್ಯವರ್ತನೆ, ಅಶ್ಲೀಲವರ್ತನೆ" ಎಂದು ಪ್ರಚಾರ ಮಾಡಲಿಕ್ಕೆ ಹೋಗುತ್ತಿದ್ದಾರೆ. ಅವರು ಹೀಗೆ ಪ್ರತಿಯೊಂದು ಸಂದರ್ಭದಲ್ಲಿಯೂ ಸರ್ಕಾರಿ ಡ್ಯೂಟಿಗೆಂದು ಹೊರಗಡೆ ಪ್ರವಾಸ ಹೋಗಿದ್ದಾಗ, ಅವರು ವಿರೋಧ ಪಾರ್ಟಿಯವರ ಮೇಲೆ ಹೀಗೆಂದು ಟೀಕೆ ಮಾಡಲಿಕ್ಕೆ ಹೋಗುತ್ತಿದ್ದಾರೆಯೇ ವಿನಾ ಬೇರೆ ಏತಕ್ಕೂ ಅಲ್ಲ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಕೆಲವು ಇತರ ಮಂತ್ರಿಗಳೂ ಜೋಗ್, ಹಾಸನ ಮತ್ತು ಶಿವಮೊಗ್ಗ ಈ ಸ್ಥಳಗಳಿಗೆ ಸರ್ಕಾರಿ ಡ್ಯೂಟಿಗೆಂದು ಪ್ರವಾಸ ಬಂದಿದ್ದಾಗ, ಅವರ ಮುಖ್ಯ ಉದ್ದೇಶ ಸರ್ಕಾರಿ ಕೆಲಸಗಳನ್ನು ಮಾಡಬೇಕೆಂದಲ್ಲ. ಪ್ರತಿ ಪಕ್ಷದವರನ್ನು ಜನರ ಮುಂದೆ ಹೀಯಾಳಿಸುವುದಕ್ಕಾಗಿಯೂ ಮತ್ತು ಟೀಕೆ ಮಾಡುವುದಕ್ಕಾಗಿಯೂ ಬಂದಿದ್ದರು. ಆಗ ಹಳ್ಳಿಯಿಂದ ಹಳ್ಳಿಗೆ ಹೋಗಿ ಇವರು ಭಾಷಣ ಮಾಡಿದ್ದು ಇವನ್ನೇ. ಆದರೆ ನಾನು ಅವರು ಹಾಗೆ ಪ್ರಚಾರ ಮಾಡಕೂಡದು ಎಂದು ಹೇಳುವುದಿಲ್ಲ; ಮಹರಾಯರಾಗಿ ಮಾಡಿಕೊಳ್ಳಲಿ ಆದರೆ ನಾನು ಹೇಳುವುದು ಅವರ ಸ್ವಂತ ಖರ್ಚಿನಿಂದ ಆ ಕೆಲಸಕ್ಕೆ ಹೋಗಬೇಕು ಎಂದು. ಅವರು ಸರ್ಕಾರದ ಪರವಾಗಿ ಹೊರಗಡೆ ಸಂಚಾರ ಹೋದಾಗ ಸರ್ಕಾರಿ ಪರವಾದ ಕೆಲಸಗಳನ್ನು ಮಾಡಬೇಕೇ ಹೊರತು, ಇನ್ನೊಂದು ಪಾರ್ಟಿಯ ವಿಚಾರವಾಗಿ ಹೀನ ನುಡಿಗಳನ್ನು ಆಡುವುದಕ್ಕಾಗಿ ಅಲ್ಲ; ಹೀಗೆ ಮಾಡುವುದು 'ಪ್ರಜಾಪ್ರಭುತ್ವ ಸರ್ಕಾರದ ನೀತಿಯೂ ಅಲ್ಲ. ಹೀಗೆ ಇವರು ಸರ್ಕಾರಿ ಕೆಲಸಕ್ಕೆಂದು ಹೋಗಿ ಆರೀತಿ ವರ್ತಿಸಿರತಕ್ಕದ್ದು ಸಲ್ಲದು, ನ್ಯಾಯವಾದುದಲ್ಲ ಎಂದು ಹೇಳುತ್ತೇನೆ.

ನಿನ್ನೆತಾನೆ ಮಾತನಾಡುತ್ತ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು "ನನ್ನ ಜೊತೆಯಲ್ಲಿ ಹಿಂದೆ ಮುಂದೆ 4-5 ಸಾವಿರ ಜನರಿದ್ದರು. ಆಗ ನೀವು ಧೂಳಿನಲ್ಲಿ ರಸ್ತೆ ಪಕ್ಕದಲ್ಲಿ ನಿಂತಿದ್ದಿರಿ" ಎಂದು ಹೀಗೆ ಈ ಮಾನ್ಯ ಸಭೆಯ ಮಾನ್ಯ ಸದಸ್ಯರೊಬ್ಬರ ಘನತೆಯನ್ನು ಹೀಯಾಳಿಸಿ ಮಾತನಾಡುವುದು ಪ್ರಜಾಸರ್ಕಾರದ ಘನತೆಯೇ?

ಆದರೆ ನಾನು ಹೇಳಿದ್ದೇನು ? ದುಡ್ಡನ್ನು ಉಳಿಸುವುದನ್ನು ಬಿಟ್ಟು ಪ್ರತಿಯೊಂದಕ್ಕೂ ನೀವು ಹೀಗೆ ಖರ್ಚು ಮಾಡುತ್ತಿದ್ದೀರಿ; ಇದು ಆಗಬಾರದು ಎಂದು.

ಆದರೆ, ಈ ಮಂತ್ರಿವರ್ಯರುಗಳ ಪ್ರವಾಸದ ಬಗ್ಗೆ ಮಾತನಾಡುವಾಗ ನಾನು ಶಾಭಾಸ್‌ಗಿರಿ ಕೊಡುವುದು ನಮ್ಮ ಜಿಲ್ಲೆಯ ಸಚಿವರಿಗೆ. ಏತಕ್ಕೆಂದರೆ ಅವರು ಅಷ್ಟು ಹೆಚ್ಚಾಗಿ ಎಲ್ಲಿಯೂ ಪ್ರವಾಸ ಹೋಗಿಲ್ಲ.

ಅದರಲ್ಲೂ ಇವರು ತಿಂಗಳು ತಿಂಗಳಲ್ಲಿ ಮಾಡಿರತಕ್ಕ T. A. ಬಿಲ್ಲುಗಳನ್ನು ನೋಡಿದರೆ ಎದೆ ಒಡೆದು ಹೋಗುತ್ತದೆ.

ನಾನೂ ಮಂತ್ರಿಯಾಗಿದ್ದೆ, ಹಿಂದೆಯೂ ಅನೇಕರು ಮಂತ್ರಿಗಳಾಗಿದ್ದರು. ಆಗಿನ ಟೂರ್ ಪಟ್ಟಿಗಳನ್ನೂ ಬೇಕಾದರೆ ನೋಡಿ. ಇವರುಗಳು ತಿಂಗಳಿಗೆ 15 ದಿವಸ, 20 ದಿವಸ ಹೊರಗಡೆ ಟೂರಿನಲ್ಲೇ ಇರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ! ಅಷ್ಟು ಅಲ್ಲ; ಒಂದೊಂದು ಸಮಯದಲ್ಲಿ ನಾಲ್ಕೂ ಐದು ಜನ ಮಂತ್ರಿಗಳು ಒಂದು ದಿವಸವೂ ಇಲ್ಲಿ ಬೆಂಗಳೂರಿನಲ್ಲಿಲ್ಲದ ಹೊರಗೆ ಟೂರ್ ಮೇಲೆ ಹೋಗುವುದನ್ನು ಹಿಂದೆಂದೂ ನನ್ನ ಅನುಭವದಲ್ಲಿ ಕಂಡಿರಲಿಲ್ಲ. ಅದಕ್ಕೇ intensive tour ಮಾಡುತ್ತೀರಾ, ಅಥವಾ extensive tour ಮಾಡುತ್ತೀರಾ ಎಂದು ನಾನು ಒಂದು ಪ್ರಶ್ನೆ ಕೇಳಿದೆ. ಏಕೆಂದರೆ—ಟೂರ್ ಹೋಗಬೇಕೆಂಬುದು ಒಳ್ಳೆಯದು. ಆದರೆ ಒಂದು ಸ್ಥಳದಲ್ಲಿ ತಂಗಬೇಕು; ಅಲ್ಲಿ ಎಲ್ಲಾ ಜನರ ಕುಂದುಕೊರತೆಗಳನ್ನು ಕೇಳಬೇಕು; ಅವರ ಕಷ್ಟನಷ್ಟಗಳನ್ನು ಅರಿಯಬೇಕು. ಇದು intensive tour ಮಾಡುವುದರ ಉದ್ದೇಶ. ಆದರೆ ನಮ್ಮ ಮಂತ್ರಿಗಳು ಏನು ಹೇಳಿದ್ದಾರೆಂದರೆ—'It is both intensive and extensive." ಒಂದೇ ಟೂರು intensive ಮತ್ತು extensive ಎರಡು ಆಗುವುದು ಹೇಗೆ ಸಾಧ್ಯ? How can it be intensive if it is extensive, or if it is extensive, how can it be intensive? I want to know. ತಾವು ಹತ್ತು ಹನ್ನೆರಡು ದಿವಸಗಳು ಹೊರಗಡೆ, ಜೊತೆಗೆ ಐದು ಆರು ಜನ ಹೊರಗಡೆ ಒಂದೇ ಸಾರಿ ಹೋಗುತ್ತೀರಲ್ಲ! ಒಂದೇ ಸ್ಥಳದಲ್ಲಾದರೂ ಹೆಚ್ಚಿಗೆ ದಿವಸ ಇದ್ದು ಅಲ್ಲಿನ ಒಂದೊಂದು ವಿಷಯಗಳನ್ನಾದರೂ ಪರಿಶೀಲಿಸುತ್ತೀರಾ? ಅದು ಇಲ್ಲ. ಸರ್ಕಾರಕ್ಕೆ ಮಾತ್ರ ಖರ್ಚು, ಅದರಲ್ಲೂ ಈಗಿನ ಸಂದರ್ಭದಲ್ಲಿ half of our departments have been taken away by the Centre; and I say there is absolutely not much work.

ಅಲ್ಲದೆ, ಹಿಂದಿನ ಸಂಪ್ರದಾಯವೇನೆಂದರೆ, ಮಂತ್ರಿಗಳು ಟೂರ್ ಹೋಗಿ ಬಂದೊಡನೆ ಟೂರ್ ನೋಟ್ಸ್‌ನ್ನು ಪಬ್ಲಿಷ್ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ instructions ಕೊಟ್ಟು ಎಲ್ಲರಿಗೂ ಕಳುಹಿಸಿಕೊಡುತ್ತಿದ್ದರು. ಅದರ ಮೇಲೆ ಅವರುಗಳು ಕೈಕೊಂಡ ಕಾರ್ಯಗಳ ವರದಿಗಳು ಬರುತ್ತಿದ್ದುವು. ಈಗ ಅಂಥ ಟೂರ್ ನೋಟ್ಸ್ ಏನೂ ಕಾಣುವುದಿಲ್ಲ! ನಾನೇ ಎಷ್ಟೋ ಸಾರಿ ವಿಚಾರಿಸಿದ್ದೇನೆ. ಒಂದೂ ಬರುತ್ತಿಲ್ಲ! ಇಂಥ ಟೂರ್ ಮಾಡಿದರೆ, ಆ ಟೂರ್ ನೋಟ್ಸ್‌ನ್ನು ತಾನೇ ಮಾಡುವುದು ಹೇಗೆ! ಈ ರೀತಿಯಾಗೆಲ್ಲಾ ಮಾಡುವುದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಏಕೆಂದರೆ ನನಗೆ ಇವುಗಳ ಸ್ವಂತ ಅನುಭವ ಇದೆ.

Sri A. G. RAMACHANDRA RAO.—At no time were the tour notes published.

Sri J. MOHAMED IMAM.—Every tour note must be printed and it must be distributed and if they have got tour notes, they can supply the same within a day when the printed copies are ready. I would also submit that hereafter all tour notes may be submitted to this House. I have no

(SRI J. MOHAMED IMAM.)

objection to their touring. It is necessary but they must know when to tour. One Minister can tour the entire District within a week. There is no need for any other Minister, because he can collect the entire information.

Another thing I want to point out is, they must curtail their tours to save money and labour and also to save local officers and to see that the local officers carry on their normal activities which they will not do when the Minister visits their place very often.

We must uphold democracy and see that the prestige of the Ministry and the Ministers is maintained. But we find that the principles of democracy are often over-ruled and this House is not taken into confidence in many important matters. There is a tendency on the part of the Government to behave regardless of the wishes of the people. They take their decisions without consulting this House and afterwards they want to have commitments; they want again to incur expenditure on idealogical schemes and then come forward and ask the House to vote for enhanced expenditure.

The third thing I am very particular is that the Ministers' names should be blemishless and should not be a subject of talk and gossip. Of late it has been the practice to make allegations and counter-allegations against Ministers. Ministers come and go and we are not given the reason. Two or three such instances have happened. I am not entering into merit or demerit, but I am particular about the constitutional practice and about traditions to be established. When a Minister resigns, it is the privilege of this House to know why he resigned, or the House should satisfy itself if a Minister resigns on a certain issue, whether it is a single Minister that has to resign or the whole Cabinet that has to resign, because there is what you call individual responsibility and collective responsibility. But this House which we represent is not made aware of the reasons which influence the Minister or Ministry to take this extreme step. That is one thing, that is, disregarding the democratic principles.

Again I come to various allegations made against Ministres. "Caeser's wife must be above suspision." That is an established practice. In other democratic countries when a Minister's name is under a cloud, his *bona fides* are doubted, it is always the practice to set up a Committee at once to enquire into the allegations, say a Committee of this House in which the Opposition will have predominence, but here what is the procedure and what is the practice that is being adopted? It is entirely against the principles of democracy and it has been agitating the public mind and it is proving what is called a positive nuisance and it is a common public talk. To-day we find allegations and counter allegations. In all such matters Government should take a bold step and a definite step. The practice adopted by the Ministry, the present tactic, is not at all acceptable and is always open to doubt. In one instance, one of the Ministers himself went to the spot and made a report to this House. When this report was submitted to this House, it was the duty of the Government to see that that report was placed before the House and the opinion of the members sought. But the Government did not do so. The report might be correct. I do not doubt it, but there are sections of people who say that if the same report had come from an independent quarter, it would have been more creditable and people would have believed it. So after the report we find there are again moves and counter-moves and it is gathering flame. It is very humiliating to us, it is very humiliating that our Ministers and Ministry are the subject of talk and common gossip. You must take us into confidence. An independent

tribunal must be set up. The practice adopted by Sri Kadidal Manjappa is not in consonance with the spirit of democracy. He said he went with the members of his own party. Members of the other party go of their own accord. You give one version and the the other gives another version. You become the subject of talk. So on all such occasions it is the duty of the Government and especially of the Chief Minister to appoint an independent Committee to enquire into the allegations and give to this House a fair and unbiassed opinion. That must be the practice, a democratic practice which should be observed in future and I am sure the Chief Minister will take that step and appoint an independent Committee consisting of members from various sections to make enquiry and submit a report to this House.

Another thing I want to submit is this. While spending the money, a certain amount of efficiency aslo is needed. You must see that the money allotted to you is spent wisely and properly. There should not be a waste. On this issue also there are controversies. I am not doubting anybody's character or anybody's sincerity. When the facts are before you, you must take necessary steps. I may allude to the incident of copper wire. In that case it has been alleged by a certain section that the Government did incur, did sustain a loss of nearly rupees one lakh.

Sri K. HANUMANTHAIYA.—You have asked questions. The answers will be furnished.

Sri J. MOHAMED IMAM.—If the answers are not there, it is not my mistake. As I understand it, the Government has to sustain a loss of one lakh of rupees on this ground; if they had tarnsported the same material by train, it would have cost them about one anna per pound; by giving it in the form of a tender, they have to pay five annas per pound. It is said that for every pound, Government sustain a loss of four annas. Those are the allegations—whether true or not—aimed against the Government. In all such cases, following the British Parliamentary system and democratic principles, is it not the duty of the Government to clear the doubt of the public? Your silence gives rise to all sorts of doubts. You are spoiling your own fair name. This is not the only allegation. Every Minister has got or is under some suspicion. For example—I do not talk in a personal way—I am referring to the matter of Mattedoddi. The Chief Minister was pleased to make a certain statement last time. He said that he would abide by the decision of this House at that time. I welcomed that decision and I thought he would place that matter before this House. Till now that matter has not come before the House. With great regret and humility, I have to say that there are some allegations made. It may be from interested quarters or disinterested quarters against each Minister. Government should not keep quiet. As soon as an allegation is made against the Government or a Minister, they should take necessary steps to see that the allegations are refuted. On the other hand if these allegations are proved to be true and if these are correct, they do not deserve to be in office.

Sri K. HANUMANTHAIYA.—What is the allegation made against me?

Sri J. MOHAMED IMAM.—That you helped one Sri Nanjappa, your brother, to get fifty acres of land. That is one allegation.

Sri K. HANUMANTHAIYA.—That is on the fact of it untrue. If you do not want to believe me, I cannot help.

Sri J. MOHAMED IMAM.—He said at the last meeting that he would abide by the decision of the House.

Sri A. BHEEMAPPA NAIK.—Where did he say?

ಶ್ರೀ ಜೆ. ಮಹಮದ್ ಇಮಾಂ.—'ಈ ಸಭೆಯವರ ಮುಂದಿಟ್ಟು ಅವರು ಹೇಳಿದ ಹಾಗೆ ಕೇಳುತ್ತಾ ಹೋಗುತ್ತೇನೆ' ಎಂದು ಹೇಳಿದ್ದಾರೆ. Please see the proceedings.

Mr. SPEAKER.—Any other point.

Sri J. MOHAMED IMAM.—In the fair name of administration and to enhance the prestige of our Ministers and to enhance the prestige of the State it is but necessary that the Government take necessary steps to see that in all such matters they establish democratic principles. On account of these things, I submit that I have to oppose the Appropriation Bill.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾಮಂತ್ರಿಗಳು).—ಸ್ವಾಮಿ, ಈ ಮಧ್ಯಾಹ್ನದಿಂದ ಚರ್ಚೆಯಾದ ವಿಷಯಗಳಲ್ಲಿ ಬಹುಭಾಗ ಕೆಲವು ದಿವಸಗಳಿಂದ ನಡೆಯುತ್ತಿರುವ ಖೋತಾ ನಿರ್ಣಯಗಳ ಮತ್ತು ಬಡ್ಜೆಟ್ಟಿನ ಮೇಲೆ ನಡೆದ ಚರ್ಚೆಯಲ್ಲೇ ಬಂದು ಪ್ರತಿಯೊಂದು ವಿಷಯವೂ ಕೂಲಂಕಷವಾಗಿ ಚರ್ಚೆಯಾಗಿ, ಬಂದ ಆಕ್ಷೇಪಣೆಗಳಿಗೆ ಉತ್ತರ ಕೊಟ್ಟಿದೆ. ಆದುದರಿಂದ ಪುನಃ ಅದೇ ವಿಷಯಗಳನ್ನು ಪ್ರಸ್ತಾಪ ಮಾಡುವುದು ಅನಾವಶ್ಯಕವೆಂದು ನನ್ನ ಭಾವನೆ. ಹಾಗೂ ಕೆಲವು ಬೇರೆ ದೃಷ್ಟಿಕೋಣಗಳಿಂದ ಹೊಸ ವಿಷಯಗಳು ಬಂದ ಹಾಗೆ ಕಾಣುತ್ತದೆ. ಅವುಗಳಿಗೆ ಉತ್ತರ ಕೊಡಬೇಕಾಗುತ್ತದೆ.

ಮೊದಲನೆಯದಾಗಿ, ಕೇಂದ್ರ ಸರ್ಕಾರ ನಮ್ಮಿಂದ ಹಣವನ್ನು ದೋಚಿಕೊಂಡು ಹೋಗುತ್ತಿದ್ದಾರೆ. ನಮ್ಮ ದೇಶಕ್ಕೆ ಇದಕ್ಕೆ ಪ್ರತಿಫಲವಾಗಿ ಯಾವುದೂ ದೊರಕುತ್ತಿಲ್ಲ, ಇದರಿಂದ ನಾವು ಅಧೋಗತಿಗೆ ಹೋಗುತ್ತಿದ್ದೇವೆ ಎಂಬ ಅರ್ಥ ಬರುವ ರೀತಿಯಲ್ಲಿ ಮಾತನಾಡಿದರು. ಇದನ್ನು ಕೇಳಿ ಆಶ್ಚರ್ಯವಾಗುತ್ತದೆ. ಇದು ಚರಿತ್ರೆ ಮತ್ತು ಸತ್ಯಾಂಶಗಳಿಗೆ ವಿರೋಧವಾಗಿದೆ. ಕೇಂದ್ರ ಪಾರ್ಲಿಮೆಂಟಿನ ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಹೌಸ್ ಆಫ್ ದಿ ಪೀಪಲ್ ಎರಡು ಸಭೆಗಳಿಗೂ ನಮ್ಮ ಸಂಸ್ಥಾನದಿಂದ ಪ್ರತಿನಿಧಿಗಳಾಗಿ ಹೋಗಿ ಕೇಂದ್ರ ಸರ್ಕಾರದ ಕಾನೂನುಗಳನ್ನು ಮಾಡುವುದಕ್ಕೆ ಜವಾಬ್ದಾರಿ ವಹಿಸಿ ಅವರು ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಮಂತ್ರಿಮಂಡಲದಲ್ಲಿಯೂ ಕೂಡ ಹಿಂದೆ ನಮ್ಮ ಸಂಸ್ಥಾನದ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಕೆ. ಸಿ. ರೆಡ್ಡಿಯವರೂ, ಈ ಸಭೆಯ ಸದಸ್ಯರಾಗಿದ್ದ ಶ್ರೀಮಾನ್ ಎಂ ವಿ. ಕೃಷ್ಣಪ್ಪನವರೂ ಇದ್ದಾರೆ. ಶ್ರೀಮಾನ್ ರೆಡ್ಡಿಯವರು ಇಲ್ಲಿ ಐದು ವರ್ಷಗಳ ಕಾಲ ಮುಖ್ಯ ಮಂತ್ರಿಗಳಾಗಿದ್ದು ದೇಶದಲ್ಲಿ ಒಳ್ಳೆಯ ಹೆಸರು ಪಡೆದಿದ್ದು ಅಲ್ಲಿಗೆ ಹೋದ ತಕ್ಷಣ ಮೈಸೂರು ದೇಶವನ್ನು ದೋಚುವುದಕ್ಕೆ ಸಹಾಯ ಮಾಡುತ್ತಿದ್ದಾರೆಂದರೆ, ಅದು ಅರ್ಥವಿಲ್ಲದ ಮಾತು. ಕೇಂದ್ರ ಸರ್ಕಾರ ಮತ್ತು ನಾವು ಒಂದು ಕಾಮನ್‌ವೆಲ್ತ್ ಆಗಿ ದೇಶದ ಕೆಲಸ ಕಾರ್ಯಗಳನ್ನು ನಾವೆಲ್ಲರೂ ಸೇರಿ ನಿರ್ವಹಣೆ ಮಾಡಬೇಕೆಂದು ಹೇಳುವಾಗ, ಈ ಸಮಯದಲ್ಲಿ ಈ ಒಂದು ದ್ವೇಷಪೂರಿತವಾದ ಭಾವನೆಯನ್ನು ದೇಶದ ಮುಂದಿಡುವುದು ಉಚಿತವಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ದ್ವೇಷವಿಲ್ಲ.

Mr. SPEAKER.—The word used by one Member was 'ದ್ರೋಹ.'

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಹೇಳುವುದಿಲ್ಲ, ಸದ್ಭಾವನೆಯಿಂದ ವರ್ತಿಸುತ್ತೇವೆಂದು ಭರವಸೆ ಕೊಟ್ಟರೆ ಯಾವ ತೊಂದರೆಯೂ ಇಲ್ಲ, ನಾನು ಮುಂದುವರಿಯುತ್ತೇನೆ ಆ ಒಂದು ಭಾವನೆ ಸರಿ ಹೋದರೆ ಬಾಕಿ ಎಲ್ಲ ವಿಷಯಗಳೂ ಸರಿ ಹೋಗುತ್ತವೆಂದು ನನ್ನ ನಂಬಿಕೆ.

ಮಂತ್ರಿಮಂಡಲದಲ್ಲೇ ಮಿತ ವ್ಯಯವನ್ನು ಆದರ್ಶವಾಗಿ ಮಾಡಿ ತೋರಿಸಬೇಕು, ಅದು ಎಲ್ಲಿಯೂ ಕಾಣಲಿಲ್ಲವೆಂದು ಹೇಳಿದರು. ಅಂಕಿ ಅಂಶಗಳಿಂದ ಸ್ವಲ್ಪ ವಿಮರ್ಶೆ ಮಾಡೋಣ. ಉದಾಹರಣೆಗೆ 1940ರಿಂದ 1952ರ ವರೆಗೆ ತೆಗೆದುಕೊಳ್ಳೋಣ. 1940ನೆಯ ಇಸವಿಯಲ್ಲಿ ದಿವಾನರವರೊಬ್ಬರಿಗೆ ಕೊಡುತ್ತಿದ್ದ ಸಂಬಳವನ್ನು ಈಗ ಆರು ಜನ ಮಂತ್ರಿಗಳಿಗೂ ಕೊಡುತ್ತಿಲ್ಲ. ಆಗ ಆ ಒಬ್ಬರು ಅಧಿಕಾರಿಗಳಿಗೆ ಆರೇಳು ಸಾವಿರ ರೂಪಾಯಿಗಳನ್ನು ಒಂದು ತಿಂಗಳು ಸಂಬಳಕ್ಕೆ ಕೊಡುತ್ತಿದ್ದರು. ಇನ್ನು ಪ್ರಯಾಣಭತ್ಯದ ಕಡೆ ನೋಡುವುದಾದರೆ, 1939-40 ರಲ್ಲಿ ಒಂದು ಗ್ಯಾಲನ್ ಪೆಟ್ರೋಲಿಗೆ 14 ಆಣೆ 3 ಕಾಸಿತ್ತು. ಈಗ 2-14-0 ಬೆಲೆ ಇದೆ. ಮೈಲೇಜು ಆಗ ಮೈಲಿಗೆ ಎಂಟಾಣೆಯಿತ್ತು, ಮೊದಲನೆಯ 50 ಮೈಲಿಗೆ ಹತ್ತಾಣೆಯಿತ್ತು. ಹೊಸ ಮಂತ್ರಿಮಂಡಲ ಬಂದ ತಕ್ಷಣ ಅದನ್ನು ಮೊದಲನೆಯ 50 ಮೈಲಿಗೆ ಎಂಟಾಣೆ ಆ ಮೇಲೆ 5-4-0 ಮಾಡಿದರು.

Mr. SPEAKER.—I think the same rate was in force during the previous Ministry.

ಶ್ರೀ ಎ. ಜಿ. ರಾಮಚಂದ್ರರಾವ್.—ಹೋದ ಮಂತ್ರಿಮಂಡಲದವರೇ ಕಡಮೆ ಮಾಡಿದ್ದರು, ನಾವು ಇನ್ನೂ ಕಡಮೆ ಮಾಡಿದ್ದೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಆಗಲೂ ಹೀಗೆಯೇ ಇತ್ತು.

The rate of Dearness Allowance was Rs. 10 per day as against Rs. 25 now. During the days of our Ministry also, for the first 50 mileages, was Re. 0-8-0 per mile, and above 50 miles, the rate was two-thirds of Re. 0-8-0.

Sri A. G. RAMACHANDRA RAO.—I am speaking from facts. Eight annas for the first 50 miles and Re. 0-5-4 beyond that mileage. That is what we are drawing.

ಒಂದುವೇಳೆ ಹಾಗಿದ್ದರೂ ಆಗ ಒಂದು ಗ್ಯಾಲನ್ ಪೆಟ್ರೋಲ್ ಬೆಲೆ 0-14-3 ಇತ್ತು, ಈಗ ಅದೇ 2-14-0 ಇದೆ; ಮೂರರಷ್ಟಾಗಿದೆ, ಒಪ್ಪುತ್ತೀರಾ?

ಶ್ರೀ ಜೆ. ಮಹಮ್ಮದ್ ಇಮಾಂ.—14 ಆಣೆ ಅಲ್ಲ, ಒಂದೂವರೆ ಒ ದೂಮುಕ್ಕಾಲು ರೂಪಾಯಿ ಇತ್ತು.

ಶ್ರೀ ಎ. ಜಿ ರಾಮಚಂದ್ರರಾವ್.—ಆಗಿನ ಒಬ್ಬ ದಿವಾನರ ಸಂಬಳ ಈಗ ಆರುಜನ ಮಂತ್ರಿಗಳಿಗೆ ಖರ್ಚಾಗುತ್ತಿದೆ, ಇದನ್ನಾದರೂ ಒಪ್ಪುತ್ತೀರಾ?

ಶ್ರೀ ಜೆ. ಮಹಮ್ಮದ್ ಇಮಾಂ.—ಈಗಲೂ ಎಲ್ಲಾ ಲೆಕ್ಕಹಾಕಿದರೆ ಒಬ್ಬೊಬ್ಬರಿಗೆ ಮೂರು ಸಾವಿರ ರೂಪಾಯಿ ಖರ್ಚಾಗುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಹೀಗೆ ಯಾವುದಕ್ಕೂ ಒಪ್ಪುವುದಕ್ಕಾಗುವುದಿಲ್ಲವೆಂದರೆ, ಹೇಳುವುದು ಕಷ್ಟ!

ಇನ್ನು ಮಂತ್ರಿಗಳ ಮೇಲೆ ಬರುವ ಆಕ್ಷೇಪಣೆಗಳು ಅಥವಾ ದೂರುಗಳ ವಿಷಯ. ಸಾಮಾನ್ಯವಾಗಿ ಜವಾಬ್ದಾರಿ ಪತ್ರಿಕೆಗಳೂ, ಅನೇಕ ದಿವಸಗಳಿಂದ ಸೇವೆ ಮಾಡುತ್ತಿರುವ ಪತ್ರಿಕೆಗಳೂ ಈರೀತಿ ಆಕ್ಷೇಪಣೆ ಮಾಡುವುದಕ್ಕೆ ಹೋಗುತ್ತಿಲ್ಲ. ಹೀಗೆ ಟೀಕೆಮಾಡುತ್ತಿರುವುವು ಯಾವುವೆಂದರೆ, ಈಹೊತ್ತು ಹುಟ್ಟಿ, ನಾಳೆ ಅಥವಾ ಒಂದು ವಾರದಲ್ಲಿ ಸಾಯುವ—ಕೆಲವರು ಮೂರು ಕಾಸು ಪತ್ರಿಕೆಗಳೆನ್ನುತ್ತಾರೆ, 6 ಕಾಸು ಪತ್ರಿಕೆಗಳೆನ್ನುತ್ತಾರೆ, ಆ ದರ್ಜೆಗೆ ನಾನು ಇಳಿಯುವುದಿಲ್ಲ, ಈ ಪತ್ರಿಕೆಗಳು ಎಷ್ಟುದಿವಸ ಬದುಕುತ್ತವೆಂದು ಗೊತ್ತಾಗುವುದಿಲ್ಲ—ಇಂಥ ಪತ್ರಿಕೆಗಳು. ಈ ಸರ್ಕಾರ ಬಂದಮೇಲೆ freedom of press ಬಂದಿದೆ ಎಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಬಾಯಿಗೆ ತಡೆಬಡೆಯಿಲ್ಲದೆ, yellow press ಎಂದು ಹೇಳುತ್ತಾರೆ, ಆ ರೀತಿಯಲ್ಲಿ ಅವರು ಪ್ರತಿದಿವಸವೂ ಮಾಡತಕ್ಕ ಪ್ರಚಾರ, ಈ ಸ್ವಾತಂತ್ರ್ಯದ ದುರುಪಯೋಗ. ಈರೀತಿಯಲ್ಲಿ ನಮ್ಮ ದೇಶ ಮುಂದುವರಿಯಬಾರದು, ಅನಾಯಕತ್ವ ನಮ್ಮ ದೇಶದಲ್ಲಿ ಬರಬೇಕು ಎಂಬ ರೀತಿಯಲ್ಲಿ ಹೇಳುವ ಮಾತುಗಳಿಗೆಲ್ಲಾ ಗಮನಕೊಟ್ಟು ಅವುಗಳಿಗೆ ಉತ್ತರಕೊಡುವ ಕೆಲಸಕ್ಕೆ ಹೋಗುವುದು, ಅದಕ್ಕಾಗಿ ದುಡಿಯುವುದು ನ್ಯಾಯವೆ ಎಂದು ಕೇಳುತ್ತೇನೆ. ಇದು ನ್ಯಾಯವಲ್ಲ. ತಮ್ಮ ಪ್ರೀತಿವಿಶ್ವಾಸವನ್ನು ಪಡೆದಿರುವ ಮಂತ್ರಿಗಳು ಯಾವುದೇ ವಿಚಾರದಲ್ಲಾದರೂ ಉತ್ತರಕೊಟ್ಟರೆ ಅದನ್ನು ಒಪ್ಪುವುದಿಲ್ಲವೆಂದರೆ ಏನು ಮಾಡುವುದು? ಅದು ಬರಿಯ ಒಂದು suspicion of the guilty mind and not of the true mind. When a reply has been made by an Hon'ble Minister of this House, if he does not say the truth, you can take him to task. There are a hundred ways of doing this. But still to nurse a grievance or a continuous suspicion is neither gentlemanly nor proper for an Hon'ble Member of this House. I do not want to dilate further.

ಒಂದು ವಿಷಯವನ್ನು ಈ ಸಭೆಯ ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ, ತಕ್ಷಣ ಕಾರ್ಯಕ್ರಮ ತೆಗೆದುಕೊಂಡು ಅದಕ್ಕೆ ಜವಾಬ್ದಾರಿ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರೆ, ಅದನ್ನು ನಂಬಬೇಕು. ಅವರು ಹೇಳುವುದರಲ್ಲೇನಾದರೂ ಹೆಚ್ಚುಕಡಮೆಯಿದ್ದರೆ punish ಮಾಡಿ. ಇದನ್ನೂ ಬಿಟ್ಟು ಅವರು ಹೇಳುವುದನ್ನೂ ನಂಬದೇಹೋದರೆ ಇನ್ನೇನು ಮಾಡುವುದು?

Sri J. MOHAMED IMAM.—It is a question of the public believing it or not. Without entering into the merits of the case, I said about the talk.

ಶ್ರೀ ಎ. ಜಿ. ರಾಮಚಂದ್ರರಾವ್.—ಆದುದರಿಂದ ಇಂಥ ಕ್ಷುಲ್ಲಕ ಅಭಿಪ್ರಾಯಗಳಿಗೆ ಮನಸ್ಸನ್ನು ಕೊಟ್ಟು ಅವುಗಳನ್ನು ಪ್ರಚಾರಮಾಡುವುದಕ್ಕೆ ಯಾರೂ ಹೋಗಬಾರದು. ಒಂದು ದರ್ಜೆ, ಒಂದು ಮಟ್ಟ ಮತ್ತು ಒಂದು ಗೌರವ ಇತ್ಯಾದಿಗಳನ್ನು ಪ್ರತಿಪಾದಿಸುವಂಥ ಒಂದು ಸರ್ಕಾರ ಕೊಡತಕ್ಕ ಹೇಳಿಕೆಗಳಲ್ಲಿ ಜನರು ನಂಬಿಕೆಯಿಡಬೇಕು. ವಿರೋಧಿಸುವುದಕ್ಕೂ ಒಂದು ಘನತೆ, ಗಾಂಭೀರ್ಯ ಇದೆ. ಹಾಗೆ ಸರ್ಕಾರದವರು ಕೊಡತಕ್ಕ ಹೇಳಿಕೆಗಳನ್ನು ನಂಬದೆ ಇರುವುದಕ್ಕಾಗಲಿ ಅಥವಾ ಅಂಥ ಒಂದು ಅಪನಂಬಿಕೆಯಮೇಲೆ ಅವುಗಳನ್ನು ವಿರೋಧಿಸುವುದಕ್ಕೆ ಆಗಲಿ ಅದಕ್ಕೆ ಅಂಥ ಮಹತ್ವ ಕಾರಣಗಳೂ ಇರಬೇಕು. ಹಾಗಿಲ್ಲದೆ ಇಂಥ ಕ್ಷುಲ್ಲಕ ಅಭಿಪ್ರಾಯಗಳಿಗೆ ಪ್ರೊಪಗ್ಯಾಂಡ ಮಾಡುವುದಕ್ಕೆ ಹೋಗುವುದು ಸರಿಯಲ್ಲವೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆ ತಪ್ಪುಗಳಿದ್ದರೆ ಸರಿಪಡಿಸಲು ತಮಗೆ ಬೇರೆ ಮಾರ್ಗಗಳಿವೆ.

Sri J. MOHAMED IMAM.—We question the procedure.

Sri A. G. RAMACHANDRA RAO.—I am exactly indicating the procedure.

Sri H. SIDDAVEERAPPA.—The difficulty is how to understand you. You have become a problem to us. (Laughter).

ಶ್ರೀ ಎ. ಜಿ. ರಾಮಚಂದ್ರರಾವ್.—ಆದುದರಿಂದ ನಾನು ಮೊದಲೇ ಹೇಳಿದಂತೆ, ತಾವು ತಮ್ಮ ದೃಷ್ಟಿಕೋಣವನ್ನು ಬದಲಾಯಿಸಬೇಕು. ಅದನ್ನು ಸರಿಯಾದ ಅಳತೆಕೋಲಿನಿಂದ ಸರಿಪಡಿಸಬೇಕು.

Sri B. HUTCHE GOWDA.—The Hon'ble Minister is certifying his colleague's doing.

Sri A. G. RAMACHANDRA RAO.—He is not merely my colleague, but a respected Leader of the House. You must respect him. And if he should go wrong, there are a hundred and other ways to rectify him and not to disbelieve and go on saying about it.

ಅನಂತರ Principles of Democracy ವಿಚಾರ ಪ್ರಸ್ತಾಪಿಸಿದ್ದಾರೆ. ಆದರೆ ನನಗೆನ್ನಿಸುತ್ತದೆ: democracyಗೆ ವಿರೋಧವಾಗಿದ್ದ ವಿರೋಧಪಕ್ಷದ ನಾಯಕರಿಂದ ಈದಿವಸ ನಾವು ಆ ತತ್ವಗಳನ್ನು ಕಲಿತುಕೊಳ್ಳಬೇಕಾಗಿಲ್ಲ.

Sri J. MOHAMED IMAM.—I take it as an insult. I am never against democracy. I am always for democracy. It is an uncharitable remark.

Mr. SPEAKER.—The difficulty is that the Hon'ble Minister has to close at 5 P.M. He has not got much time. I feel it is better that there is no interruption.

Sri A. G. RAMACHANDRA RAO.—I congratulate the Hon'ble Member on his avowed allegiance to the faith of democracy and we are one with him.

ಮತ್ತೆ ಈ ಪ್ರಜಾಸರ್ಕಾರದ ಯಾವಯಾವ ಕಾನೂನುಗಳಿವೆಯೋ ಮತ್ತು ಇದರ ಅಧಿಕಾರಿಗಳು, ಹಕ್ಕು

(SRI A. G. RAMACHANDRA RAO).

ಬಾಧ್ಯತೆಗಳು ಮತ್ತು ಇತರ ಎಲ್ಲಾ ತತ್ವಗಳು ಏನೇನಿರುತ್ತವೆಯೋ ಅವುಗಳನ್ನೆಲ್ಲಾ ಕಾಪಾಡಿಕೊಂಡು ಬರಲು ವಿರೋಧಪಕ್ಷದವರಿಗೆ ಎಷ್ಟು ಆಸಕ್ತಿ ಇದೆಯೋ ಅವುಗಳೆಲ್ಲವನ್ನೂ ಕಾಪಾಡಿಕೊಂಡು ಬರಲು ನಮಗೂ ಅಷ್ಟೇ ಶ್ರದ್ಧೆ ಮತ್ತು ಆಸಕ್ತಿಗಳಿರುತ್ತವೆಂದು ಹೇಳುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಕಾಂಗ್ರೆಸ್ ಸರ್ಕಾರ್ ಬಂದರೂ ಪ್ರಜೆಗಳಿಗೇನೂ ಸಾರ್ಥಕವಾಗಲಿಲ್ಲವಲ್ಲ?

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು. 70 ವರ್ಷಗಳ ಆಗುಹೋಗುಗಳಿಗೆಲ್ಲಾ ಈ ಕಾಂಗ್ರೆಸ್ಸೇ ಜವಾಬ್ದಾರಿಯೆಂದು ಹೇಳಿದರೆ ಅದಕ್ಕೆ ನಾನೇನು ಹೇಳಲಿ?

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಾಗಾದರೆ ಇದಕ್ಕೆಲ್ಲ ಜನರು ಜವಾಬ್ದಾರರೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಜನರೇ ಕಾಂಗ್ರೆಸ್ಸನ್ನು ಚುನಾಯಿಸಿದ್ದು. ಈ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಮೇಲೆ, ಸ್ತ್ರೀಯರಿಗೆ ಸಮಾನ ಪ್ರಾತಿನಿಧ್ಯ ದೊರಕಿಸಿಕೊಡಲಾಗಿದೆ, ಅಸ್ಪೃಶ್ಯತೆಯ ನಿವಾರಣೆ, ಪಾಂಚವಾರ್ಷಿಕ ಯೋಜನೆ, ಹೀಗೆ ಹೇಳುತ್ತಾ ಹೋದರೆ ಒಂದು ದೊಡ್ಡ ಪಟ್ಟಿಯೇ ಆಗುತ್ತದೆ, ಆದರೆ ಅದಕ್ಕೆಲ್ಲಾ ಈಗ ವೇಳೆಯಿಲ್ಲ. ಹೀಗೆ ನಾವು ಎಷ್ಟೋ ಕೆಲಸಗಳನ್ನು ಮಾಡಿದ್ದರೂ ನಮ್ಮನ್ನು ಜರಿಯುತ್ತಿದ್ದೀರಿ. ಇವೆಲ್ಲಾ ನಮ್ಮ ದೇಶದ ದೌರ್ಭಾಗ್ಯ. ನಾನು ಇದಕ್ಕಾಗಿ ಯಾರನ್ನೂ ಆಕ್ಷೇಪಣೆಮಾಡುವುದಕ್ಕೆ ಹೋಗುವುದಿಲ್ಲ. ಈಗಲಾದರೂ ನಾವೆಲ್ಲರೂ ಒಂದು ಗೃಹದಲ್ಲಿರುವವರಂತೆ ವರ್ತಿಸೋಣ. ನೀವೂ ನಾವೂ ಎಲ್ಲರೂ ಪ್ರಾಮಾಣಿಕತೆಯಿಂದ ನಡೆಯೋಣ. ದೇಶಾಭಿವೃದ್ಧಿಯ ದೃಷ್ಟಿಯಿಂದ ತಾವು ತಮ್ಮ ವಿರೋಧಾಭಿಪ್ರಾಯಗಳನ್ನು ವಾಪಸ್ಸು ತೆಗೆದುಕೊಂಡು ಈ ಬಿಲ್ಲಿಗೆ ತಾವೆಲ್ಲರೂ ಸಹಕಾರ ನೀಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—The question is:

"That the Mysore Apporpriation (No. 2) Bill, 1953, be taken into consideration."

The motion was adopted.

Mr. SPEAKER.—Clauses 2 and 3. The question is:

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. SPEAKER.—Schedule. The question is:

"That the Schedule stand part of the Bill."

The motion was adopted.

The Schedule was added to the Bill.

Mr SPEAKER.—Clause 1. The question is:

"That Clause 1 stand part of the Bill."

The motion was adopted

Clause 1 was added to the Bill.

Mr. SPEAKER.—Title and Preamble. The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri A. G. RAMACHANDRA RAO.—Sir, I move:

"That the Mysore Appropriation (No. 2) Bill, 1953, be passed."

Mr. SPEAKER.—The question is:

"That the Mysore Appropriation (No. 2) Bill, 1953, be passed."

The motion was adopted.

MYSORE ELEMENTARY EDUCATION AND MOTOR VEHICLES TAXATION AND TOLLS AMENDMENT BILL, 1953.

Motion to consider.

Sri K. HANUMANTHAIYA (Chief Minister).—Sir, I move:

"That the Mysore Elementary Education and Motor Vehicles Taxation and Tolls (Amendment) Bill, 1953, as reported by the Select Committee, be taken into consideration."

Mr. SPEAKER.—Motion moved:

"That the Mysore Elementary Education and Motor Vehicles Taxation and Tolls (Amendment) Bill, 1953, as reported by the Select Committee, be taken into consideration."